'ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು'

(ಶಾಸನಶಾಸ್ತ್ರ ವಿಭಾಗದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ಸುರೇಶ ಕರಿಬಸಪ್ಪ ಹಾನಗಲ್ಲ

ಮಾರ್ಗದರ್ಶಕರು

ಡಾ. ಕೆ.ಜಿ.ಭಟ್‌ಸೂರಿ

ಸಹಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯-೨೦೧೦

'ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು'

(ಶಾಸನಶಾಸ್ತ್ರ ವಿಭಾಗದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ಸುರೇಶ ಕರಿಬಸಪ್ಪ ಹಾನಗಲ್ಲ

ಮಾರ್ಗದರ್ಶಕರು

ಡಾ. ಕೆ.ಜಿ.ಭಟ್‌ಸೂರಿ

ಸಹಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯-೨೦೧೦

ಮಾರ್ಗದರ್ಶಕರ ಪ್ರಮಾಣ ಪತ್ರ

"ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಶ್ರೀ. ಸುರೇಶ ಕರಿಬಸಪ್ಪ ಹಾನಗಲ್ಲ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಡಾ. ಕೆ.ಜಿ.ಭಟ್‌ಸೂರಿ
ಸಹಪ್ರಾಧ್ಯಾಪಕರು ಹಾಗೂ
ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 15-9-2010

ಸಂಶೋಧಕರ ಪ್ರಮಾಣ ಪತ್ರ

"ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು" ಎಂಬ ನಿಬಂಧವನ್ನು ಸಹಪ್ರಾಧ್ಯಾಪಕರಾದ ಡಾ.ಕೆ.ಜಿ.ಭಟ್‌ಸೂರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 15/9/2010

(ಸುರೇಶ ಕರಿಬಸಪ್ಪ ಹಾನಗಲ್ಲ)
ಸಂಶೋಧಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ ೧.

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ಸ್ವರೂಪ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಉದ್ದೇಶ

ಭಾರತೀಯ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನರ್ ರಚಿಸುವಲ್ಲಿ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದಾಗಿದೆ. ಇತಿಹಾಸ ಪೂರ್ವಯುಗದಿಂದ ಎಲ್ಲ ಘಟ್ಟಗಳ ಕುರುಹುಗಳನ್ನು ಒಳಗೊಂಡಿರುವ ನಾಡು ಕನ್ನಡನಾಡು, ಕರ್ನಾಟಕದ ಇತಿಹಾಸವನ್ನು ಪುನರ್‌ರಚಿಸುವಲ್ಲಿ ಪುರಾತತ್ವ ಅವಶೇಷಗಳ ಪಾತ್ರ ಬಹುಮುಖ್ಯ ಪುರಾತತ್ವ ಅವಶೇಷಗಳಾದ ದೇವಾಲಯಗಳು ಮತ್ತು ಶಾಸನಗಳು ಬಹಳ ಮಹತ್ತರವಾದ ಪಾತ್ರವನ್ನುವಹಿಸಿವೆ. ಪ್ರಸ್ತುತ ನನ್ನ ಈ ಅಧ್ಯಯನ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿಗೆ ಸೀಮಿತಗೊಂಡಿದ್ದು ಈ ಅವಶೇಷಗಳನ್ನು ಒಂದೆಡೆ ಕಲೆಹಾಕಿ ಅಧ್ಯಯನ ಮಾಡುವುದೇ ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಈ ದಿಸೆಯಲ್ಲಿ ಮಾಡಿದ ಪ್ರಯತ್ನವೇ ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು.

ಪೂರ್ವಾಧ್ಯಯನ

ಹುಬ್ಬಳ್ಳಿಯ ಬಗ್ಗೆ ಬಿ.ಷೇಕ ಅಲಿಯವರ ''Hubli city A study on urban Econmic life'' ಎಂಬುದು ೧೯೭೨-೧೯೭೧ರಲ್ಲಿ ಪ್ರಕಟವಾದ ಮೊದಲ ಕೃತಿಯಾಗಿದೆ ಹಾಗೆಯೇ ಕಲಬುರ್ಗಿ ಎಂ.ಎಂ. ಹುಬ್ಬಳ್ಳಿ ತಾಲೂಕಿನ ಶಾಸನ ಸೂಚಿ ೧೯೭೫, ಕ.ವಿ.ವಿ. ಧಾರವಾಡ, ಧಾರವಾಡ ಜಿಲ್ಲಾ ಗೆಜೆಟಿಯರ್, ಕರ್ನಾಟಕ ಸರಕಾರ, ೧೯೯೫ (ಸಂ) ಸೂರ್ಯನಾಥ ಕಾಮತ್, ಹಾಗೆಯೇ ಬಿ.ಜಯಮ್ಮ, ಧಾರವಾಡ ಜಿಲ್ಲೆಯ ಪುರಾತತ್ವ, ೨೦೦೭ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಮತ್ತು ಎಸ್.ಕೆ.ಪೂಜಾರ್ ಹುಬ್ಬಳ್ಳಿ ಒಂದು ಸಾಂಸ್ಕೃತಿಕ ಅಧ್ಯಯನ ೨೦೦೯, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ರು.ಮ.ಷಡಕ್ಷರಯ್ಯ, ಬಿ.ಜಯಮ್ಮ, ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು ೨೦೦೭, ಆರ್.ಗೋಪಾಲ್ (ಸಂ) ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಸಿ. ಮಹಾದೇವ ಕರ್ನಾಟಕ ದೇವಾಲಯಕೋಶ ಧಾರವಾಡ ಜಿಲ್ಲೆ ೨೦೦೬, ಮತ್ತು ಹಾಗೆಯೇ ಇತಿಹಾಸ ದರ್ಶನದಲ್ಲಿ ಕೆಲವೊಂದು ಲೇಖನಗಳು ಹೊರಬಂದಿದೆ.

ನಮ್ಮ ನಾಡಿನ ಪ್ರತಿಯೊಂದು ಚಿಕ್ಕ ಚಿಕ್ಕ ಪ್ರದೇಶಗಳ ಆಳವಾದ ಸಂಶೋಧನಾತ್ಮಕ ಅಧ್ಯಯನದ ಅವಶ್ಯಕತೆಯನ್ನು ಎತ್ತಿ ಹಿಡಿಯುವುದು ನಮ್ಮ ಉದ್ದೇಶ ಈ ದಿಶೆಯಲ್ಲಿ ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು ಎಂಬ ವಿಷಯವನ್ನು ಸಂಶೋಧನೆಗಾಗಿ ಆಯ್ದುಕೊಳ್ಳಲಾಗಿದೆ.

ಕರ್ನಾಟಕದಲ್ಲಿ ಉದಯಿಸಿದ ಪ್ರತಿಯೊಂದು ಸಾಮ್ರಾಜ್ಯ ಮನೆತನ, ಪಾಳೆಗಾರರು ಹಾಗೂ ನಾಯಕ ಮನೆತನಗಳ ಪ್ರಭಾವ ಕರ್ನಾಟಕದ ಪ್ರತಿಯೊಂದು ಭಾಗದಲ್ಲೂ ಆಗಿರುತ್ತವೆ. ಅಲ್ಲದೆ ಭಾರತವನ್ನು ಆಕ್ರಮಿಸಿದ ವಿದೇಶಿಯರಾದ ಟರ್ಕರು, ಷಾಹಿಗಳು, ನವಾಬರ ಪ್ರಭಾವ ಕೂಡ ನಮ್ಮ ನಾಡಿನ ಮೂಲೆ ಮೂಲೆಯಲ್ಲಾಗಿದ್ದು. ಪ್ರಸ್ತುತ ಈ ಎಲ್ಲ ಕಾಲಘಟ್ಟಗಳಲ್ಲಿ ಹುಬ್ಬಳ್ಳಿ ಸ್ಪಂದನೆಯ ಹೆಜ್ಜೆ ಗುರುತುಗಳನ್ನು ಗುರುತಿಸುವುದು ಸಂಶೋಧನಾ ವಿಷಯದ ಮುಖ್ಯ ಉದ್ದೇಶವಾಗಿದೆ.

ಕನ್ನಡನಾಡಿನ ಇತಿಹಾಸದಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದವರು, ಕೆಳದಿನಾಯಕರು, ಷಾಹಿಗಳು ಮೊಘಲರು ಮುಂತಾದ ಪ್ರಮುಖ ರಾಜಮನೆತನಗಳನ್ನು ಗುರುತಿಸಬಹುದಾಗಿದೆ. ಈ ಎಲ್ಲಾ ಕಾಲಘಟ್ಟಗಳ ಬೆಳಕಿನಲ್ಲಿ ಹುಬ್ಬಳ್ಳಿಗೆ ಸೀಮಿತ ಮಾಡಿಕೊಂಡು ಅದರ ಮೇಲಾದ ಪರಿಣಾಮಗಳನ್ನು ಚರ್ಚಿಸಿ ಒಂದೆಡೆ ಸೆರೆಹಿಡುವ ದೃಷ್ಟಿಯಿಂದ ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು ಎಂಬ ಸಂಶೋಧನಾ ವಿಷಯ ಆಯ್ದುಕೊಳ್ಳಲಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಹುಬ್ಬಳ್ಳಿಯನ್ನು ಪ್ರಾದೇಶಿಕವಾಗಿ ನೋಡಿದಾಗ ಒಂದು ವ್ಯಾಪಾರ ಕೇಂದ್ರವಾಗಿ, ಪ್ರಸ್ತುತ ಈ ಅಧ್ಯಯನ ಈ ತಾಲೂಕಿನ ಪ್ರಾಚೀನ ದೇವಾಲಯಗಳನ್ನು ಮತ್ತು ಶಾಸನಗಳಿಗೆ ಸೀಮಿತವಾಗಿದೆ. ಪ್ರತಿಯೊಂದು ವಿಷಯಕ್ಕೂ ತನ್ನದೇಯಾದ ಹಿನ್ನೆಲೆ ಹಾಗೂ ವ್ಯವಸ್ಥಿತವಾಗಿ ಬೆಳೆದು ಬಂದ ಪ್ರಾಚೀನತೆ ಇರುತ್ತದೆ. ಇದರ ಸುತ್ತ ಬಿಚ್ಚಿಕೊಳ್ಳುವ ಘಟನೆಗಳನ್ನು ದಾಖಲೆಗಳ ಹಿನ್ನೆಲೆಯಲ್ಲಿ ವೈಜ್ಞಾನಿಕವಾಗಿ ಚರ್ಚಿಸಬೇಕಾಗುತ್ತದೆ. ಹುಬ್ಬಳ್ಳಿಯ ಐತಿಹ್ಯದೊಂದಿಗೆ ಶಾಸನಗಳನ್ನು ಮತ್ತು ದೇವಾಯಗಳ ಮಾಹಿತಿಯನ್ನು ಇಲ್ಲಿ ಒಂದೆಡೆ ಸೆರೆಹಿಡಿದು ಮಾಡಿದ ಪ್ರಯತ್ನ ಇದಾಗಿದೆ.

ಪ್ರಾಚೀನ ಕಾಲದಲ್ಲಿ ಹುಬ್ಬಳ್ಳಿ ಎಂಬ ಪದ ಎಂದು ಜನ್ಮಪಡೆಯಿತು. ಹುಟ್ಟಿ ಬೆಳೆದು ಬಂದ ಐತಿಹ್ಯ, ರಾಜಕೀಯ, ಸಾಮಾಜಿಕ, ಧಾರ್ಮಿಕ, ಆಚರಣೆಗಳು ಹಾಗೂ ಆರ್ಥಿಕ ಅಭಿವೃದ್ಧಿ ಶಾಸನಗಳ ವೈವಿಧ್ಯತೆಗಳಲ್ಲಿ ದಾನಶಾಸನ, ವೀರಗಲ್ಲು, ಮಾಸ್ತಿಗಲ್ಲು, ನಿಷಧಿ ಇತರೆ ಸ್ಮಾರಕ ಬಗ್ಗೆ ಹಾಗೆಯೇ ದೇವಾಲಯಗಳ ವೈವಿಧ್ಯತೆಗಳು, ಮೂರ್ತಿಶಿಲ್ಪಗಳು, ಮತ್ತು ಅವುಗಳ ಶೈಲಿ ಮುಂತಾದ ವಿಷಯಗಳನ್ನು ದಾಖಲಾತ್ಮಕವಾಗಿ ಹಿಡಿದಿಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

೧.೩. ವಿಧಾನ :

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಮತ್ತು ವಿಷಯ ವಿಶ್ಲೇಷಣೆಯಲ್ಲಿ ಹಲವಾರು ವಿಧಿ-ವಿಧಾನಗಳನ್ನು ಅನುಸರಿಸಲಾಗಿದೆ. ಪ್ರಾರಂಭದಲ್ಲಿ ಹುಬ್ಬಳ್ಳಿಗೆ ಸಂಬಂಧಿಸಿದ ಇತಿಹಾಸ, ಶಾಸನಗಳು ಮತ್ತು ದೇವಾಲಯಗಳ ಕುರಿತಾದ ಪ್ರಕಟವಾಗಿರುವ ಕೃತಿ, ಲೇಖನ ಮತ್ತು ಪ್ರಬಂಧಗಳನ್ನು ಪರಿಶೀಲಿಸಿ ಒಟ್ಟಿಗೆ ಅಕಾರಾಧಿಯಲ್ಲಿ ಆಕರ ಕೃತಿಗಳ ಪಟ್ಟಿಯನ್ನು ತಯಾರಿಸಿಕೊಳ್ಳಲಾಗಿದೆ.

ತರುವಾಯ ಈ ತಾಲೂಕಿನ ಮೂವತ್ತೊಂದು ಗ್ರಾಮಗಳಲ್ಲಿ ಕ್ಷೇತ್ರಕಾರ್ಯಕೈಗೊಂಡು ಶಾಸನಗಳು, ದೇವಾಲಯಗಳು, ಶಿಲ್ಪ ಸ್ಮಾರಕಗಳ ವಿವರಣೆಗಳನ್ನು ಪೂರ್ವದಾಖಲಾತಿಗಳೊಂದಿಗೆ ಸಂದರ್ಭಾನುಸಾರ ಉಲ್ಲೇಖಿಸಿ ಕೆಲವು ಛಾಯಾ ಚಿತ್ರಗಳನ್ನು ಸಂಗ್ರಹಿಸಲಾಗಿದೆ.

ಪ್ರಾಚೀನ ದೇವಾಲಯಗಳ ವಾಸ್ತುರಚನೆಯನ್ನು ಅಧ್ಯಯನ ಮಾಡಿ ಅವುಗಳ ತಳವಿನ್ಯಾಸ ಮತ್ತು ಮಾದರಿ ಶೈಲಿಗಳನ್ನು ಗುರುತಿಸಿ ಅವುಗಳ ಗುಣಲಕ್ಷಣಗಳನ್ನು ತಿಳಿದು ಅವುಗಳ ವಾಸ್ತು ರಚನೆಯನ್ನು ಗರ್ಭಗೃಹದಿಂದ ಮುಖಮಂಟಪದವರೆಗೆ ಹಾಗೆಯೇ ಅಧಿಷ್ಠಾನದಿಂದ ಶಿಖರದ ವರೆಗಿನ ಹೊರ ಭಾಗಗಳನ್ನು ಪರಿಶೀಲಿಸಿ ಅವುಗಳಲ್ಲಿರುವ ವಿವಿಧ ಉಪಾಂಗಗಳ ವಾಸ್ತು ಲಕ್ಷಣಗಳನ್ನು ತಿಳಿದು ಅಡಿಟಿಪ್ಪಣಿ ಮಾಡಿಕೊಳ್ಳಲಾಯಿತು. ಹಾಗೆಯೇ ದೇವಾಲಯಗಳಲ್ಲಿ ಮತ್ತು ಅವುಗಳ ಪರಿಸರದಲ್ಲಿ ಕಂಡುಬಂದ ಶಿಲ್ಪಗಳನ್ನು ಮಾಧ್ಯಮ, ಶೈಲಿ ಕಾಲಮಾನ ಪ್ರತಿಮಾ ಲಕ್ಷಣಗಳ ಹಿನ್ನೆಲೆಯಲ್ಲಿ ಗಮನಿಸಿ ವಿಶ್ಲೇಷಿಸಿದೆ.

೧.೪. ಅಧ್ಯಯನ ಸ್ವರೂಪ :

ಅಧ್ಯಯನದ ವಿಧಾನದಲ್ಲಿ ಗಮನಿಸಿದಂತೆ ವಿಷಯಗಳ ಆಧಾರದಲ್ಲಿ ಪ್ರಸ್ತುತ ಸಂಶೋಧನೆಯನ್ನು ಆರು ಅಧ್ಯಾಯಗಳಂತೆ ವಿಂಗಡಿಸಲಾಗಿದೆ. ಮೊದಲನೆಯ ಅಧ್ಯಾಯ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನವನ್ನು ಒಳಗೊಂಡಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಅವಶ್ಯಕತೆ ಉದ್ದೇಶ ವ್ಯಾಪ್ತಿ ಮತ್ತು ವಿಧಾನ ಪೂರ್ವಾಧ್ಯಯನಗಳ ಸಮೀಕ್ಷೆ, ಪೂರಕ ಆಕರ ಸಾಮಾಗ್ರಿ ಯಾವ ರೀತಿಯಲ್ಲಿ ಉಪಯುಕ್ತವಾಗಿದೆ ಎಂಬುದನ್ನು ಚರ್ಚಿಸಲಾಗಿದೆ.

ಎರಡನೇ ಅಧ್ಯಾಯ 'ಐತಿಹಾಸಿಕ ಹಿನ್ನೆಲೆ'ಯಲ್ಲಿ ಸ್ಥಳೀಯ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಹುಬ್ಬಳ್ಳಿಯ ಪದನಿಷ್ಪತ್ತಿ ಅದರ ರಾಜಕೀಯ ಚರಿತ್ರೆ ಸಾಮಾಜಿಕ ಸ್ಥಿತಿಗತಿಗಳು, ಸ್ತ್ರೀಯರ ಸ್ಥಾನಮಾನ ಶಿಕ್ಷಣ ಪದ್ಧತಿ ಸಾಮಾಜಿಕ ಕಾರ್ಯಗಳ ಬಗ್ಗೆ ಆರ್ಥಿಕ ಸ್ಥಿತಿಗತಿಗಳಲ್ಲಿ ಕೆರೆಕಟ್ಟೆಗಳು ನಾಣ್ಯಪದ್ಧತಿ. ತೂಕ, ಅಳತೆ ಪದ್ಧತಿ, ಧಾರ್ಮಿಕ ಸ್ಥಿತಿಗತಿಗಳಲ್ಲಿ ಹಿಂದೂ, ಜೈನ, ವೀರಶೈವ ಧರ್ಮಗಳ ಒಂದು ಬೆಳವಣಿಗೆಯನ್ನು ಈ ಅಧ್ಯಾಯದಲ್ಲಿ ಅಳವಡಿಸಲಾಗಿದೆ.

ಮೂರನೆಯ ಅಧ್ಯಾಯ ಶಾಸನಗಳ ವೈವಿಧ್ಯತೆ ಶಾಸನ ಅರ್ಥ, ಸ್ವರೂಪ, ಪೂರ್ವಾಧ್ಯಯನಗಳು ಹಾಗೆಯೇ ಶಾಸನಗಳ ವೈವಿಧ್ಯತೆಯಲ್ಲಿ ದಾನಶಾಸನಗಳು ವೀರಗಲ್ಲು ಮಾಸ್ತಿಗಲ್ಲು, ನಿಷಧಿಗಲ್ಲು, ಶಾಸನಗಳಾಗಿ ವಿಂಗಡಿಸಿ ಅವುಗಳಲ್ಲಿರುವ ವಿಷಯಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯವೇ ದೇವಾಲಯಗಳ ವಾಸ್ತುಶಿಲ್ಪ. ಈ ಅಧ್ಯಾಯ ಕನ್ನಡ ನಾಡಿನ ದೇವಾಲಯಗಳ ನಿರ್ಮಾಣ ಪ್ರಾರಂಭ ಬೆಳವಣಿಗೆ ಪ್ರಭೇದಗಳ ಕುರಿತಾಗಿದೆ. ಇಲ್ಲಿ ಶೈವ, ವೈಷ್ಣವ, ಮತ್ತು ಜೈನ ಶಾಕ್ತದೇವಾಲಯಗಳೆಂದು ವಿಭಾಗಿಸಿ ಅವುಗಳ ತಿರ್ಯನ್ಮುಖ ಹಾಗೂ ಊರ್ಧ್ವಮುಖ ವಾಸ್ತುರಚನೆಯನ್ನು ಅವುಗಳಲ್ಲಿರುವ ವಿವಿಧ ಉಪಾಂಗಗಳ ವಾಸ್ತು ಲಕ್ಷಣಗಳನ್ನು ಗುರುತಿಸಲಾಗಿದೆ.

ಐದನೆಯ ಅಧ್ಯಾಯ ಮೂರ್ತಿ ಶಿಲ್ಪ ಅಧ್ಯಾಯನದಲ್ಲಿ ಹಿನ್ನೆಲೆಯಾಗಿ ಭಾರತೀಯ ಮತ್ತು ಕನ್ನಡ ನಾಡಿನ ಸಂದರ್ಭಗಳಲ್ಲಿ ಶಿಲ್ಪಗಳ ಉಗಮ ಮತ್ತು ವಿಕಾಸದ ಪರಿಚಯದೊಂದಿಗೆ ಹುಬ್ಬಳ್ಳಿ ತಾಲೂಕಿನಲ್ಲಿ ಕಂಡುಬರುವ ಬೌದ್ಧ, ಶೈವ, ವೈಷ್ಣವ, ಜೈನ, ಮೊದಲಾದ ಧರ್ಮಗಳ ಪಂಥಗಳ ಅಥವಾ ಶಿಲ್ಪಗಳ ಪ್ರತಿಮಾಲಕ್ಷಣಗಳು, ಮತ್ತು ಸ್ಮಾರಕಗಲ್ಲುಗಳ ವೈಶಿಷ್ಟ್ಯತೆಯನ್ನು ಹೇಳಲಾಗಿದೆ.

ಆರನೆಯ ಅಧ್ಯಾಯ ಸಮಾರೋಪದಲ್ಲಿ ಒಟ್ಟಾರೆ ಐದು ಅಧ್ಯಾಯಗಳಲ್ಲಿ ಕಂಡುಬಂದ ಮಹತ್ವದ ಅಂಶಗಳನ್ನು ಸೆರೆಹಿಡಿಯಲಾಗಿದೆ. ಪ್ರಬಂಧದ ಕೊನೆಯಲ್ಲಿ ಅನುಬಂಧವಿದೆ. ಅನುಬಂಧದಲ್ಲಿ ಹುಬ್ಬಳ್ಳಿ ತಾಲೂಕಿನ ನಕ್ಷೆ ಆಕರಗ್ರಂಥಗಳು. ದೇವಾಲಯ, ಮೂರ್ತಿಶಿಲ್ಪಗಳ ಮಹತ್ವದ ಛಾಯಾಚಿತ್ರಗಳ ಪಟ್ಟಿಯನ್ನು ಅಳವಡಿಸಲಾಗಿದೆ.

ಅಧ್ಯಾಯ ೨

ಐತಿಹಾಸಿಕ ಹಿನ್ನೆಲೆ

ಅಧ್ಯಾಯ ೨

ಐತಿಹಾಸಿಕ ಹಿನ್ನೆಲೆ

೨.೧. ಪೀಠಿಕೆ

ಕರ್ನಾಟಕವನ್ನು ಆಳಿದ ಪ್ರಮುಖ ರಾಜವಂಶಗಳಲ್ಲಿ ಶಾತವಾಹನರಿಂದ ಮೈಸೂರು ಅರಸರವರೆಗೆ ಆಳ್ವಿಕೆ ಮಾಡಿದ್ದಕ್ಕೆ ಈ ಪ್ರದೇಶದಲ್ಲಿ ಕುರುಹುಗಳು ಸಾಕ್ಷಿಯಾಗಿವೆ. ಹಾಗೂ ಅವರಿಗೆ ಅಧೀನರಾಗಿದ್ದ ಮಾಡಳಿಕ ಅರಸರುಗಳು ಇದಕ್ಕೆ ಹೊರತೇನಿಲ್ಲ. ಯಾರೇ ಆಳ್ವಿಕೆ ಮಾಡಿದರೂ ರಾಜತ್ವದ ಗುರಿ ಹೆಚ್ಚಿನ ಮಟ್ಟಿಗೆ ಒಂದೇ ಆಗಿರುತ್ತಿತ್ತು. ಶಾತವಾಹನರು, ಬಾದಾಮಿ ಚಲುಕ್ಯರು ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು ವಿಜಯನಗರ ಅರಸರು, ಮರಾಠರು, ನವಾಬರು, ಕಿತ್ತೂರುದೇಸಾಯಿ ಇನ್ನು ಮುಂತಾದ ಅರಸಮನೆತನಗಳು ಹುಬ್ಬಳ್ಳಿ ತಾಲೂಕಿನಾದ್ಯಂತ ತಮ್ಮ ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು ಎಂಬ ವಿಷಯವನ್ನು ಶಾಸನ ಆಧಾರಗಳಿಂದ ತಿಳಿಯಬಹುದು.

ಹುಬ್ಬಳ್ಳಿಯು ಒಂದು ಆಗ್ರಹಾರವಾಗಿದ್ದು, ಇಲ್ಲಿ ಎಲೆ, ಹಸಿರು, ತೋಟಗಳಿಂದ ಸಮೃದ್ಧವಾಗಿದ್ದ ಕಾರಣ ಎಲೆಯ ಪೂರ್ವದಹಳ್ಳಿ ಎಂಬ ಅನ್ವರ್ಥನಾಮ ಹುಬ್ಬಳ್ಳಿಗೆ ಬಂದಿರುವುದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಹಾಗೆಯೇ ಇದು ಬಯಲುಗಳಿಂದ ಹಾಗೂ ನೀರಾವರಿ ಕೂಡಿದ ಪ್ರದೇಶವಾಗಿದೆ.

೨.೨. ರಾಜಕೀಯ ಇತಿಹಾಸ

ಪೂರ್ವ ಇತಿಹಾಸಕಾಲ :

ಇಲ್ಲಿ ಆದಿಶಿಲಾಯುಗದ ಉಪಕರಣಗಳು ದೊರೆತಿದ್ದು ಇವುಗಳು ಕ್ವಾರ್ಟರ್ಝೈಟ್ ಶಿಲೆಯಿಂದ ಮಾಡಿದ್ದಾಗಿದೆ. ಮಚ್ಚು ಕೈಕೊಡಲಿ, ದೀರ್ಘವೃತ್ತಾಕಾರದ ಕೈಕೊಡಲಿ ಇಲ್ಲಿ ದೊರೆತಿವೆ. ಹೀಗೆಯೇ ''ಆಹಾರ ಸಂಗ್ರಹ'' ಹಂತದಲ್ಲಿ ಆದಿಮಾನವ ಕುರುಹುಗಳು ಹುಬ್ಬಳ್ಳಿ ತಾಲೂಕಿನಾದ್ಯಂತ ಕಂಡುಬರುತ್ತವೆ. ಎಂದು ಶ್ರೀನಿವಾಸ ಪಾಡಿಗಾರ ಅವರ ಅಭಿಪ್ರಾಯಪಡುತ್ತಾರೆ[೧]

ಇತಿಹಾಸ ಕಾಲ

ಮೌರ್ಯರು ಮತ್ತು ಶಾತವಾಹನರು :

ಉತ್ತರ ಕರ್ನಾಟಕ ಪ್ರದೇಶಕ್ಕೆ ಕುಂತಲದೇಶ ಎಂದು ಕರೆಯಲಾಗಿದೆ. 'ಮೋರಿ'ಎಂದರೆ ಅಂಗಡಿಗಳು ಎಂದು ಕರೆಯಲಾಗುವ ಕೆಲವು ಶಿಲಾ ಸಮಾಧಿಗಳ ಆಧಾರದಿಂದ ಹುಬ್ಬಳ್ಳಿ ತಾಲೂಕಿನಲ್ಲಿ ಮೌರ್ಯರು ಇದ್ದರು ಎಂಬ ಆಧಾರ ಸಾಲದು ಎಂದು ಇತಿಹಾಸ ತಜ್ಞರು ಅಭಿಪ್ರಾಯ. ಮೌರ್ಯರ ಅವಸಾನದ ಕಾಲದಲ್ಲಿ ದಕ್ಷಿಣಾಪಥದಲ್ಲಿ ಶಾತವಾಹನರು ಸ್ವತಂತ್ರರಾದರು. ಇವರ ಕಾಲದಲ್ಲಿ ವ್ಯಾಪಾರಕ್ಕೆ ಬಹಳಷ್ಟು ಮಹತ್ವ ಬಂದಿತಲ್ಲದೇ ಅನೇಕ ಸಂಖ್ಯೆಯಲ್ಲಿ ನಗರಗಳು ಅಸ್ತಿತ್ವಕ್ಕೆ ಬಂದವು. ದಕ್ಷಿಣ ಭಾರತದಲ್ಲಿ ಇವರ ಕಾಲವನ್ನು ಪ್ರಥಮ ನಗರೀಕರಣ ಕಾಲ ಎಂದು ಅಭಿಪ್ರಾಯ ಪಡಲಾಗಿದೆ.[೪]

ಬನವಾಸಿ ಕದಂಬರು : (ಕ್ರಿ.ಶ. ೩೨೫-೫೪೦)

ಧಾರವಾಡ ಜಿಲ್ಲೆಯ ಬಹುಭಾಗವು ಕದಂಬರ ಆಡಳಿತಕ್ಕೆ ಸೇರಿತ್ತು. ಧಾರವಾಡ ಜಿಲ್ಲೆಯಲ್ಲಿ ಹಾನಗಲ್ಲ ಕದಂಬರ ೧೦ ಶಾಸನಗಳನ್ನು ಮತ್ತು ಗೋವೆ ಕದಂಬರ ೫೯ ಶಾಸನಗಳು ಲಭ್ಯವಾಗಿದ್ದು ಇವುಗಳು ಹಾನಗಲ್ ಹುಬ್ಬಳ್ಳಿ ಕಲಘಟಗಿ, ಕುಂದಗೋಳ ತಾಲೂಕಿನಾದ್ಯಂತ ಲಭ್ಯವಾಗಿವೆ[೫]

ಬಾದಾಮಿ ಚಲುಕ್ಯರು : (ಕ್ರಿ.ಶ. ೫೪೦-೭೫೭)

ಬಾದಾಮಿ ಚಲುಕ್ಯರ ಅರಸರಾಥ ಒಂದನೇ ಪುಲಕೇಶಿಯಿಂದ ಎರಡನೇ ಕೀರ್ತಿವರ್ಮನ ಆಳ್ವಿಕೆಯವರೆಗೆ ಶಿಲಾಶಾಸನಗಳು ಮುಖ್ಯ ಆಕರಗಳಾಗಿ ಇಲ್ಲಿ ದೊರೆತಿವೆ. ಕ್ರಿ.ಶ. ೫೪೩ರಲ್ಲಿ ಮೊದಲನೇ ಪುಲಕೇಶಿಯು ಬಾದಾಮಿಯಲ್ಲಿ ಕೋಟೆಯನ್ನು ನಿರ್ಮಿಸಿ ಅಶ್ವಮೇಧಾದಿ ಯಾಗವನ್ನು ಮಾಡುವದರೊಂದಿಗೆ ಚಲುಕ್ಯ ಸಾಮ್ರಾಜ್ಯಕ್ಕೆ ಅಡಿಗಲ್ಲನ್ನಿಟ್ಟನು. ಕದಂಬರ ಮಾಂಡಲಿಕರಾಗಿದ್ದ ಸೇಂದ್ರಕರು ಚಾಲುಕ್ಯರನ್ನ ಸೇರಿಸಿಕೊಂಡರು. ಹುಬ್ಬಳ್ಳಿ ತಾಲೂಕಿನ ಶಿರಗುಪ್ಪಿಯ ಶಿಲಾಶಾಸನದಲ್ಲಿ ಶ್ರೀವಲ್ಲಭಿಬಾಣಸತ್ತಿ ಅಥವಾ ಶ್ರೀವಲ್ಲಭ ಬಾಣಶಕ್ತಿ ಸೇಂದ್ರಕನು ಮುಳಗುಂದವನ್ನು ಆಳುತ್ತಿದ್ದುದು ಹಾಗೂ ಕುಂದ ಸತ್ತಿ ಸೇಂದ್ರಕನು ಸಿರುಗುಪ್ಪಿಯನ್ನ ಆಳುತ್ತಿದ್ದ ವಿಷಯ ಇಲ್ಲಿನ ಶಾಸನದಲ್ಲಿದೆ.[೬] ಒಂದನೇ ಪುಲಕೇಶಿಯ ಸಾಮಂತರು ಮತ್ತು ಸೇಂದ್ರಕ ಕಾಲದ ಸಾಮಂತರು[೭] ಹುಬ್ಬಳ್ಳಿ, ನೀಲಗುಂದ, ಗದಗ, ಶಿರಹಟ್ಟಿ, ತಾಲೂಕುಗಳ ಪ್ರದೇಶಗಳನ್ನು ಆಳುತ್ತಿದ್ದರು ಎಂದು ಇಲ್ಲಿನ ಶಾಸನಗಳಿಂದ ಹೇಳಬಹುದಾಗಿದೆ.

ಮಳಖೇಡದ ರಾಷ್ಟ್ರಕೂಟರು : (ಕ್ರಿ.ಶ ೭೫೭-೯೭೩)

ಕ್ರಿ.ಶ. ೭೫೭ರಲ್ಲಿ ಬಾದಾಮಿ ಚಲುಕ್ಯರ ಸಾರ್ವಭೌಮತ್ವವನ್ನು ಕೊನೆಗಾಣಿಸಿ ದಂತಿದುರ್ಗನು ರಾಷ್ಟ್ರಕೂಟ ಮನೆತನವನ್ನು ಸ್ಥಾಪಿಸಿದನು. ಧಾರವಾಡ ಜಿಲ್ಲೆಯಲ್ಲೇ ಅಮೋಘವರ್ಷನಿಗೆ ಸಬಂಧಿಸಿದ ಶಾಸನಗಳೇ ಅತಿಹೆಚ್ಚು ದೊರೆತಿವೆ. ನಂತರ ಗೋವಿಂದ, ೩ನೇ ಕೃಷ್ಣ ೩ನೇ ಇಂದ್ರ, ೨ ಅಮೋಘವರ್ಷ, ೪ ನೇ ಗೋವಿಂದ, ೩ನೇ ಕೃಷ್ಣ, ಖೊಟ್ಟಿಗ ಮುಂತಾದವರ ಶಾಸನಗಳು ಹುಬ್ಬಳ್ಳಿ ಹಾಗೂ ಸಮೀಪದ ಧಾರವಾಡದಲ್ಲಿ ದೊರಕಿವೆ.[೮]

ಮಳಖೇಡದ ರಾಷ್ಟ್ರಕೂಟ ಕಾಲದ ವೀರಗಲ್ಲೊಂದು ಗಬ್ಬೂರಿನಲ್ಲಿ ಇದ್ದು ಅದೇ ಮನೆತನದ ನಿತ್ಯವರ್ಷ ಮತ್ತು ಅಮೋಘವರ್ಷ, ಕೊಟ್ಟಿಗದೇವನ ಶಾಸನಗಳು ಅದರಗುಂಚಿ, ಸುಳ್ಳ, ಕೋಳಿವಾಡ, ಹುಬ್ಬಳ್ಳಿಯಲ್ಲಿ ಇವೆ. ಕೊಟ್ಟಿಗ ದೇವನ ಕಾಲದಲ್ಲಿ ಆತನ ಮಾಂಡಲೀಕನಾದ ಗಂಗವಂಶದ ದೊರೆ. ಮಾರಸಿಂಗನು ಬೇರೆ ನಾಡುಗಳ ಸಹಿತ ಬೆಳವಲಮೂನ್ನೂರನ್ನ ಆಳುತ್ತಿದ್ದನೆಂದು ಅದರಗುಂಚಿ ಮತ್ತು ಕೋಳಿವಾಡದ ಶಾಸನಗಳಿಂದ ತಿಳಿದುಬರುತ್ತದೆ.[೯]

ಕಲ್ಯಾಣ ಚಾಲುಕ್ಯರು :

ಕರ್ನಾಟಕದ ಪಶ್ಚಿಮ ಚಾಲುಕ್ಯ ಮನೆತನದ ೧೦ ಶಾಸನಗಳು ಹುಬ್ಬಳ್ಳಿ ತಾಲೂಕಿನಲ್ಲಿ ದೊರಕುತ್ತವೆ. ಕ್ರಿ.ಶ. ೧೦೭೩ ಬ್ಯಾಹಟ್ಟಿ ಶಾಸನ್ ಮತ್ತು ಕ್ರಿ.ಶ. ೧೦೪೨ರ ಬೆಳ್ಳಿಗಟ್ಟಿ ಶಾಸನ್ ಚಕ್ರವರ್ತಿ ಜಯಸಿಂಹ ಜಗದೇಕಮಲ್ಲದೇವನನ್ನು ಪ್ರಸ್ತಾಪಿಸುತ್ತದೆ. ಜಯಸಿಂಹ ಜಗದೇಕಮಲ್ಲ ದೇವನ ಮಗನಾದ ತ್ರೈಲೋಕ್ಯಮಲ್ಲ ಅಹವವಲ್ಲದೇವನ ಶಾಸನಗಳು ಇಂಗಳಹಳ್ಳಿ ಮತ್ತು ಬಂಢಿವಾಡದಲ್ಲಿ ದೊರೆತಿವೆ. ಭುವನೈಕ್ಯಮಲ್ಲಿ ಸೋಮದೇವನ ೩ ಶಾಸನಗಳು ಮಂಟೂರ ಮತ್ತು ನೂಲ್ವಿಯಲ್ಲಿ ದೊರೆತಿವೆ.[೧೦]

ಭುವನೈಕ್ಯಮಲ್ಲಿ ಸೋಮಯ್ಯದೇವನ ತಮ್ಮನಾದ ೬ನೇ ವಿಕ್ರಮಾದಿತ್ಯನ ಆಳ್ವಿಕೆಯು ಇತ್ತೆಂಬುದು ಹುಬ್ಬಳ್ಳಿ ಶಿರಗುಪ್ಪಿ, ಕುರಡಿಕೇರಿ, ಅಮರಗೋಳದಲ್ಲಿ ದೊರೆತ ಶಾಸನಗಳಿಂದ ತಿಳಿಯುತ್ತದೆ. ಕ್ರಿ.ಶ. ೧೧೧೧ ಹುಬ್ಬಳ್ಳಿ ಇನ್ನೊಂದು ಶಾಸನದಲ್ಲಿ ವಿಕ್ರಮ ಚಕ್ರವರ್ತಿಯ ಪಿರಿಯರಸಿ ಮಲಯವತಿ ಮಹಾದೇವಿ ಹುಬ್ಬಳ್ಳಿ ಅಗ್ರಹಾರವನ್ನ ಆಳುತ್ತಿದ್ದ ವಿಷಯ ಉಲ್ಲೇಖಿಸುತ್ತದೆ.[೧೧]

ಕಲ್ಯಾಣಿ ಕಲಚೂರ್ಯರು :

ಶೈವ ಮತಾವಲಂಬಿಯಾದ ಕಲಚೂರಿ ಮನೆತನದ ಲಾಂಛಾನವು ಸಹ ನಂದಿಯೇ ಆಗಿತ್ತು. ಪ್ರಸ್ತುತ ಕಳಚೂರ್ಯರ ಹೆಚ್ಚಿನ ಶಾಸನಗಳು ಈ ಪ್ರದೇಶದಲ್ಲಿ ದೊರೆತಿವೆ. ಅತಿ ಹೆಚ್ಚಿನ ಶಾಸನಗಳು, ಬಿಜ್ಜಳದ ಕಾಲಕ್ಕೆ ಸೇರಿದವುಗಳಾಗಿವೆ. ಒಟ್ಟಾರೆ ಕಲಚೂರಿಗಳ ಶಾಸನಗಳು ಹುಬ್ಬಳ್ಳಿ ಬ್ಯಾಹಟ್ಟಿ, ನೂಲ್ವಿ, ಕಟ್ನೂರು, ಬುಡರಸಿಂಗಿಯಲ್ಲಿ ಸಿಗುತ್ತವೆ.[೧೨]

ದೇವಗಿರಿಯ ಯಾದವರು ಮತ್ತು ಸೇವುಣರು (ಕ್ರಿ.ಶ. ೧೧೭೩-೧೩೧೮)

ರಾಷ್ಟ್ರಕೂಟರ ಕಾಲದಲ್ಲಿ ಮಾಂಡಲೀಕರಾಗಿದ್ದ ಸೇವುಣ ದೊರೆಗಳು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಮಹಾಮಂಡಳೇಶ್ವರರಾಗಿ ಸ್ವತಂತ್ರ ಸಾರ್ವಭೌಮರಾಗಿ ಅಧಿಕಾರ ಚಲಾಯಿಸಿದುದು ಕ್ರಿ.ಶ. ೧೧೭೩ರ ಕಾಲಾವಧಿಯಿಂದಲೇ ಎಂಬ ವಿಷಯ ಶಾಸನಾಧಾರಗಳಿಂದಲೇ ತಿಳಿದುಬರುತ್ತದೆ.[೧೩] ಸೇವುಣ ಮನೆತನದಲ್ಲಿ ೩೦ ಕ್ಕೂ ಹೆಚ್ಚು ಅರಸರು ಆಳ್ವಿಕೆಮಾಡಿದ್ದು ಅವರಲ್ಲಿ ೫ನೇ ಬಿಲ್ಲಮ ಮತ್ತು ೩ನೇ ಸಿಂಘನಂತಹ

ರಾಜರು ಪ್ರಸಿದ್ಧವಾಗಿದ್ದು ಅವರ ಆಳ್ವಿಕೆಯ ಕಾಲದ ಶಾಸನಗಳು ಮುಳಗುಂದನಾಡು ಸೇರಿದಂತೆ ಬೆಳ್ವಲ ಪ್ರಾಂತ್ಯದಲ್ಲಿ ಲಭ್ಯವಾಗಿವೆ.

ದೇವಗಿರಿ ಯಾದವ ವಂಶದ ಚಕ್ರವರ್ತಿ ಸಿಂಘಣದೇವರಸನ ಆಳ್ವಿಕೆಯನ್ನು ಹೇಳುವ ಕ್ರಿ.ಶ. ೧೨೩೫ರ ಒಂದು ಶಾಸನ ಬ್ಯಾಹಟ್ಟಿಯಲ್ಲಿ ಇದೆ. ಅದೇ ರಾಜವಂಶದ ರಾಮಚಂದ್ರ ದೇವನ ಆಳ್ವಿಕೆಯ ಕ್ರಿ.ಶ. ೧೨೮೨ರ ಶಾಸನವೊಂದು ನೂಲ್ವಿಯಲ್ಲಿ ಹಾಗೂ ಕ್ರಿ.ಶ. ೧೨೭೭ರ ಮತ್ತೊಂದು ಶಾಸನ ಕಟ್ನೂರನಲ್ಲಿ ದೊರೆತಿದೆ.[೧೯]

ಹೊಯ್ಸಳರು : (ಕ್ರಿ.ಶ. ೧೦೦೬-೧೩೪೬)

ಈ ಅರಸು ಮನೆತನವು ಧಾರವಾಡ ಜಿಲ್ಲಾದ್ಯಾಂತ ತಮ್ಮ ವಿಸ್ತಾರವನ್ನು ಮಾಡಿದರ ಬಗ್ಗೆ ಹಲವಾರು ಶಾಸನಗಳು ದೊರೆತಿದ್ದು ಈ ಪ್ರದೇಶಗಳನ್ನು ವಿಸ್ತರಿಸಿದರ ಕೀರ್ತಿ ಎರಡನೇ ಬಲ್ಲಾಳನಿಗೆ ಸಲ್ಲುತ್ತದೆ. ಈತನು ಹೊಯ್ಸಳ ವಂಶದಲ್ಲಿಯೇ ಅದ್ವಿತೀಯನಾದ ಅರಸ ಎಂದು ಜೆ. ಡೆಕನ್ ಎಂ.ಡರೆಟ್ ಅವರು ಬಣ್ಣಿಸಿದ್ದಾರೆ. ಹೊಯ್ಸಳ ದೊರೆ ಇಮ್ಮಡಿ ವೀರಬಲ್ಲಾಳನ ೬ ಶಾಸನಗಳು ಬ್ಯಾಹಟ್ಟಿಯಲ್ಲಿ ದೊರೆತಿವೆ.[೨೦]

ವಿಜಯನಗರ ಸಾಮ್ರಾಜ್ಯ : (ಕ್ರಿ.ಶ. ೧೩೩೬-೧೬೪೬)

ಸುಮಾರು ಮೂರು ಶತಮಾನಗಳ ಕಾಲ ಜೀವಿಸಿದ್ದ ಈ ಸಾಮ್ರಾಜ್ಯವು ಪ್ರಭಲ ರಕ್ಷಣಾ ಕೋಟೆಯಂತಿದ್ದು ವಿದೇಶಿಯರ ಮತ್ತು ವಿಧರ್ಮಿಯರ ದಾಳಿಗಳಿಂದ ಹಿಂದೂಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸಲು ವಿಜಯನಗರ ಅರಸರ ಕೃಷ್ಣದೇವರಾಯ ಆಳಿದ ಕ್ರಿ.ಶ. ೧೫೧೯ರ ಶಾಸನ ಶಿರಗುಪ್ಪಿಯಲ್ಲಿ[೨೧] ದೊರೆತಿವೆ. ವಿಜಯನಗರ ಹಾಗೂ ಪೋರ್ಚುಗೀಸರ ವ್ಯಾಪಾರ ಒಪ್ಪಂದದಲ್ಲಿ ಹುಬ್ಬಳ್ಳಿಯನ್ನು 'ಒಬೇರಿ' ಎಂದು ಕರೆಯಲಾಗಿದ್ದು ಈ ಊರು ಪೆಟ್ಲುಪ್ಪು, ಕಬ್ಬಿಣ, ಸಿಡಿಮದ್ದು ಪೂರೈಸುವ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ.[೨೨]

ಬಹುಮನಿ ಮತ್ತು ಬಿಜಾಪುರ ಸುಲ್ತಾನರು : (ಕ್ರಿ.ಶ. ೧೩೪೭-೧೬೮೬)

ಕ್ರಿ.ಶ. ೧೩೪೭ರಲ್ಲಿ ಬಹುಮನಿ ಅರಸನಿಗೂ ವಿಜಯನಗರದವರಿಗೂ ಸತತ ಯುದ್ಧಗಳು ನಡೆದವು. ಆದರೆ ಇಮ್ಮಡಿ ದೇವರಾಯನ ಕಾಲಕ್ಕೆ ಇಡೀ ಧಾರವಾಡ ಜಿಲ್ಲೆ ವಿಜಯನಗರದ ವಶದಲ್ಲಿತ್ತು. ಹಳೇ ಹುಬ್ಬಳ್ಳಿಯಲ್ಲಿರುವ ಕ್ರಿ.ಶ. ೧೬೦೦ ಶಾಸನ[೨೩] ಹಮೀದ್ ಖಾನನೆಂಬ ಬಿಜಾಪುರದ ಅಧಿಕಾರಿಯೊಬ್ಬನನ್ನು ಉಲ್ಲೇಖಿಸುತ್ತದೆ. ಈತನು ಜಂಗಮ ವರ್ಗದವರಿಗೆ ಹಲವು ಸುಂಕದ ರಿಯಾಯಿತಿ ನೀಡಿದ್ದನು ಎಂದು ಈ ಶಾಸನ ತಿಳಿಸುತ್ತದೆ. ಕ್ರಿ.ಶ. ೧೬೭೩ರಲ್ಲಿ ಶ್ರೀಮಂತ ವ್ಯಾಪಾರ ಕೇಂದ್ರವಾದ ಹುಬ್ಬಳ್ಳಿ ನಗರವನ್ನು ಶಿವಾಜಿಯ ಸೇನಾಪತಿ ಅಣ್ಣಾಜಿದತ್ತೋ ಕೊಳ್ಳೆ ಹೊಡೆದು ವಿಪುಲ ಸಂಪತ್ತನ್ನು ದೋಚಿದನು. ಅನಂತರ ಬಿಜಾಪುರದ ಸುಲ್ತಾನನು ಹುಬ್ಬಳ್ಳಿಯನ್ನು ಬಂಕಾಪುರದ ರಾಜ್ಯಪಾಲನಿಗೆ ವಹಿಸಿದರು. ಆದರೆ ಮರಾಠರು ಈ ಪ್ರದೇಶಕ್ಕೆ ಅಧಿಕಾರ ವಿಸ್ತರಿಸುವುದನ್ನು ಯಶಸ್ವಿಯಾಗಿ ತಡೆಹಿಡಿದರು.[೨೪]

ಸವಣೂರು, ನವಾಬರು, ಮರಾಠರು, ಪಟವರ್ಧನರು

ಕ್ರಿ.ಶ. ೧೬೭೩ರಲ್ಲಿ ಅಣ್ಣಾಜಿದತ್ತನ ನೇತೃತ್ವದಲ್ಲಿ ಮರಾಠರ ಸೈನ್ಯವೊಂದು ವಿಜಾಪುರ ರಾಜ್ಯದ ಮೇಲೆ ದಾಳಿಮಾಡಿದಾಗ ವಾಣಿಜ್ಯಕೇಂದ್ರವಾಗಿದ್ದ ಹುಬ್ಬಳ್ಳಿಯನ್ನು ಸುಲಿಗೆ ಮಾಡಲಾಯಿತು. ಆದರೆ ಕ್ರಿ.ಶ. ೧೬೭೪ರಲ್ಲಿ ಶಿವಾಜಿಯು ನರಗುಂದದಲ್ಲಿ ಕೋಟೆಕಟ್ಟಿಸಿದನಲ್ಲದೇ ಧಾರವಾಡವನ್ನು ವಶಪಡಿಸಿಕೊಂಡನು.

ಸವಣೂರು ನವಾಬರ ಇತಿಹಾಸ ತಿಳಿಯಲು ಕ್ರಿ.ಶ. ೧೮೪೧ರಲ್ಲಿ ಪ್ರಕಟವಾದ ''ಹಿಲೇರ್‌ಜಂಗೀ'' ಎಂಬ ಪರ್ಷಿಯನ್ ಕೃತಿ ಮುಖ್ಯ ಆಧಾರವಾಗಿದೆ.[೨೦] ಕ್ರಿ.ಶ. ೧೭೨೭ರಲ್ಲಿ ಹುಬ್ಬಳ್ಳಿ ಸವಣೂರು ನವಾಬನ ಜಹಗೀರಾಯಿತು. ಇದೇ ವರ್ಷದಲ್ಲಿ ಹಳೇ ಹುಬ್ಬಳ್ಳಿಯ ಪ್ರಸಿದ್ಧ ವೀರಶೈವ ವ್ಯಾಪಾರಿ ಕಲ್ಯಾಣ ಶೆಟ್ಟರ ಸೋದರಳಿಯ ಬಸಪ್ಪಶೆಟ್ಟಿಯು ಮೊದಲು ಬೊಮ್ಮಪುರದಲ್ಲಿ ನೆಲೆಸಿ ಸವಣೂರಿನ ನವಾಬನಾಗಿದ್ದ ವಜೀದಖಾನನ ಸಹಾಯದಿಂದ ಹೊಸಹುಬ್ಬಳ್ಳಿ ಮತ್ತು ಅದರ ಕೋಟೆಯನ್ನು (ಇಂದಿನ ದುರ್ಗದಬೈಲ್) ಕಟ್ಟಿಸಿದನೆಂಬ ಪ್ರತೀತಿಯಿದೆ.[೨೧]

೨.೩. ಸಾಮಾಜಿಕ ವ್ಯವಸ್ಥೆ

ಸಾಮಾಜಿಕ ಸ್ಥಿತಿಗಳ ಅಧ್ಯಯನವು ವಿಶಾಲವಾದ ಕ್ಷೇತ್ರವನ್ನು ಹೊಂದಿರುವುದನ್ನು ನಾವು ಗಮನಿಸಬೇಕಾದ ವಿಷಯವಾಗಿದ್ದು, ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಇಲ್ಲಿನ ಕುಟುಂಬದ ಸ್ವರೂಪ. ಮಹಿಳೆಯರ ಸ್ಥಾನಮಾನ, ಸಾಮಾಜಿಕ ಸಮಸ್ಯೆಗಳು, ಜಾತ್ರೆಗಳು, ಹಬ್ಬಗಳು, ವಿಧಿಗಳು, ಸಮಾಜದಲ್ಲಿನ ಕುಟುಂಬ ವ್ಯವಸ್ಥೆ, ಆಭರಣಗಳು, ಮನೋರಂಜನೆ, ಸಮುದಾಯಗಳು ಮೂಢನಂಬಿಕೆಗಳು ಹೀಗೆ ಇವೆಲ್ಲವೂ ಸಮಾಜದ ಸಂಸ್ಕೃತಿಯ ಮಟ್ಟವನ್ನು ಪ್ರತಿಬಿಂಬಿಸುವ ಅಂಶಗಳಾಗಿವೆ.

ವರ್ಣ ಮತ್ತು ವರ್ಣಾಶ್ರಮ ಪದ್ಧತಿ

ಹಿಂದಿನಿಂದಲೂ ಬೆಳೆದು ಬಂದ ವರ್ಣ ಮತ್ತು ಜಾತಿ ಪದ್ದತಿಗೆ ಹುಬ್ಬಳ್ಳಿಯು ಹೊರತಾಗಿರಲಿಲ್ಲ ಕರ್ನಾಟಕ ಶಾಸನಗಳಲ್ಲಿ ಒಂದೆರಡು ಕಡೆ ಬ್ರಹ್ಮ, ಕ್ಷತ್ರಿಯ, ವೈಷ್ಯ, ಕ್ಷುದ್ರ, ಎಂಬ ವರ್ಗಗಳ ಹೆಸರು ಬಂದಿದೆ. ರಾಜನು ವರ್ಣಾಶ್ರಮದ ಧರ್ಮವನ್ನು ಸಂರಕ್ಷಿಸುವುದು ಅವನ ಪವಿತ್ರ ಕರ್ತವ್ಯಗಳಲ್ಲೊಂದು ಎಂದು ಒಂದೆರಡು ಕಡೆ ಉಕ್ತವಾಗಿದೆ.[೨೨]

ಋಗ್ವೇದದ ಪುರುಷ ಸೂಕ್ತದಲ್ಲಿ ಬ್ರಾಹ್ಮಣನು ತಲೆಯಿಂದಲೂ ಕ್ಷತ್ರಿಯನು ಬಾಹುವಿನಿಂದಲೂ ವೈಶ್ಯನು ತೊಡೆಯಿಂದಲೂ, ಶೂದ್ರನು ಪಾದಗಳಿಂದಲೂ ಹುಟ್ಟಿದ ಎಂದು ಉಲ್ಲೇಖಿಸಿದೆ.[೨೩] ನಂತರದ ಕಾಲಘಟ್ಟದಲ್ಲಿ ಬೇರೆ ಬೇರೆ ವರ್ಣದವರು ಬೇರೆ ಬೇರೆ ವೃತ್ತಿಯನ್ನು ಅವಲಂಬಿಸಿದರು. ಬೇರೆ ಬೇರೆ ವರ್ಣಗಳ ಸ್ತ್ರೀಯರು ಸಂಪರ್ಕ ಪಡೆದರು. ಇದರಿಂದ ವರ್ಣ ಸಂಕಲನ ಉಂಟಾಯಿತು. ಇದರ ಆಧಾರವಾಗಿ ಬೇರೆ ಬೇರೆ ಜಾತಿಗಳು ಹುಟ್ಟಿದವು ಎನ್ನಲಾಗಿದೆ. ಪ್ರಸ್ತುತ ಅಧ್ಯಯನ ಸಂದರ್ಭದಲ್ಲಿ ಬ್ರಹ್ಮಚರ್ಯ, ಗ್ರಹಸ್ಥ, ವಾನಪ್ರಸ್ಥ ಎಂಬ ಆಶ್ರಮ ಪದ್ಧತಿಯನ್ನು ಕಾಣುತ್ತೇವೆ. ಹಾಗೆಯೇ ಇಲ್ಲಿ

ಕಂಡುಬರುವ ಇತರ ವರ್ಗಗಳೆಂದರೆ ಬಡಿಗರು. ಕಮ್ಮಾರರು, ಅಕ್ಕಸಾಲಿಗರು, ವಿಶ್ವಕರ್ಮರು, ಅಗಸರು, ವಡ್ಡರು, ಲಿಂಗಮತರು, ದೇವದಾಸಿಯರು ಇನ್ನೂ ಮುಂತಾದ ವರ್ಗದವರು ಈಗಲೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿರುವುದನ್ನು ಕಾಣುತ್ತೇವೆ.

ವೇಶ್ಯವೃತ್ತಿ

ಪ್ರಾಚೀನ ಕಾಲದಿಂದಲೂ ಸಾಮಾಜಿಕ ವ್ಯವಸ್ಥೆಯಲ್ಲಿ ವೇಶ್ಯಾಪದ್ಧತಿಯು ಇರುವುದು ನಮಗೆ ಹಲವಾರು ದಾಖಲೆಗಳಿಂದ ತಿಳಿದುಬರುತ್ತದೆ. ಹುಬ್ಬಳ್ಳಿ ತಾಲೂಕಿನಲ್ಲಿ ಕೆಲವೆಡೆ ಈ ಒಂದು ವರ್ಗ ಇದ್ದಿರುವುದು ನಮಗೆ ತಿಳಿಯುತ್ತದೆ. ಹಾಗೆಯೇ ಅಂದು ಇವರ ಸ್ಥಾನವು ಸಮಾಜದಲ್ಲಿ ಅತ್ಯಂತ ಪ್ರಭಲವಾಗಿದ್ದಿತು. ಇವರುಗಳು ನೃತ್ಯ ಸಂಗೀತ, ಕಲೆ, ಸಾಹಿತ್ಯದಲ್ಲಿ ತಮ್ಮದೇ ಆಗಿರುವಂತಹ ಕೊಡುಗೆಯನ್ನು ನೀಡಿದ್ದಾರೆ. ಆರಂಭಿಕ ಕಾಲಘಟ್ಟದಲ್ಲಿ ಇವರುಗಳು ದೇವಾಲಯಗಳಲ್ಲಿ ಸೇವೆಸಲ್ಲಿಸುತ್ತಿದ್ದರು. ಧರ್ಮಪತ್ನಿಯ ಜೊತೆಯಲ್ಲಿ ಒಬ್ಬ ವೇಶ್ಯೆಯೊಡನೆ ಸಂಪರ್ಕವಿಟ್ಟುಕೊಳ್ಳುವುದು ಅವಮಾನಕರವೆಂದು ಜನರು ಭಾವಿಸಿರಲಿಲ್ಲ ಹಾಗೆ ಅವರ ಮೇಲೆ ನಿರ್ಧರಿತ ತೆರಿಗೆಯನ್ನ ಹಾಕುತ್ತಿದ್ದರು ಎಂಬ ದಾಖಲೆಗಳಿವೆ.[೨೪]

ಮಹಿಳೆ ಮತ್ತು ರಾಜಕೀಯ

ಪ್ರಾಚೀನ ಕಾಲದಲ್ಲಿ ಮಹಿಳೆಯರಿಗೆ ಯಾವುದೇ ತರಹದ ಸ್ಥಾನಮಾನಗಳು ಇಲ್ಲದೇ ಇದ್ದುದು ಮುಂದೆ ಅವರುಗಳು ಪ್ರತಿಯೊಂದು ಕ್ಷೇತ್ರದಲ್ಲಿಯೂ ತನ್ನದೇ ಆದ ಚಾಪನ್ನು ಮೂಡಿಸಿದರೆಂದು ಹೇಳಬಹುದಾಗಿದೆ. ಮನು ಮಹಿಳೆ ಕುರಿತು ಯತ್ರ ನಾರ್ಯ್ಯಸ್ತು ಪೂಜ್ಯತೆ ರಮಂತೆ ತತ್ರದೇವತಃ ಎಂದಿದ್ದಾನೆ ಆದರೆ ಮನುವಿನ ಮನಸ್ಸು ಗೊಂದಲದಿಂದ ಕೂಡಿರುವ ಸಾಧ್ಯತೆಯಿದೆ. ರಾಜಮನೆತನದ ಸ್ತ್ರೀಯರು ಆಡಳಿತ ಕ್ಷೇತ್ರದಲ್ಲಿಯೂ ತಮ್ಮ ಸಾಮಾರ್ಥ್ಯ ಸಾಬೀತುಪಡಿಸುವ ವಿಷಯ ಶಾಸನಗಳಿಂದ ವ್ಯಕ್ತವಾಗುತ್ತದೆ. ಕ್ರಿ.ಶ. ೧೧೧೧ ರ ಹುಬ್ಬಳ್ಳಿ ಎರಡನೇ ಶಾಸನವು[೨೫] ವಿಕ್ರಮ ಚಕ್ರವರ್ತಿಯ ಪಿರಿಯರಸಿ ಮಲಯವತಿ ಮಹಾದೇವಿ ಹುಬ್ಬಳ್ಳಿ ಅಗ್ರಹಾರವನ್ನು ಆಳ್ವಿಕೆಮಾಡುತ್ತಿದ್ದಳೆಂದಿದೆ. ಹಾಗೆಯೇ ವಿಕ್ರಮ ಚಕ್ರವರ್ತಿಯಿಂದ ಸಂಪೂಜಿತನಾದ ಹಿರಿಯ ದಂಡನಾಯಕ ಮುಟ್ಟಿಗಲ್ಲಯ್ಯನ ಹೆಂಡತಿ ಮಾಚಕಬ್ಬೆಯು ಹುಬ್ಬಳ್ಳಿಯಲ್ಲಿ ದೇವಾಲಯಗಳ ಸಮೂಹವನ್ನು ನಿರ್ಮಿಸಿದಳೆಂದು ಶಾಸನಗಳಿಂದ ಉಲ್ಲೇಖಿಸಿವೆ.

ಆತ್ಮಬಲಿ

ಹುಬ್ಬಳ್ಳಿ ಪರಿಸರದಲ್ಲಿ ವೀರಗಲ್ಲು ಮಹಾಸತಿಗಲ್ಲುಗಳನ್ನು ಕಾಣುತ್ತೇವೆ. ಅವುಗಳ ಹಿನ್ನೆಲೆ ಕುರಿತು ನೋಡಲಾಗಿ ಅಸಹನೀಯವಾಗಿ ಬಲಿಯಾದ ಆತ್ಮಗಳ ಕಥೆಯಿದೆ. ಪ್ರಾಚೀನ ಕಾಲದಲ್ಲಿ ನಿಸ್ಸಹಾಯಕಳಾದ ಸ್ತ್ರೀ ಸಮಾಜದ ಕಟ್ಟಳೆಗಳಿಗೆ ಬಾಗಬೇಕಿತ್ತು. ಹಳ್ಳಿಯ ಕೆರೆತುಂಬಿ ಕೋಡಿ ಹರಿಯುವ ಪರಿಸ್ಥಿತಿ ಬಂದಾಗ ಆ ಊರ ರೆಡ್ಡಿಯ ಸ್ವಪ್ನದಲ್ಲಿ ದೇವತೆ ಕಂಡು ನರಬಲಿಕೇಳಿದಳಂತೆ ಹಾಗಾಗಿ ದೇವತೆಯ ತೃಪ್ತಿಗಾಗಿ ಇಬ್ಬರು ಸಾಲಂಕೃತ ಸ್ತ್ರೀಯರನ್ನ ದಡದ ಮೆಲೆ ಸಜೀವ ಸಮಾಧಿಮಾಡಿದುದು ತಿಳಿಯುತ್ತದೆ.[೨೬] ಇಂತಹ

ಬಲಿದಾನಕ್ಕೆ ಕನ್ಯೆ, ಯುವತಿಯ ಮಕ್ಕಳನ್ನ ಮಾತ್ರವೇ ಬಲಿಕೊಡಲಾಗುತ್ತಿತ್ತು. ಬಲಿಯಾಗುವಾಗ ಊರ ಮುಖ್ಯಸ್ಥನೇಕೆ ಮುಂದಾಗುವುದಿಲ್ಲ ಜೋಯಿಸನೇಕೆ ಹೋಗುವುದಿಲ್ಲ ಊರವರ್ತಕನೋ ಜಮಿನ್ದಾರನೋ, ಏಕೆ ಬಲಿಯಾಗುವುದಿಲ್ಲ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ.[೨೭]

ಶಿಕ್ಷಣ ಪದ್ಧತಿ

ಶಿಕ್ಷಣ ವ್ಯವಸ್ಥೆಯಲ್ಲಿ ಹುಬ್ಬಳ್ಳಿಯು ತನ್ನದೇ ಆದ ಪ್ರಮುಖ ಸ್ಥಾನಪಡೆದಿದ್ದು ಹಾಗೆಯೇ ಒಮ್ಮೆ ಅಗ್ರಹಾರವಾಗಿ ಆರಂಭಿಕ ರಾಜಕೀಯ ಇತಿಹಾಸಕ್ಕಿಂತ ಹಿಂದೆ ಸ್ತ್ರೀ ಶಿಕ್ಷಣ ಪದ್ಧತಿಯು ಬೆಳೆದಿತ್ತು. ಜೈನರು ಬೌದ್ಧರು ಮತಪ್ರಚಾರಗಳಿಂದಾಗಿ ಹಿಂದೂ ಮತ ಪ್ರಚಾರಕರು ಸಹ ಮೋಕ್ಷ ಸಾಧನೆಯ ಜೊತೆಗೆ ಜ್ಞಾನದ ಅವಶ್ಯಕತೆಯನ್ನು ಮನಗಂಡು ಅದರ ಸಾಧನೆಯ ಶಿಕ್ಷಣದ ಅನಿವಾರ್ಯತೆಯ ಕಡೆಗಮನ ಹರಿಸುವಂತಾಯಿತು. ಈ ಮೂಲಕ ಶಿಕ್ಷಣಕ್ಕೆ ಧಾರ್ಮಿಕ ಮತ್ತು ಮತಿಯರ ಅನುಮೋದನೆ ದೊರಕಿತು.[೨೮] ಆದರೆ ಜೈನರು ಮತ್ತು ಬೌದ್ಧರು ಶಿಕ್ಷಣವು ಕೇವಲ ಕೆಲವರ ಸೊತ್ತಲ್ಲವೆಂಬ ತತ್ವವನ್ನು ಎತ್ತಿಹಿಡಿದರು.

ಜಾತ್ರೆಗಳು ಮತ್ತು ಹಬ್ಬಗಳು

ಜಾತ್ರೆಗಳು ಮತ್ತು ಹಬ್ಬಗಳು ಭಾರತೀಯ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿವೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿ ಜಾತ್ರೆ, ಹಾಗೂ ಮೂರು ಸಾವಿರ ಮಠದ ಜಾತ್ರೆ ಅಲ್ಲದೆ ಕೆಲವು ಸ್ತ್ರೀ ದೇವತೆಗಳ ಜಾತ್ರೆಗಳು ಸಾಗಿ ಬಂದಿರುವುದನ್ನು ನಾವು ಹಲವಾರು ಸಾಹಿತ್ಯಕ ಆಧಾರಗಳಿಂದ ತಿಳಿಯಬಹುದಾಗಿದೆ.

ಇಂದಿಗೂ ನಮ್ಮ ಜನ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಆಜ್ಞಾಪೂರ್ವಕವಾಗಿ ಸಂರಕ್ಷಿಸಿಕೊಂಡು ಬರುತ್ತಿದ್ದಾರೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಮುಸಲ್ಮಾನರು, ಜೈನರು, ಬೌದ್ಧರು ಇತ್ಯಾದಿ ಜನರು ಶತಮಾನಗಳಿಂದ ಇಲ್ಲಿ ನೆಲೆಸಿರುವ ಕಾರಣ ಹುಬ್ಬಳ್ಳಿ ಪರಿಸರದಲ್ಲಿ ಅವರ ಹಬ್ಬಗಳು ಆಚರಣೆಯಲ್ಲಿವೆ.

ಮನೋರಂಜನೆ ಆಹಾರ, ಉಡುಗೆ, ಆಭರಣ

ಪ್ರಾಚೀನ ಕಾಲದಿಂದಲೂ ಹುಬ್ಬಳ್ಳಿ ಪರಿಸರದ ಸಾಮಾಜಿಕ ವ್ಯವಸ್ಥೆಯಲ್ಲಿ ಬೇಟೆಗಾರಿಕೆ, ಕುದುರೆ ಸವಾರಿ, ಕತ್ತೆವರಸೆ ಇವುಗಳು ರಾಜನಿಗೆ ಪ್ರಿಯವಾಗಿತ್ತು. ಇಲ್ಲಿನ ಜನ ಆಹಾರಕ್ಕಾಗಿ ಅಕ್ಕಿ ಜೋಳ, ಭತ್ತ, ಎಳ್ಳು, ತೆಂಗಿನಕಾಯಿ, ಇತರೆ ಏಕದಳ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದರು. ಹಾಗೆಯೇ ಪುರುಷರು ಧೋತಿಯನ್ನು ಮಹಿಳೆಯರು ಸೀರೆಯನ್ನು ಉಡುತ್ತಿದ್ದರೆಂದು ತಿಳಿಸಿದ್ದಾರೆ. ಮೇಲುವರ್ಗದ ಮಹಿಳೆಯರು, ರಾಜಪರಿವಾರದವರು ಬೆಲೆಬಾಳುವ ಉಡುಪುಗಳನ್ನು ಧರಿಸುತ್ತಿದ್ದರು. ಬಸವೇಶ್ವರರ ಪತ್ನಿಗೆ ತಂದು ಕೊಟ್ಟ ಒಂದು ಸೀರೆ ನೇಯಲು ೧೨ ವರ್ಷ ಹಿಡಿಯಿತೆಂದು ಅಭಿಪ್ರಾಯಪಡಲಾಗಿದೆ.

ಇಲ್ಲಿನ ಮೇಲ್ವರ್ಗದ ಜನರು ಚಿನ್ನ, ವಜ್ರ, ಮತ್ತು ಹವಳ, ಕೆಂಪುಕಲ್ಲು ಇತರೆ ಅಮೂಲ್ಯ ಹರಳುಗಳಿಂದ ತಯಾರಿಸಿದ ಆಭರಣಗಳನ್ನ ತೊಡುತ್ತಿದ್ದರು. ಮುಖ್ಯವಾಗಿ ಬಳೆ, ತೋಳಬಂದಿ, ಕಾಪು, ಸರಗಳು, ಉಂಗುರ, ಡಾಬು, ತೀಕಿ, ಚೈನು, ನಡುಪಟ್ಟಿ, ಕಡಗ, ಮೂಗುತಿ, ಸರಗಿ, ಇನ್ನೂ ವಿವಿಧ ಆಭರಣಗಳನ್ನು ಗುರುತಿಸಬಹುದು. ಹಾಗೆಯೇ ಸ್ತ್ರೀಯರು ಹೂವು ಕೇಸರಿ ಶ್ರೀಗಂಧ, ಕರ್ಪೂರ ವಿವಿಧ ಹೂವುಗಳಿಂದ ಸುಗಂಧ ದ್ರವ್ಯಗಳನ್ನು ಸೌಂದರ್ಯ ವರ್ಧಕಗಳಾಗಿ ಬಳಸುತ್ತಿದ್ದರು. ಹಾಗೆಯೇ ಹಿಂದಿನ ಕಾಲದಲ್ಲಿ ಪುರುಷರು ಸಹ ಆಭರಣಗಳನ್ನು ಹಾಗೂ ಅಲಂಕಾರಿಕ ವಸ್ತುಗಳನ್ನು ಬಳಸುತ್ತಿದ್ದರು ಎಂದು ತಿಳಿದುಬರುತ್ತದೆ.[೨೯]

೨.೪. ಧಾರ್ಮಿಕ ವ್ಯವಸ್ಥೆ

ಹುಬ್ಬಳ್ಳಿ ಪರಿಸರದಲ್ಲಿ ಪ್ರಾಚೀನ ಕಾಲದಿಂದಲೂ ಹಿಂದೂ, ಬೌದ್ಧ, ಜೈನ, ಇಸ್ಲಾಂ, ಕ್ರೈಸ್ತ ಮುಂತಾದ ಧರ್ಮಗಳು ಬೆಳೆದು ಬಂದಿರುವುದಕ್ಕೆ ಶಾಸನ ಹಾಗೂ ಸಾಹಿತ್ಯಿಕ ದಾಖಲೆಗಳಿವೆ. ಈ ಸಂದರ್ಭದಲ್ಲಿ ಧರ್ಮದ ಕುರಿತು ವಸ್ತುನಿಷ್ಠ ಚರ್ಚೆಯಲ್ಲಿ ತೊಡಗುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಹಿಂದೂ ಧರ್ಮ

ಹುಬ್ಬಳ್ಳಿ ತಾಲೂಕಿನಲ್ಲಿ ಪ್ರಾಚೀನ ಕಾಲದಿಂದಲೂ ಸನಾತನ ವರ್ಣಾಶ್ರಮ ಧರ್ಮವು ಪ್ರಚಲಿತವಿತ್ತು. ಬನವಾಸಿ ಕದಂಬರ ಹಾಗೂ ಬಾದಾಮಿ ಚಲುಕ್ಯರ ಕಾಲದಲ್ಲಿ ಶಾಕ್ತಧರ್ಮವಾಗಿತ್ತು. ನಂತರ ಕಾಲಘಟ್ಟದಲ್ಲಿ ಪರಿವರ್ತನೆ ಹೊಂದಿ ಸ್ಮೃತಿ ಹಾಗೂ ಪುರಾಣೋಕ್ತ ಧರ್ಮವಾಗಿ ಬೆಳೆದು ಬಂದಿತು. ಮನು ಮತ್ತು ಯಜ್ಞವಲ್ಕ್ಯಸ್ಮೃತಿ ಗ್ರಂಥಗಳು ವಿಶೇಷವಾಗಿ ನಮ್ಮಲ್ಲಿ ಜನ ಮೆಚ್ಚುಗೆಯನ್ನು ಹೊಂದಿದ್ದವು. ೬ನೇ ವಿಕ್ರಮಾದಿತ್ಯನ ಕಾಲದಲ್ಲಿ ವಿಜ್ಞಾನೇಶ್ವರ ಪಂಡಿತನು ಯಜ್ಞವಲ್ಕ್ಯನ ಸ್ಮೃತಿಯ ಮೇಲೆ ಮಿತಾಕ್ಷರ ಸಂಹಿತೆ ಎಂಬ ಟೀಕಾ ಗ್ರಂಥವನ್ನು ಬರೆದುದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬಹುದು.

ಆರ್.ಎನ್.ಗುರವ ಅವ ಅಭಿಪ್ರಾಯದಂತೆ ಉಗುರ ಮುನ್ನೂರ್ವರು ಎಂಬ ವೀಳೆದೆಲೆಗಳನ್ನ ಕೊಯ್ಯುವವರ ಸಂಘದವರು ಉಗುರೇಶ್ವರ ದೇವಾಲಯವನ್ನು ಕಟ್ಟಿಸಿದರು. ಈ ದೇವಾಲಯವು ಉಣಕಲ್ ಗ್ರಾಮದಲ್ಲಿದ್ದುದು ಶಾಸನವೊಂದರಿಂದ ತಿಳಿದುಬರುತ್ತದೆ.

ಹುಬ್ಬಳ್ಳಿಯಲ್ಲಿ ಭೋಜಗೇಶ್ವರ ಕುಂಭೇಶ್ವರ ಕಪಾಲೇಶ್ವರ ದೇವರ ಗುಡಿಗಳು ಇದ್ದುವೆಂದು ಮತ್ತು ಅವುಗಳಿಗೆ ಬರ್ಮಾದೇವ ಹಾಗೂ ಆತನ ತಮ್ಮನಾದ ವಾವಣಯ್ಯ ಇವರು ದಾನ ಬಿಟ್ಟರೆಂದು ಹುಬ್ಬಳ್ಳಿಯ ಶಾಸನದಲ್ಲಿ ಹೇಳಲಾಗಿದೆ. ಇದು ಕ್ರಿ.ಶ. ೧೦೭೯ರ ಕಾಲ ಎಂದು ಉಲ್ಲೇಖಿಸಿದೆ[೩೦] ಅದೇ ರೀತಿಯಾಗಿ ಹುಬ್ಬಳ್ಳಿಯ ಇನ್ನೊಂದು ಶಾಸನ ಕ್ರಿ.ಶ. ೧೧೧೧ರ ಕಾಲದ್ದಾಗಿದ್ದು[೩೧] ಹರಿಹರ ಹಾಗೂ ಸೂರ್ಯದೇವತೆಗಳ ಮನೋಹರವಾದ ತ್ರಿಕೂಟ ದೇವಾಲಯವನ್ನ ನಿರ್ಮಿಸಿದ್ದನ್ನು ದಾಖಿಲಿಸುತ್ತವೆ

ಮತ್ತು ಅನ್ನ ಶಾಲೆಯನ್ನು ನಿರ್ಮಿಸಿ ಧರ್ಮವನ್ನು ಊರ್ಜಿತಗೊಳಿಸಿದ್ದ ಬಗ್ಗೆ ಈ ಶಾಸನ ತಿಳಿಸುತ್ತದೆ. ನವಲೂರು ಮತ್ತು ಚಾಗಾವೆಯ ಕುರುಬಸೇರಿಗಳು ತಮ್ಮ ಸಮಾಜದ ವತಿಯಿಂದ ಸೇಣಿಗೇಶ್ವರ ದೇವಾಲಯಕ್ಕೆ ಭೂಮಿಯನ್ನು ಕೊಂಡುದಾನ ಬಿಟ್ಟರೆಂದು ಕ್ರಿ.ಶ. ೧೧೯೮ರ ಶಾಸನ ಉಲ್ಲೇಖಿಸುತ್ತದೆ.[೩೨] ಹೀಗೆ ಪ್ರಾಚೀನ ಕಾಲದಿಂದ ಹುಬ್ಬಳ್ಳಿ ತಾಲೂಕಿನಲ್ಲಿನ ದೇವಾಲಯಗಳ ನಿರ್ಮಾಣಕ್ಕಾಗಿ ಹಾಗೂ ಜೀರ್ಣೋದ್ಧಾರಕ್ಕಾಗಿ ಹಲವಾರು ದತ್ತಿದಾನಗಳನ್ನು ನೀಡಿದ ದಾಖಲೆಗಳು ಸಾಕಷ್ಟು ದೊರೆಯುತ್ತವೆ ಶಾಸನಗಳ ಜೊತೆಗೆ ಇಲ್ಲಿ ದೊರೆತಿರುವ ಶೈವ ಮತ್ತು ವೈಷ್ಣವ ದೇವಾಲಯಗಳು ಮತ್ತು ಇಲ್ಲಿನ ಮೂರ್ತಿಶಿಲ್ಪಗಳು ಈ ಮಾತನ್ನು ಪುಷ್ಠೀಕರಿಸುತ್ತವೆ.

ಜೈನ ಧರ್ಮ :

ಅತ್ಯಂತ ಪ್ರಾಚೀನತಮ ಧರ್ಮಗಳಲ್ಲಿ ಜೈನಧರ್ಮವು ಒಂದಾಗಿದ್ದು ಪ್ರಮುಖವಾಗಿ ಈ ಧರ್ಮವು ದುಃಖಮಯವಾದ ಸಂಸಾರ ಪ್ರವಾಹದಿಂದ ಪಾರಾಗಿ ಸಕಲ ವಾಸನೆಗಳನ್ನು ನಾಶಮಾಡಿ ಸಮಸ್ತ ಆಸೆಗಳಿಂದಲೂ ಮುಕ್ತವಾಗಿ ದ್ವಂದ್ವಾತೀತವಾದ ಮಾನದ ಆನಂದ ಸಾಮ್ರಾಜ್ಯದಲ್ಲಿ ನಿರ್ಮಾಣ ಹೊಂದುವುದೇ ಜೈನಧರ್ಮವು ನೀಡುವ ಮುಖ್ಯ ಸಂದೇಶವಾಗಿದೆ.[೩೩] ವೇದ ಹಾಗೂ ಪುರಾಣಗಳಲ್ಲಿ ದೊರೆಯುವ ಆದಾರದ ಮೇಲೆ ಜೈನಧರ್ಮವು ವಿಶ್ವದ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಒಂದು ಎಂಬುದನ್ನು ಎಲ್ಲರೂ ಒಪ್ಪುವಂತಾಗಿದೆ. ಹಾಗೆಯೇ ಜೈನದರ್ಶನವು ಅತ್ಯಂತ ಪ್ರಭಲವಾಗಿದ್ದು ಲೌಕಿಕ ಜೀವನದ ವಿಚಾರಗಳು ಅತ್ಯಂತ ಉನ್ನತವಾಗಿವೆ.

ಹುಬ್ಬಳ್ಳಿ ಪರಿಸರದಲ್ಲಿ ಜೈನಧರ್ಮದ ಕುರಿತು ಚರ್ಚಿಸುವಾಗ ಬನವಾಸಿ ಕದಂಬರು ಹಾಗೂ ರಾಷ್ಟ್ರಕೂಟ ಕಾಲದಲ್ಲಿ ಊರ್ಜಿತಾವಸ್ಥೆಯಲ್ಲಿದ್ದ ಜೈನಧರ್ಮವು ಪಶ್ಚಿಮ ಚಾಲುಕ್ಯರ ಕಾಲದಲ್ಲಿ ಇನ್ನೂ ಸಾಕಷ್ಟು ಪ್ರಬಲವಾಗಿದ್ದು ಕಂಡುಬರುತ್ತದೆ. ಆದರೆ ಮುಂದೆ ಕಾಲಕಳೆದಂತೆ ಪತನದ ಹಾದಿಯನ್ನು ಕಂಡಿತು. ಬ್ಯಾಹಟ್ಟಿಯಲ್ಲಿ ದೊರೆತ ಕ್ರಿ.ಶ. ೧೦೩೭ರ ಒಂದು ಶಾಸನದಲ್ಲಿ ಬೇರ್ಪಟ್ಟಿಯ ಪನ್ನಿರ್ವ್ವವುಣ್ಬಗುಳ್ಮಿರ್ದ್ದು ನಾಗಚಂದ್ರ ಸೈದ್ಧಾಂತಭಟ್ಟಾರಕರಪಾದ ಪ್ರಕ್ಷಾಳನಂಗೆಯ್ದು ಜಿನಾಲಯಕ್ಕೆ ಬಿಟ್ಟ ಆರು ಮಣ ಎಂದು ಬ್ಯಾಹಟ್ಟಿ ಶಾಸನ ಉಲ್ಲೇಖಿಸುತ್ತದೆ.[೩೪] ಛಬ್ಬಿಯ ಕ್ರಿ.ಶ. ೧೦೬೦ರ ಶಾಸನದ ಉಲ್ಲೇಖದಂತೆ[೩೫] ಸಬ್ಬಿಯ ದೊರೆ ಜಿನಾಲಯದ ಆಚಾರ್ಯಬಾಹು ಬಲವೃತವಲ್ಲಭರ ಶಿಷ್ಯ ಕನಕ ನಂದಿ ಭಟ್ಟಾರಕರ ನಿಷಿಧಿಯ ವಿಷಯ ಹಾಗೂ ಅದನ್ನು ಭಾಗಿಯಬ್ಬೆ ಕನ್ನಿಯು ನಿಲ್ಲಿಸಿದಳೆಂದು ಹೇಳಲಾಗಿದೆ.

ಹಳೇಹುಬ್ಬಳ್ಳಿಯ ಬಸದಿಯಲ್ಲಿರುವ ಒಂದು ಜೈನಮೂರ್ತಿಯ ಪಾದಪೀಠದ ಮೇಲೆ ಯಾಪನೀಯ ಸಂಘ ಕಣ್ಣೂರ್ಗಣ ಎಂದು ದಾಖಲಿಸಿದೆ ಈ ಶಾಸನಗಳ ಜೊತೆಗೆ ಇಲ್ಲಿನ ಜೈನಬಸದಿಗಳು ಮತ್ತು ತೀರ್ಥಂಕರ ಮೂರ್ತಿಗಳು ಇದ್ದು ಇಲ್ಲಿ ಜೈನಧರ್ಮ ಪ್ರಚಲಿತದಲ್ಲಿತ್ತೆಂಬುದನ್ನು ಪ್ರತಿಪಾದಿಸುತ್ತವೆ.

ವೀರಶೈವ ಧರ್ಮ :

ಶಿವನೆಂದರೆ ನಿರ್ಗುಣ, ನಿರಾಕಾರ, ಚೈತನ್ಯ ರೂಪದ ಪರಬ್ರಹ್ಮ, ಎಂಬ ಕಲ್ಪನೆ ಆಗ ಒಡಮೂಡಿತು. ಈ ನಿಲುವನ್ನು ತಳೆದ ಶೈವರು ಶಿವನನ್ನು ಮಹಾದೇವ, ಜಗತ್‌ಪಿತೃ, ವಿಶ್ವನಾಥ, ಎಂದು ಕರೆಯತೊಡಗಿದರು. ಹಾಗೆಯೇ ವಿರುಪಾಕ್ಷ, ಭೈರವ, ರುದ್ರ, ಎಂದು ನಾನಾರೀತಿಯಲ್ಲಿ ಉಲ್ಲೇಖಿಸುತ್ತ ಬಂದರು. ಶೈವ ಮತದಲ್ಲಿ ಆದಿಶೈವ, ಅನುಶೈವ, ಮಹಾಶೈವ, ಜ್ಞಾನಶೈವ, ವೀರಶೈವ ಎಂಬ ಭೇದಗಳು ಕಾಣುತ್ತೇವೆ.[೩೬]

ಆದರೆ ವೀರಶೈವ ಮತದ ಪ್ರಾಚೀನತೆಯನ್ನು ಸ್ಥಾಪಿಸಲು ಸಾಕಷ್ಟು ಚಾರಿತ್ರಿಕಾಧಾರಗಳು ದೊರೆತಿಲ್ಲ. ಬಸವೇಶ್ವರರೇ ವೀರಶೈವ ಮತ ಸ್ಥಾಪಕರೆಂದು ಎಂ.ಆರ್.ಸಾಖಲೆಯವರ ಅಭಿಪ್ರಾಯ. ವೀರಶೈರವರಿಗೆ ಸಂಬಂಧಿಸಿದ ಕೆಲವು ಶಾಸನಗಳು ಹುಬ್ಬಳ್ಳಿ ಪರಿಸರದಲ್ಲಿ ದೊರೆಯುತ್ತವೆ. ಮುಖ್ಯವಾಗಿ ಬುಡರಸಿಂಗಿಯ ಹನುಮಂತ ದೇವರ ಗುಡಿಯ ಮುಂದೆ ನಿಲ್ಲಿಸಿದ ನಂದಿ ಕಂಬದ ಮೇಲಿನ ಶಾಸನವು ಶ್ರೀಸಿದ್ಧರಾಮೇಶ್ವರ ವಚನದಿಂದ ಆರಂಭವಾಗುತ್ತದೆ. ಈ ಕಾಲಘಟ್ಟದ ಇನ್ನೊಂದು ಶಾಸನ ಕಟ್ನೂರನಲ್ಲಿದ್ದು ಈ ಶಾಸನದ ಬಲಗಡೆಯ ಭಾಗ ಒಡೆದು ಹೋಗಿರುವುದರಿಂದ ಯಾದವ ಚಕ್ರವರ್ತಿ ರಾಮಚಂದ್ರದೇವನ ಕಾಲದಲ್ಲಿ ಕ್ರಿ.ಶ. ೧೨೫೮ ರಂದು ಬರೆಯಲಾಗಿದೆ.[೩೭] ಆದರಲ್ಲಿಯೂ ಸಿದ್ಧರಾಮೇಶ್ವರ ವಚನವಿದೆ. ಗುರುವ ಅಭಿಪ್ರಾಯದಂತೆ ಹಳೇಹುಬ್ಬಳ್ಳಿಯ ಶ್ರೀವೆಂಕಟೇಶ ದೇಸಾಯಿಯವರ ಮನೆಯಲ್ಲಿ ನಿಲ್ಲಿಸಿದ ಕಂಬದ ಮೇಲಿದ್ದ ಶಾಸನದಲ್ಲಿ ಹುಬ್ಬಳ್ಳಿಯ ಜಂಗಮರಿಗೆ ಕ್ರಿ.ಶ. ೧೬೦೧ರಲ್ಲಿ ಸುಂಕದಾನ ಬಿಟ್ಟ ವಿಷಯವನ್ನು ಉಲ್ಲೇಖಿಸುತ್ತದೆ.[೩೮] ಈ ಶಾಸನಗಳು ವೀರಶೈವ ಮತಕ್ಕೆ ಸಂಬಂಧಿಸಿದ ಶಾಸನಗಳಾಗಿವೆ ಎಂದು ಹೇಳಲಾಗಿದೆ.

೧೨ನೇ ಶತಮಾನದಿಂದಲೂ ಇಲ್ಲಿ ವೀರಶೈವ ಮಠಗಳು ಬೆಳೆದು ಬಂದಿದ್ದು ಧಾರ್ಮಿಕವಾಗಿ ಸಾಕಷ್ಟು ಜಾಗೃತಿ ಕಾರ್ಯಗಳನ್ನು ಕೈಗೊಂಡಿವೆ. ಪ್ರಮುಖವಾಗಿ ಹುಬ್ಬಳ್ಳಿಯಲ್ಲಿರುವ ಮಠಗಳಲ್ಲಿ ಬೇಲಿಮಠ, ಸಿದ್ಧಾರೂಢಮಠ, ಮೂರಸಾವಿರಮಠ, ರುದ್ರಾಕ್ಷಿ ಮಠ, ಹೊಸಮಠ, ಹನ್ನೆರಡು ಮಠ, ಜಡಿಮಠ, ಜೊಡೆತ್ತಿನಮಠ ಈ ಎಲ್ಲಾ ಮಠಗಳು ವೀರಶೈವ ಧರ್ಮ ಇಲ್ಲಿತ್ತೆಂಬುದಕ್ಕೆ ಸಾಕ್ಷಿಯಾಗಿದೆ.[೩೯]

೨.೫. ಆರ್ಥಿಕ ವ್ಯವಸ್ಥೆ :

ಪ್ರಾಚೀನ ಹಾಗೂ ಮಧ್ಯಕಾಲೀನ ಆರ್ಥಿಕ ಸ್ಥಿತಿಯನ್ನು ಅರಿತುಕೊಳ್ಳುವಲ್ಲಿ ಸಾಹಿತ್ಯಕ ದಾಖಲೆಗಳು ಬಹುಪಾಲು ನೆರವಾಗಿದ್ದು ಇದರಿಂದ ಅಂದಿನ ಪ್ರಾಕೃತಿಕ ಸಮೃದ್ಧಿಯ ಪರಿಚಯವಾಗುತ್ತದೆ. ಹುಬ್ಬಳ್ಳಿಯ ಆರ್ಥಿಕತೆಗೆ ಸಂಬಂಧಿಸಿದ ಈ ಅಧ್ಯಾಯದಲ್ಲಿ ಭೂಸಂಪತ್ತು, ಕೃಷಿ, ನೀರಾವರಿ, ಸಹಕಾರ, ಸಂಘಟನೆ, ಮಾರುಕಟ್ಟೆ, ಕೈಗಾರಿಕೆಗಳು ವಾಣಿಜ್ಯ ಸಾರಿಗೆ ಸಂಪರ್ಕ ಮುಂತಾದ ವಿಷಯುಗಳ ಬಗ್ಗೆ ಕುರಿತು ಚರ್ಚಿಸಲಾಗಿದೆ.

ಒಕ್ಕಲುತನ

ಎಲೆಹಾಳು ಹರಳು ತೋಂಟದ
ಬರಿಯೋಳು ಕಾಲುವೆಯ ನುಂಬಗದ್ದೆಗಳಿಂದಂ
ಪಿರಿದೆಲೆಯ ಪೂರ್ವಳ್ಳಿಯ
ಧರೆಯಲ್ಲಿಂ ಬೆಳೆಸು ಕಳಸವಿಟ್ಟಂತಿರ್ಚುಂ[೪೦]

ಎಂಬುದು ಪ್ರಿನ್ಸ್‌ಆಫ್‌ವೇಲ್ಸ್ ವಸ್ತುಸಂಗ್ರಹಾಲಯದಲ್ಲಿ ಇಟ್ಟಿರುವ ಹುಬ್ಬಳ್ಳಿಯ ಶಾಸನವೊಂದರಲ್ಲಿಯ ಪದ್ಯ ಇದು. ಇದರಲ್ಲಿ ಎಲೆ, ಹಾಳುಹರಳು, ತೊಂಟ, ಗದ್ದೆ ಹೀಗೆ ಹುಬ್ಬಳ್ಳಿ ಭೂಮಿಯ ಹಲವು ಪ್ರಕಾರಗಳನ್ನು ವಿವರಿಸಿ ಮಳೆ ನೀರಿನಿಂದ ಹಾಗೂ ನೀರಾವರಿಯಿಂದ ಹುಬ್ಬಳ್ಳಿಯ ಸುತ್ತಲೂ ಬೆಳೆದು ನಿಂತ ಪೈರಿನ ಸುಂದರವಾದ ವರ್ಣನೆ ಈ ರೀತಿಯಾಗಿ ಗುರ್ತಿಸಲಾಗಿದೆ.[೪೧]

ಎಲೆಗಳ ತೋಟ :

ಹುಬ್ಬಳ್ಳಿಯ ಹೆಸರಿನ ಹಿಂದೆ ಎಲೆಯ ಎಂಬ ವಿಶೇಷಣ ಹಚ್ಚಿರುವುದರಿಂದ ಅಲ್ಲಿ ಎಲೆಯ ತೋಟಗಳು ವಿಪುಲವಾಗಿದ್ದವು ಎಂದು ತಿಳಿಯುತ್ತದೆ. ಅಲ್ಲಿಯ ಕೃಷಿ ಉತ್ಪಾದನೆಯಲ್ಲಿ ಎಲೆಗಳು ಪ್ರಾಮುಖ್ಯತೆಯನ್ನು ಹೊಂದಿದ್ದವು. ಕರಿಯಲೆ, ವೀಳೆದೆಲೆ, ಮುಂತಾದ ವೀಳೆದೆಲೆಗಳ ಜಾತಿಗಳು ಹುಲಗೂರು ಸ್ಥಳದ ಹೆಸರು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೪೨]

ಬೆಳೆಗಳು

ಅದೇ ಪ್ರಿನ್ಸ್ ಆಫ್ ವೇಲ್ಸ್ ವಸ್ತುಸಂಗ್ರಹಾಲಯದಲ್ಲಿರುವ ಹುಬ್ಬಳ್ಳಿ ಶಾಸನದಲ್ಲಿ
ತಿಳಿಗೊಳಿನೊಂದನೊಂದಿ ಪರಿಯುತ್ತಿರಬಾಪರ ನೀರನುಂಡುಕ
ತ್ತರಿಪೆಲೆವಳ್ಳಿ ಪೂಣೆಪಳ್ ಬಾಳೆ ರಸೊಕ್ಕರ ವೀಳೆ ತೆಂಗು ಮಾವು
ಫಳ ಕರಿಯಕ್ಷುದಂಡ ಕಳವೋತ್ಕರ ಭಾರವಿನೊಪ್ಪಿ ತೋರುತ್ತಂ
ಬೆಳೆದು ತದುರ್ದ್ವಿ ತಜ್ಜನಕೆ ಮಾಡೆ ಬಸತಮನವಕುಲಮೂ[೪೩]

ಈ ಪದ್ಯದ ಸಾಲಿನಲ್ಲಿ ಕೃಷಿ ಹುಟ್ಟುವಳಿಯಲ್ಲಿ ವೀಳೆದೆಲೆ, ಅಡಿಕೆ, ಮಾವು, ತೆಂಗು, ಬಾಳೆ, ಕಬ್ಬು, ಭತ್ತ, ಮುಂತಾದವುಗಳನ್ನು ಬೆಳೆಯುತ್ತಿದ್ದರಲ್ಲದೇ ತಮ್ಮ ದೈನಂದಿನ ಉಪಯೋಗಕ್ಕೆ ಬೇಕಾಗುವ ಬೆಳೆಗಳಾದ ಸಜ್ಜೆ, ನವಣೆ, ಕಡಲೆ, ಹೆಸರು, ಉದ್ದು, ಜೋಳ, ಹಾಗೆಯೇ ಸಾಸಿವೆ, ಏಲಕ್ಕಿ, ಲವಂಗ, ಅರಿಷಿಣ ಅಲ್ಲ ಇನ್ನೂ ಮುಂತಾದ ಮಸಾಲೆ ಪದಾರ್ಥಗಳನ್ನು ನಮ್ಮ ರೈತರು ಬೆಳೆಯುತ್ತಿದ್ದರೆಂದು ತಿಳಿದುಬರುತ್ತದೆ.

ನೀರಾವರಿ

ಪ್ರಾಚೀನ ಮತ್ತು ಮಧ್ಯಕಾಲೀನ ಹುಬ್ಬಳ್ಳಿ ಪರಿಸರದಲ್ಲಿ ನೀರಾವರಿ ಪದ್ಧತಿಯನ್ನು ಮೈಗೂಡಿಸಿಕೊಂಡು ಬಂದಿತ್ತೆಂಬುದನ್ನು ತಿಳಿಯಲು ಅಲ್ಲಿ ಕಾಣಬರುವ ಪ್ರಾಚೀನ ಕಾಲದ ಅನೇಕ ಕೆರೆ ಮತ್ತು ಬಾವಿಗಳೇ

ಮಾದರಿಯಾಗಿವೆ. ರಾಜರು, ಶ್ರೀಮಂತರು, ಅಧಿಕಾರಿಗಳು ಮತ್ತು ಗ್ರಾಮ ಸಂಸ್ಥೆಗಳು ಕೆರೆ ಬಾವಿಗಳನ್ನು ತೋಡಿಸುವುದು, ಪುಣ್ಯಕಾರ್ಯ ಎಂದು ನಂಬಿದ್ದರಲ್ಲದೇ ಅದನ್ನು ನಾಶಪಡಿಸುವುದು ಅತ್ಯಂತ ಪಾಪಕರವೆಂಬ ಭಾವನೆ ಅಂದಿನ ಸಮಾಜದಲ್ಲಿ ಬೇರೂರಿತ್ತು. ಈ ಒಂದು ನೀರಾವರಿಯ ಅನುಕೂಲತೆಯಿಂದ ರೈತರು ಅನೇಕ ರೀತಿಯ ಏಕದಳ, ದ್ವಿದಳ ಮತ್ತು ಸಾಂಬಾರ ಪದಾರ್ಥಗಳನ್ನು ಬೆಳೆಯುತ್ತಿದ್ದುದು ನಮಗೆ ತಿಳಿಯುತ್ತದೆ.

ಮಾರುಕಟ್ಟೆ

ಹುಬ್ಬಳ್ಳಿಯಲ್ಲಿ ವಾರಕ್ಕೊಮ್ಮೆ ಬಜಾರ ಅಥವಾ ಸಂತೆ ನಡೆಯುತ್ತಿತ್ತು ಕಾಲಾನಂತರದಲ್ಲಿ ಇದರ ಪ್ರಭಾವದಿಂದ ಸಂತೆಗಳು ಮಧ್ಯಕಾಲೀನ ಕರ್ನಾಟಕದ ಪ್ರತಿಯೊಂದು ಪಟ್ಟಣದಲ್ಲಿಯೂ ಜರುಗುತ್ತಿದ್ದವು, ಪೇಟೆಯನ್ನು ಸ್ಥಾಪಿಸುವಾಗ ಸ್ಥಳೀಯ ವರ್ತಕರಿಗೆ ಹೆಚ್ಚಿನ ಪ್ರಾಶಸ್ತ್ಯಕೊಡಲಾಗುತ್ತಿದ್ದು ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಮಂಗಳವಾರ ಪೇಟೆ, ಜವಳಿಸಾಲು, ಕೌಲಪೇಟೆ, ಅಕ್ಕಿಪೇಟೆ, ಪಾನ್‌ಬಜಾರ್, ಜಂಗ್ಲಿಪೇಟೆ, ದಾಜಿಬಾನ್‌ಪೇಟೆ ಇತ್ಯಾದಿ ಮಾರುಕಟ್ಟೆಗಳು ಸ್ಥಾಪಿತವಾದವು.[೪೪]

ಪೇಟೆಯ ಹಕ್ಕುದಾರರು

ಪೇಟೆಯ ಮೇಲ್ವಿಚಾರಣೆಗಾಗಿ 'ಅಗೋಲೆ' ಎಂಬ ಅಧಿಕಾರಿಯನ್ನು ನೇಮಿಸಿಕೊಳ್ಳಲಾಗುತ್ತಿತ್ತು.[೪೫] ಪೇಟೆಯಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದು ಹಾಗೂ ವರ್ತಕರ ನಡುವಿನ ವ್ಯಾಜ್ಯಗಳನ್ನು ಬಗೆಹರಿಸುವುದು. ತೂಕ ಮತ್ತು ಮಾಪನಗಳ ಮೇಲೆ ನಿಗಾ ಇಟ್ಟು ವರ್ತಕರಿಗೆ ಪೂರೈಸುವುದು ಆಗೋಲೆ ಎಂಬ ಅಧಿಕಾರಿಯ ಕರ್ತವ್ಯವಾಗಿತ್ತು. ಅಲ್ಲದೇ ದೇಸಾಯಿ, ದೇಶಪಾಂಡೆ, ಪಾತಕಿ, ಗುಣಾರಿ, ಜಂಗಮ, ಫಕೀರ, ಚಲವಾದಿ, ಕುಲಕರ್ಣಿ, ಇನ್ನೂ ಮುಂತಾದವರು ಪೇಟೆಯ ಹಕ್ಕುದಾರರಾಗಿದ್ದರು[೪೬]

ಆಮದು ಮತ್ತು ರಫ್ತು

ಪ್ರಸ್ತುತ ಅಧ್ಯಯನ ಪ್ರದೇಶಕ್ಕೆ ಮುಂಬೈಯಿಂದ ನೂಲು, ಕಸ್ತೂರಿ, ತೆಂಗಿನಕಾಯಿ, ಕೊಬ್ಬರಿ, ಗಾಂಜಾ, ಕಂಬಳಿ, ಮೆಣಸಿನಕಾಯಿ, ತಂಬಾಕು, ಅಡಿಕೆ ಹಾಗೂ ಗೋವಾದಿಂದ ರೇಷ್ಮೆ, ಉಣ್ಣೆ, ಅಕ್ಕಿ ಇತರೆ ಪದಾರ್ಥಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಹಾಗೆಯೇ ಹರಳೆ, ಕುಸುಬೆ, ಹಿತ್ತಾಳೆಗಳ ಪಾತ್ರೆಗಳು ಉಳ್ಳಾಗಡ್ಡಿ, ಬೆಳ್ಳುಳ್ಳಿ ಇನ್ನೂ ಮುಂತಾದ ಪದಾರ್ಥಗಳು ರಫ್ತಾಗುತ್ತಿದ್ದವು.[೪೭]

ವಾಣಿಜ್ಯ ಮತ್ತು ವ್ಯಾಪಾರ

ವ್ಯಾಪಾರ ಕೇಂದ್ರವೆಂದೇ ಪ್ರಸಿದ್ಧವಾದ ಹುಬ್ಬಳ್ಳಿಗೆ ಗದಗ, ಬ್ಯಾಡಗಿ, ಮುಂಡರಗಿ, ಹಾವೇರಿ, ಧಾರವಾಡ, ನರಗುಂದ, ಗುಳೇದಗುಡ್ಡ ಗಜೇಂದ್ರಗಡ, ಮುಂತಾದ ವಾಣಿಜ್ಯ ಕೇಂದ್ರಗಳಿಂದ ವ್ಯಾಪಾರದ ಸಾಮಾಗ್ರಿಗಳನ್ನು ಪೂರೈಸಲಾಗುತ್ತಿತ್ತು. ಹಾಗೆಯೇ ಹಾವೇರಿ, ಮಿಶ್ರಿಕೋಟೆ, ಇತರೆ ಪ್ರದೇಶಗಳಿಂದ ವರ್ತಕರು ಹುಬ್ಬಳ್ಳಿಗೆ ವ್ಯಾಪಾರ ಮಾಡಲು ಬರುತ್ತಿದ್ದರು.[೪೮]

ತೆರಿಗೆ

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಹಲವಾರು ರೀತಿಯ ತೆರಿಗೆಯನ್ನು ಗುರುತಿಸಲಾಗಿದ್ದು. ಹಾವೇರಿ ಕೆರ ಮಿಶ್ರಿಕೋಟೆಕರ, ಕಲಘಟಗಿಕರ,ಮೊರಬಕರ, ನೆಗಳೂರಕರ, ಕಡಕೋಳ್‌ಕರ, ಕೋಳಿವಾಡಕರ ಹಾವನೂರ ಕರ, ಇನ್ನೂ ಮುಂತಾದ ಊರಿನ ವಿಶೇಷಣಗಳು ಇಲ್ಲಿಗೆ ಬರುತ್ತಿದ್ದು; ಇವು ವ್ಯಾಪಾರಕ್ಕೋಸ್ಕರ ಎಂದು ಇಲ್ಲಿನ ಸ್ಥಳಗಳನ್ನು ತಿಳಿಸುತ್ತದೆ. ಇವರಿಂದ 'ಕಾವತ್' ಎಂಬ ತೆರಿಗೆಯನ್ನು ವಸೂಲು ಮಾಡಲಾಗುತಿತ್ತು.[೨೯] ಜವಳಿ, ಸರಾಪ್ ತೇಲಿ, ಕಾಸಾರ, ಸಿಂಪತಾಂಬೋಳಿ ಬಾಗವಾನ ಇವರಿಂದ 'ಮೊಹತರ್ಫಾ' ಎಂಬ ತೆರಿಗೆಯನ್ನು ಮತ್ತು ವ್ಯಾಪಾರಸ್ಥರ ಕಡೆಯಿದಂ 'ಜಕಾತಿ' ಎಂಬ ತೆರಿಗೆಯನ್ನು ವಸೂಲು ಮಾಡಲಾಗುತ್ತಿತ್ತು.[೩೦]

ಬೆಳೆಗಳು

ಈ ಅಧ್ಯಯನ ಪ್ರದೇಶದಲ್ಲಿ ಅನೇಕ ಶ್ರೀಮಂತ ವ್ಯಾಪಾರಿಗಳಾದ ಶೆಟ್ಟರು, ಜೈನರು, ಮಾರವಾಡಿಗಳು ಶೀಲವಂತರು, ಮುಂತಾದವರು ಉತ್ತರದಲ್ಲಿ ಸೂರತ್, ಪೂರ್ವ ಹೈದ್ರಾಬಾದ್ ಹಾಗೂ ದಕ್ಷಿಣದ ಶ್ರೀರಂಗಪಟ್ಟಮದವರೆಗೂ ಸಂಪರ್ಕವನ್ನಿಟ್ಟುಕೊಂಡಿದ್ದರು ಎಂಬ ವಿಷಯ ತಿಳಿಯುತ್ತದೆ. ಕ್ರಿ.ಶ. ೧೮೧೬ ರ ಒಂದು ಘಡನಿಯ ಪ್ರಕಾರ[೩೧] ದರದ ಉಲ್ಲೆಖಗಳು ಇಂತಿದ್ದು ಒಂದು ರೂಪಾಯಿಗೆ ಜೋಳ ೧೬ ಸೇರು, ಅಕ್ಕಿ, ೭.೫೦, ಗೋಧಿ, ೬.೭೫, ಬೆಲ್ಲ ೧೦.೧೦, ಕಡಲೆ ೪, ಸಕ್ಕರೆ ೫, ಎಂಬ ಬೆಳೆಗಳನ್ನು ನಿಗದಿಪಡಿಸಿದ್ದರು.

ತೂಕ ಮತ್ತು ಅಳತೆ

ತೂಕ ಮತ್ತು ಮಾಪನಗಳ ಹೆಸರುಗಳು ಒಂದೇ ಇದ್ದು ಅವುಗಳ ಪ್ರಮಾಣಗಳು ಬೇರೆ ಬೇರೆ ಇರುತ್ತಿದ್ದವು. ಇವರಿಂದ ಜನಸಾಮಾನ್ಯರಿಗೆ ಮೋಸ ಆಗುತ್ತಿತ್ತು. ಅಕ್ಕಿ, ಜೋಳ, ಕಡಲೆ ಮುಂತಾದ ಕಾಳು ಕಡಿಗಳನ್ನು ಗಲಾಕೃತಿ (ಕಾಯಲಿ) ಎಂಬ ಮಾಪನದಿಂದ ಅಳೆಯುತ್ತಿದ್ದರೆ ತುಪ್ಪ, ಬೆಣ್ಣೆಯನ್ನು 'ವಜನೀ', ವಜನ ಎಂಬ ಮಾಪನದಿಂದ ಅಳೆಯುತ್ತಿದ್ದರು. ಹಾಗೆಯೇ ಹಣ್ಣು, ಬಟ್ಟೆ, ತೆಂಗಿನ ಕಾಯಿ ಇವುಗಳಿಗೆ ಸುಮಾರೀ ಅಥವಾ ಸುಮಾರ ಎಂಬ ಮಾಪನ ಬಳಕೆಯಲ್ಲಿ ಇದ್ದುದು ತಿಳಿಯುತ್ತದೆ.[೩೨]

ಅಳತೆ

ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಅಳತೆಗಳ ಬಗ್ಗೆ ಗುರ್ತಿಸುವುದಾದರೆ. ೧ಖಂಡಿ ೨೦ ಮಣ, ೧ ಮಣ ೧೨ ಪಾವಲಿ, ೧ ಪಾವಲಿ-೪ಸೇರು, ೧ ಸೇರು೧೬ ಚಟಾಕುಗಳು ಬಳಕೆಯಲ್ಲಿತ್ತು. ಹೀಗೆ ಪರಿಮಾಣ ಇದ್ದು ಸೇರಿನಲ್ಲಿ ಪಕ್ಕಾ ಪಕೆ ಮತ್ತು ಕಚ್ಚಾ ಕಚೆ ಎಂಬ ಎರಡು ಪ್ರಕಾರಗಳು ಕಂಡುಬರುತ್ತವೆ. ಆದರೆ ಪಕ್ಕಾಸೇರು ಕಚ್ಚಾ ಸೇರಿಗಿಂತ ಮೂರು ಪಟ್ಟ ಇರುತ್ತಿದ್ದು. ಕಚ್ಚಾ ಸೇರು ೨೪ ಕಟೆಗಳಿಗೆ ಸಮನಾಗುತ್ತಿದ್ದವು.[೩೩]

ನಾಣ್ಯ ಪದ್ಧತಿ

ಪ್ರಸ್ತುತ ಅಧ್ಯಯನದಲ್ಲಿ ಬೆಳ್ಳಿ, ಬಂಗಾರ, ಮತ್ತು ತಾಮ್ರ ನಾಣ್ಯಗಳು ಇದ್ದದು ಕಂಡುಬರುತ್ತವೆ. ಶಿವಾಜಿಯು ಹೊನ್ ಎಂಬ ಸುವರ್ಣ ನಾಣ್ಯವನ್ನು ಮತ್ತು ಶಿವರಾಯ ಎಂಬ ತಾಮ್ರದ ನಾಣ್ಯ ಹೊರತಂದನು. ಹಾಗೆಯೇ ಪೇಶ್ವೆಯರು ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಹೊರತಂದರು. ವಾಡಿಕೆಯಾಗಿ ವರಹ ಅಥವಾ ಹೊನ್ನ ಎಂಬ ನಾಣ್ಯಗಳು ಚಲಾವಣೆಯಲ್ಲಿದ್ದವು. ಶಹಪುರೀ ಧಾರವಾಡ, ನೀಲಕಂಠಿ, ಚಂದೋಡಿ, ಪೆರೆಖಾನಿ ಇವು ಬೆಳ್ಳಿಯ ನಾಣ್ಯಗಳಾಗಿದ್ದು ಹಾಗೆಯೇ ಶಾಹಾಪೈಸಾ[೨೨] ಎಂಬ ತಾಮ್ರದ ನಾಣ್ಯವು ಚಲಾವಣೆಯಲ್ಲಿದ್ದಿತು. ಅದಕ್ಕೆ ದುಡ್ಡು ಎನ್ನುತ್ತಿದ್ದರು. ಬೇರೆ ನಾಣ್ಯಗಳ ವಿನಿಮಯ ಮಾಡಬೇಕಾದರೆ ಸರ್ಕಾರಕ್ಕೆ ಬಿಟ್ಟಾಲ್ ಕಮೀಷನ್ ಕೊಡಬೇಕಾಗುತ್ತಿತ್ತು. ಈ ಮೇಲಿನ ಅಂಶಗಳಿಂದ ಇಲ್ಲಿನ ವ್ಯಾಪಾರ ಬರದಿಂದ ಸಾಗುತ್ತಿತ್ತೆಂಬ ಸಂಗತಿ ತಿಳಿದುಬರುತ್ತದೆ.

ಅಡಿಟಿಪ್ಪಣಿಗಳು

೦೧. ಎ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ, ಇತಿಹಾಸ ದರ್ಶನ ೧೯೭೦, ಪು. ೮೨-೮೩

೦೨. ಸೂರ್ಯನಾಥ ಕಾಮತ್ ಭಾರತದ ಗ್ಯಾಜಿಟಿಯರ್ ಕರ್ನಾಟಕ ರಾಜ್ಯ ಧಾರವಾಡ ಜಿಲ್ಲೆ ಪರಿಷ್ಕೃತ ಆವೃತ್ತಿ ಪು. ೫೨

೦೩. ಶ್ರೀನಿವಾಸ ಪಾಡಿಗರ ಹಚ್ಚೆವು ಕನ್ನಡದ ದೀಪ ಪು. ೨೩

೦೪. ಸೂರ್ಯನಾಥ ಕಾಮತ್ ಭಾರತದ ಗ್ಯಾಜಿಟಿಯರ್ ಪೂರ್ವೋಕ್ತ ಪು. ೫೪-೫೬

೦೫. ಸಂಯುಕ್ತ ಕರ್ನಾಟಕ ದಿನಪತ್ರಿಕೆ ದಿ. ೧೧.೧೧.೧೯೯೨ ಪು. ೪

೦೬. ಆರ್.ಎನ್. ಗುರವ ಪರಂಜ್ಯೋತಿ ಸೆಪ್ಟೆಂಬರ್ ೧೯೭೬ ಸಂ-೯, ಸಂಚಿಕೆ-೭, ಪು. ೫೦

೦೭. ಸಂಯುಕ್ತ ಕರ್ನಾಟಕ ಪೂರ್ವೋಕ್ತ ಪು. ೮

೦೮. ಆರ್.ಎನ್. ಗುರವ, ಪೂರ್ವೋಕ್ತ ಪು. ೫೦

೦೯. ಅದೇ ಪು

೧೦. ಅದೇ ಪು

೧೧. ಅದೇ ಪು

೧೨. ಅದೇ ಪು

೧೩. ಸಂಯುಕ್ತ ಕರ್ನಾಟಕ ಪೂರ್ವೋಕ್ತ ಪು. ೪

೧೪. ಆರ್.ಎನ್. ಗುರವ ಪೂರ್ವೋಕ್ತ ಪು. ೫೨

೧೫. ಸಂಯುಕ್ತ ಕರ್ನಾಟಕ ಪೂರ್ವೋಕ್ತ ಪು. ೮

೧೬. ಅದೇ ಪು.

೧೭. ಸೂರ್ಯನಾಥ ಕಾಮತ್ ಭಾರತದ ರಾಜ್ಯಗೆಜಿಟಿಯರ್ ಪೂರ್ವಕ್ತ ಪು. ೯೧

೧೮. ಅದೇ ಪು ೯೨

೧೯. ಅದೇ ಪು. ೧೦೪೧

೨೦. ಅದೇ ಪು.

೨೧. ಅದೇ ಪು.

೨೨. ಎಪಿಗ್ರಾಫಿಕಾ ಇಂಡಿಕಾ ಸಂಪುಟ-XXVIII ಪು-೬೨ ಕ್ರಿ.ಶ. ೫೭೮ ಪು-೪೨೮

೨೩. ಅದೇ ಪು.

೨೪. N.K. Dutt origin and growth of caste in India p. 37

೨೫. The ordinance of Manu (Tr. Burnele) Pf 306-308

೨೬. ಮೆಕೆಂಜಿ ಮ್ಯಾನುಸ್ಕ್ರಿಪ್ಟ್ ಸಂಪುಟ-VIII ಅನಡೆಟೆಡ್ ಇನ್‌ಸ್ಕ್ರಿಪ್‌ಷನ್ಸ್ ವೆಲ್ಲೂರಬ್ರಹ್ಮರೆಡ್ಡಿ ಪು. ೧೩೩

೨೭. ಕು ಶಾಂತಪ್ಪ ಕೆ.ಪೂಜಾರ್. ಹುಬ್ಬಳ್ಳಿ ಒಂದು ಸಾಂಸ್ಕೃತಿಕ ಅಧ್ಯಯನ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೨೦೦೮, (ಅಪ್ರಕಟಿತ ಪಿಎಚ್.ಡಿ. ಪ್ರಬಂಧ) ಪು. ೫೪

೨೮. ಮೈಸೂರು ವಿಶ್ವವಿದ್ಯಾಲಯ ಕನ್ನಡ ವಿಶ್ವಕೋಶ ಸಂಪುಟ -IV ಪು. ೧೩೮

೨೯. ಕು.ಶಾಂತವ್ವ ಕೆ.ಪೂಜಾರ್. ಪೂರ್ವೋಕ್ತ ಪು.೮೨

೩೦. .ಆರ್.ಎನ್.ಗುರುವ ಪೂರ್ವೋಕ್ತ, ಪು. ೮೯

೩೧. ಅದೇ ಪು. ೯೦

೩೨. ಅದೇ ಪು.

೩೩. ಶೇಷನವರತ್ನ ಜಾಗತಿಕ ಧರ್ಮಗಳು ಪು. ೧೦೦

೩೪. ಆರ್.ಎನ್.ಗುರುವ ಪೂರ್ವೋಕ್ತ ಪು. ೫೩

೩೫. ಅದೇ ಪು.

೩೬. ಎಂ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ ಪೂರ್ವೋಕ್ತ ಪು. ೭೫೧

೩೭. ಆರ್.ಎನ್.ಗುರುವ ಪೂರ್ವೋಕ್ತ ಪು. ೬೧

೩೮. ಅದೇ ಪುಟ ೬೧

೩೯ ಕು.ಶಾಂತಪ್ಪ ಕೆ.ಪೂಜಾರ, ಪೂರ್ವೋಕ್ತ ಪು. ೬೩

೪೦. ಕದಂಬ ಕುಲ, ೧೯೩೧ ಪು. ೪೭೦

೪೧. ಆರ್.ಎನ್.ಗುರುವ ಪೂರ್ವೋಕ್ತ ಪು. ೬೨

೪೨. ಅದೇ ಪುಟ ೬೩

೪೩. ಕದಂಬಕುಲ ೧೯೩೧, ಪು. ೪೬೯

೪೪. ಪುಣೆಪತ್ರಗಾರ ಇಲಾಖೆ ಕರ್ನಾಟಕ ಜಮಾವು ಯಾವಿ ನಂ. ೪೯

೪೫. ಅದೇ ಪು. ೫

೪೬. ಸೂರ್ಯನಾಥ ಕಾಮತ್ ಮತ್ತು ದೇವರಕೊಂಡಾರೆಡ್ಡಿ ಇತಿಹಾಸ ದರ್ಶನ ೧೯೯೩, ಸಂಚಿಕೆ-೮ ಡಾ.ಎಂ.ವಾಯ್. ಸಾವಂತ ಅವರ ಲೇಖನದಿಂದ ಪು. ೧೭೧

೪೭. ಅದೇ ಪುಟ

೪೮. ಅದೇ ಪುಟ

೪೯. ಪುಣೆ ಪತ್ರಗಾರ ಇಲಾಖೆ ಪೂರ್ವೋಕ್ತ ಜಮಾವು ಪು .೧೦

೫೦. ಸೂರ್ಯನಾಥ ಕಾಮತ್ ಮತ್ತು ದೇವರಕೊಂಡಾರೆಡ್ಡಿ ಪೂರ್ವೋಕ್ತ ಪು. ೧೭೧

೫೧. ಅದೇ ಪುಟ ೧೭೧-೧೭೨

೫೨. ದಕ್ಷಿಣ ಕಮಿಷನರ ದಪ್ತರ ಮರಾಠಿ ರುಮಾಲ ನಂ-೧೫೯

೫೩. ಪುಣೆ ಪತ್ರಗಾರ ಇಲಾಖೆ, ಪೂರ್ವೋಕ್ತ ರುಮಾಲ ನಂ. ೧

೫೪. ಸೂರ್ಯನಾಥ ಕಾಮತ್ ಮತ್ತು ದೇವರಕೊಂಡಾರೆಡ್ಡಿ ಪೂರ್ವೋಕ್ತ ೧೭೨

ಅಧ್ಯಾಯ ೩

ಶಾಸನಗಳ ವೈವಿಧ್ಯತೆ

೩.೧. ಪೀಠಿಕೆ

೩.೨. ದಾನಶಾಸನಗಳು

೩.೩. ವೀರಗಲ್ಲು

೩.೪. ಮಾಸ್ತಿಗಲ್ಲು ಶಾಸನಗಳು

೩.೫. ನಿಷಿಧಿಗಲ್ಲು ಶಾಸನಗಳು

೩.೬. ಇತರೆ ಶಾಸನಗಳು

ಅಧ್ಯಾಯ ೩

ಶಾಸನಗಳ ವೈವಿಧ್ಯತೆ

೩.೧. ಪೀಠಿಕೆ

ಶಾಸನ ಎಂಬ ಪದವು ಶಾಸ್ ಎಂಬ ಮೂಲ ಧಾತುವಿನಿಂದ ಬಂದಿದ್ದು 'ಶಾಸ್' ಎಂದರೆ ಆಜ್ಞಾಪಿಸು, ನಿಯಂತ್ರಿಸು, ಶಿಕ್ಷಿಸು, ಎಂದು ಅರ್ಥ ನೀಡುತ್ತದೆ. ಶಾಸನ ಶಬ್ದಕ್ಕೆ ಕಾಯ್ದಿ ಕಾನೂನು ಎಂಬ ಅರ್ಥ ಪ್ರಚಲಿತದಲ್ಲಿದೆ. ಶಾಸನ ಎಂದರೆ ಕೇವಲ ರಾಜನ ಆಜ್ಞಾ ಎಂಬ ಕಲ್ಪನೆಯನ್ನು ಹೊಂದಿದ್ದವು. ಪ್ರಸ್ತುತ ಶಾಸನ ಶಬ್ದಕ್ಕೆ ಸಮಾನಾರ್ಥವಾಗಿ ಇಂಗ್ಲೀಷ್‌ನಲ್ಲಿ 'Inscription' ಎಂಬ ಪದವನ್ನು ಬಳಸಲಾಗುತ್ತಿದೆ. 'Inscrib' ಎಂದರೆ ಕೊರೆಯಲ್ಪಟ್ಟ ಬರಹ ಎಂಬ ಅರ್ಥಯ. ಒಟ್ಟಾಗಿ ಶಾಸನ ಎಂದರೆ ಒಂದು ಗಟ್ಟಿಯಾದ ವಸ್ತುವಿನ ಮೇಲೆ ಶಾಶ್ವತವಾಗಿ ಉಳಿಯುವಂತೆ ಕೊರೆಯಲ್ಪಟ್ಟ ಬರಹ.[೧]

ಶಾಸನಗಳನ್ನು ರಚಿಸಲು ಶಿಲೆ ಲೋಹ ಮಣ್ಣಿನವಸ್ತುಗಳು, ದಂತ, ಮರಗಳು, ಶಂಖವನ್ನು ಬಳಸಲಾಗಿದೆ. ಪ್ರಸ್ತುತ ಕರ್ನಾಟಕದಲ್ಲಿ ಕಲ್ಲಿನ ಮೇಲೆ ತಾಮ್ರಪಟಗಳ ಮೇಲೆ ಸ್ತಂಭಗಳ ಮೇಲೆ ದೇವಸ್ಥಾನಗಳ ಗೋಡೆಗಳ ಮೇಲೆ ವಿಗ್ರಹ ಪೀಠಗಳ ಮೇಲೆ ಪಾತ್ರೆಗಳ ಮೇಲೆ ರಚಿತಗೊಂಡಿದೆ.

ಪ್ರಸ್ತುತ ಶಾಸನಗಳ ವಸ್ತುವೈವಿಧ್ಯತೆ ಇದ್ದಂತೆ ವಿಷಯದಲ್ಲು ವೈವಿಧ್ಯೆತೆಗಳಿವೆ. ಈ ಹಿನ್ನೆಲಯನ್ನು ಆಧರಿಸಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿಗೆ ಸೀಮಿತಮಾಡಿಕೊಂಡು ಇಲ್ಲಿ ದೊರೆತ ಶಾಸನಗಳ ವೈವಿದ್ಯತೆಯ ಚಿತ್ರವನ್ನು ಈ ಕೆಳಗೆ ನೀಡಲಾಗಿದೆ.

೩.೨. ದಾನ ಶಾಸನಗಳು

ದಾನಶಾಸನಗಳು ಹೆಚ್ಚಾಗಿ ಧಾರ್ಮಿಕ ದತ್ತಿಯನ್ನುಳ್ಳ ಶಾಸನಗಳಾಗಿವೆ. ಈ ಶಾಸನಗಳ ಧಾರ್ಮಿಕ ದತ್ತಿಯ ಉದ್ದೇಶಿಸುವುದರ ಜೊತೆಗೆ ಖಾಸಗಿ ವ್ಯಕ್ತಿಗಳಿಗೆ ನೀಡಿದ ದಾನಗಳನ್ನು ದಾಖಲುಮಾಡಿದೆ. ಉದಾ: ದೇವಾಲಯದಲ್ಲಿ ನಡೆಯುವ ಪೂಜೆಪುನಸ್ಕಾರಗಳಿಗೂ, ಪೂಜಾರಿಗಳಿಗೂ, ನರ್ತಿಸುವ ನರ್ತಕಿಯರಿಗೂ, ವಾದ್ಯಗಾರರಿಗೂ, ಮಠದಲ್ಲಿ ನಡೆಯುವ ವಿದ್ಯಾದಾನಕ್ಕೂ ಅಲ್ಲಿನ ಅಧ್ಯಾಪಕ ಮತ್ತು

ವಿದ್ಯಾರ್ಥಿವೃಂದಕ್ಕೂ ಲೋಕೋಪಯೋಗಿ ಕಾರ್ಯಗಳಾದ ಕೆರೆ, ಬಾವಿ, ಅರವಟ್ಟಿಗೆ, ಇವುಗಳಗಲ್ಲದೇ ವ್ಯಕ್ತಿಯೊಬ್ಬನ ಸೇವೆ ಪರಾಕ್ರಮಗಳನ್ನು ಮನ್ನಿಸಿಯೇ ನೀಡಿದ ದಾನವಾಗಿರುತ್ತದೆ.[೨] ದಾನವಾಗಿ ನೀಡುವ ಆರ್ಥಿಕ ಮೂಲ ಭೂಮಿಯಾಗಿರಬಹುದು. ನಗದು ರೂಪದ ಹಣವಾಗಿರಬಹುದು ಅಥವಾ ಅಗತ್ಯವಸ್ತುಗಳ ಪೂರೈಕೆ ಇರಬಹುದು. ಪ್ರಸ್ತುತ ಈ ಒಂದು ಅಧ್ಯಯನದಲ್ಲಿ ಒಟ್ಟು ೧೫ ಹಳ್ಳಿಗಳಲ್ಲಿ ಸುಮಾರು ೩೭ಕ್ಕಿಂತಲೂ ಹೆಚ್ಚಿನ ದಾನ ಶಾಸನಗಳಿವೆ. ಇಲ್ಲಿ ಪ್ರಮುಖವಾಗಿ ಅತಿ ಹೆಚ್ಚು ದಾನ ಶಾಸನಗಳು ನೂಲ್ವಿ, ಬ್ಯಾಹಟ್ಟಿಗಳಲ್ಲಿ ದೊರೆತಿದ್ದು ಇತರೆ ಹಳ್ಳಿಗಳಲ್ಲಿ ಸ್ವಲ್ಪಮಟ್ಟಿಗೆ ದೊರೆತಿದೆ.

೧.	ಸ್ಥಳ	:	ಕಲ್ಮೇಶ್ವರ ಗುಡಿಕಂಬ
	ಗ್ರಾಮ	:	ಕಟ್ನೂರು
	ಮಹಾಮಂಡಳೇಶ್ವರ	:	ಗೋವೆಯ ಕದಂಬ
	ಅರಸ	:	ತ್ರಿಭುವನಮಲ್ಲ
	ಕಾಲಮಾನ	:	ಕ್ರಿ.ಶ. ೧೨೪೨

ಸಾರಾಂಶ : ರಟ್ಟೆನೂರ ಮೂಲಸ್ಥಾನ ದೇವರಿಗೆ ಇಂದೆಯ ಸಾಹಣಿಯು ಭೂ ದತ್ತಿ ನೀಡಿದ್ದಾನೆ ಎಂಬ ವಿಷಯವಿದೆ.[೩]

೨.	ಸ್ಥಳ	:	ಬಸವಣ್ಣಗುಡಿ
	ಗ್ರಾಮ	:	ಕಟ್ನೂರು
	ರಾಜವಂಶ	:	ದೇವಗಿರಿಯಾದವರ ಅರಸರಾಮಚಂದ್ರ

ಅಕ್ಷರಗಳು ಸವೆದಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ಬಿಟ್ಟ ದತ್ತಿ ಬಗ್ಗೆ ತಿಳಿಸುತ್ತದೆ.[೪]

೩.	ಸ್ಥಳ	:	ಈಶ್ವರ ದೇವಾಲಯ
	ಗ್ರಾಮ	:	ಕುರಡಿಕೇರಿ
	ರಾಜವಂಶ	:	ಕಲ್ಯಾಣ ಚಾಲುಕ್ಯ
	ಕಾಲಮಾನ	:	ಕ್ರಿ.ಶ. ೧೧೦೮

ದಂಡನಾಯಕ ಅನಂತಪಾಳನ ಸುಂಕಾಧಿಕಾರಿ ನಾರಾಯಣದೇವನಿಂದ ಭೋಜಂಗೇಶ್ವರ ದೇವರಿಗೆ ಸುಂಕದಾನ ನೀಡಲಾಗಿದೆ.[೫]

೪.	ಸ್ಥಳ	:	ಈಶ್ವರ ಗುಡಿ
	ಗ್ರಾಮ	:	ಕುರಡಿಕೇರಿ
	ಮಹಾಮಂಡಳೇಶ್ವರ	:	ಗೋವೆಯ ಕದಂಬ
	ಅರಸ	:	ಆರನೆಯ ವಿಕ್ರಮಾದಿತ್ಯ
	ಕಾಲಮಾನ	:	ಕ್ರಿ.ಶ. ೧೧೨೬

ಗೋವೆಯ ಕದಂಬ ಅರಸ ಜಯಕೇಶಿದೇವನು ಗೋವೆಯಿಂದ ಆಳ್ವಿಕೆ ನಡೆಸುತ್ತಿರುವಾಗ ಮೈಳಾಲದೇವಿಯು ಕುಂದೂರು ನೆಲೆವೀಡನ್ನು ನೋಡಿಕೊಳ್ಳುತ್ತಿದ್ದಳು. ಆ ಸಮಯದಲ್ಲಿ ರಾಣಿ ಮೈಳಾಲ ದೇವಿಯು ಕುಡಿಯೇಶ್ವರ ದೇವರಿಗೆ ದತ್ತಿ ನೀಡಿದ್ದುದರ ಜೊತೆಗೆ ಅರವತ್ತೂಕ್ಕಲರು ತಮ್ಮ ತೋಟದ ಎಲೆ ಅಡಿಕೆ ನೀಡಿದರು. ಲಚ್ಚಿಕಬ್ಬೆ ದೇವರ ನಂದಾದೀವಿಗೆಗೆ ಎಣ್ಣೆಯನ್ನು ನೀಡಿದ್ದಳು.[೬]

೫.	ಸ್ಥಳ	:	ಕೆರೆದಂಡೆ
	ಗ್ರಾಮ	:	ಬ್ಯಾಹಟ್ಟಿ ಹೊಲ
	ರಾಜವಂಶ	:	ಕಲ್ಯಾಣಚಾಲುಕ್ಯ
	ಅರಸ	:	ಇಮ್ಮಡಿ ಜಯಸಿಂಹ
	ಕಾಲಮಾನ	:	ಕ್ರಿ.ಶ. ೧೦೩೭

ಶಾಸನ ತ್ರುಟಿತವಾಗಿದೆ. ವಾವರಸ ಮತ್ತು ೧೨ ಗಾವುಂಡರು ಜಿನಾಲಯಕ್ಕೆ ದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ.[೭]

೬.	ಸ್ಥಳ	:	ಚಿಕ್ಕಮಠದ ಹತ್ತಿ
	ಗ್ರಾಮ	:	ಬೆಳಗಲಿ
	ರಾಜವಂಶ	:	ಕಲ್ಯಾಣ ಚಾಲುಕ್ಯ
	ಅರಸ	:	ಜಯಸಿಂಹದೇವ
	ಕಾಲಮಾನ	:	ಕ್ರಿ.ಶ. ೧೦೪೨

ಶಾಸನ ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಸಬ್ಬಿನಾಡಿನಲ್ಲಿ ಗೋವೆಯ ಕದಂಬ ಅರಸನೊಬ್ಬ ಕೆರೆ ಕಟ್ಟಿಸಿ ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ.[೮]

೭.	ಸ್ಥಳ	:	ಕಲ್ಮೇಶ್ವರ ದೇವಾಲಯದಗೋಡೆ
	ಗ್ರಾಮ	:	ಬ್ಯಾಹಟ್ಟಿ
	ಮಹಾಮಂಡಳೇಶ್ವರ	:	ಗೋವೆಯ ಕದಂಬ
	ಅರಸ	:	ಪೆರ್ಮಾಡಿದೇವ
	ಕಾಲಮಾನ	:	ಕ್ರಿ.ಶ. ೧೧೬೬

ಶಾಸನದ ಅಕ್ಷರ ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಗ್ರಾಮೇಶ್ವರ ದೇವರಿಗೆ ಬಿಟ್ಟ ದತ್ತಿಯ ಬಗ್ಗೆ ತಿಳಿಸುತ್ತದೆ.[೯]

೮.	ಸ್ಥಳ	:	ವಲ್ಲಭೇಶ್ವರ ದೇವಾಲಯದ ಹಿಂಭಾಗ
	ಗ್ರಾಮ	:	ಮಂಟೂರು
	ರಾಜವಂಶ	:	ಕಲ್ಯಾಣ ಚಾಲುಕ್ಯ
	ಅರಸ	:	ಇಮ್ಮಡಿ ಸೋಮೇಶ್ವರ
	ಕಾಲಮಾನ	:	ಕ್ರಿ.ಶ. ೧೦೭೨

ಸುಸ್ಥಿತಿಯಲ್ಲಿರುವ ಈ ಶಾಸನದ ಅಕ್ಷರಗಳು ಸವೆದಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಮಹಾಮಂಡಳೇಶ್ವರ ಲಕ್ಷರಸನು ಮಂಟೂರು ರುದ್ರಶಕ್ತಿ ಪಂಡಿತರಿಗೆ ನೀಡಿದ ಭೂ ದತ್ತಿ ಬಗ್ಗೆ ಉಲ್ಲೇಖವಿದೆ.[೧೦]

೯. ಸ್ಥಳ : ಸರ್ವೆ ನಂ. ೨೧೭ ಹೊಲದಲ್ಲಿ

ಗ್ರಾಮ : ನೂಲ್ವಿ

ರಾಜವಂಶ : ಕಲ್ಯಾಣದ ಚಾಲುಕ್ಯ

ಅರಸ : ಇಮ್ಮಡಿ ಸೋಮೇಶ್ವರ ಮಹಾಮಂಡಳೇಶ್ವರ

ಮಹಾಮಂಡಳೇಶ್ವರ ಗೋವೆಯ ಕದಂಬ ಅರಸ ಚಟ್ಟಿಯದೇವ

ಕಾಲಮಾನ : ಕ್ರಿ.ಶ. ೧೦೭೩

ಮಾಂಡಳಿಕ ಜಯಕೇಶಿ ದೇವರಸ ಮತ್ತು ಬೊಪ್ಪಲದೇವಿಯರು ಕೊಂಕಣ್ಣ ೯೦೦ ಪಲಸಿಗೆ ೧೨೦೦, ಕುಂದೂರು ೫೦೦, ಸಬ್ಬಿ ೩೦ನ್ನು ರಾಜಧಾನಿ ಗೋವೆಯಿಂದ ಆಳುತ್ತಿದ್ದರು. ಆಗ ಬೆಳ್ವಲನಾಡಿನಲ್ಲಿದ್ದ ನೂಲೆಯ ೧೨ ಜನ ಗಾವುಂಡರು ದೇವರಿಗಾಗಿ ಸಕಳೇಶ್ವರ ಆಚಾರ್ಯರಿಗೆ ಅರ್ಪಿಸಿದ ದತ್ತಿ ನೀಡಿದನು.[೧೧]

೧೦. ಸ್ಥಳ : ಕಲ್ಲಪ್ಪನಗುಡಿ

ಗ್ರಾಮ : ಬೆಳಗಲಿ

ಕಾಲಮಾನ : ೧೨ನೇ ಶತಮಾನ

ಈ ಶಾಸನದ ಅಕ್ಷರಗಳು ಈಗ ಸಂಪೂರ್ಣ ವಡೆದುಹೋಗಿದೆ.[೧೨]

೧೧. ಸ್ಥಳ : ಹಿರೇಮಠ ಹತ್ತಿರ

ಗ್ರಾಮ : ಬೆಳಗಲಿ

ರಾಜವಂಶ : ಕಲ್ಯಾಣದ ಚಾಲುಕ್ಯ

ಅರಸ : ಜಯಸಿಂಹದೇವ

ಕಾಲಮಾನ : ಕ್ರಿ.ಶ. ೧೦೪೨

ಅಕ್ಷರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಸಬ್ಬೆನಾಡಿನಲ್ಲಿ ಗೋವೆಯ ಕದಂಬ ಅರಸನೊಬ್ಬ ಕೆರೆ ಕಟ್ಟಿಸಿ ದತ್ತಿ ನೀಡಿದ ಬಗ್ಗೆ ತಿಳಿಸುತ್ತವೆ.[೧೩]

೧೨. ಸ್ಥಳ : ಹಿರೇಮಠದ ಹತ್ತಿರ

ಗ್ರಾಮ : ಬ್ಯಾಹಟ್ಟಿ

ರಾಜವಂಶ : ಹೊಯ್ಸಳ

ಅರಸ : ವೀರಬಲ್ಲಾಳ

ಕಾಲಮಾನ : ಕ್ರಿ.ಶ. ೧೨೦೯

ತ್ರುಟಿತಗೊಂಡಿದೆ ಭೂದತ್ತಿ ನೀಡಿದ ಬಗ್ಗೆ ತಿಳಿಸುತ್ತವೆ.[೧೪]

೧೩. ಸ್ಥಳ : ತೋಟದಪ್ಪನಮಠ

ಗ್ರಾಮ : ಬ್ಯಾಹಟ್ಟಿ

ರಾಜವಂಶ : ಯಾದವ

ಅರಸ : ಸಿಂಘಣ

ಕಾಲಮಾನ : ಕ್ರಿ.ಶ. ೧೨೩೫

ಹೊನ್ನಬೊಮ್ಮಿಸೆಟ್ಟಿ ಹಾಗೂ ಚೌಡಿಸೆಟ್ಟಿಯವರು ಬ್ರಾಹ್ಮಣರಿಗೆ ದತ್ತಿ ನೀಡಿದ ಬಗ್ಗೆ ತಿಳಿಯುತ್ತದೆ.[೧೫]

೧೪. ಸ್ಥಳ : ಹಿರೇಮಠದ ಹತ್ತಿರ

ಗ್ರಾಮ : ಬ್ಯಾಹಟ್ಟಿ

ಕಾಲಮಾನ : ೧೨ನೇ ಶತಮಾನ

ಬ್ರಾಹ್ಮಣರಿಗೆ ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ.[೧೬]

೧೫. ಸ್ಥಳ : ಚಾವಡಿಬಳಿ

ಗ್ರಾಮ : ಬ್ಯಾಹಟ್ಟಿ

ರಾಜವಂಶ : ಹೊಯ್ಸಳ

ಅರಸ : ವೀರಬಲ್ಲಾಳ

ಕಾಲಮಾನ : ಕ್ರಿ.ಶ. ೧೨ ೧೩ನೇ ಶತಮಾನ

ಅಕ್ಷರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಮಹಾಪ್ರಧಾನ ಸೇನಾಧಿಪತಿ ವಾಹತ್ತಿರ ನಿಯೋಗಾಧಿಪ ಕುಮಾರ ಪಂಡಿತಯ್ಯನು ಬೆಳ್ವಲ ೩೦೦, ಆಳುತ್ತಿದ್ದ ಬಗ್ಗೆ ಉಲ್ಲೇಖವಿದೆ.[೧೭]

೧೬. ಸ್ಥಳ : ಜೈನಬಸದಿ ಬ್ರಹ್ಮದೇವನ ಪಾದಪೀಠ

ಗ್ರಾಮ : ಹಳೇಹುಬ್ಬಳ್ಳಿ

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ಬ್ರಹ್ಮೇಶ್ವರ ವಿಗ್ರಹವನ್ನು ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ.[೧೮]

೧೭. ಸ್ಥಳ : ಕಛೇರಿ ಆವರಣ (ಈಗ ಇಲ್ಲ)

ಗ್ರಾಮ : ಹುಬ್ಬಳ್ಳಿ

ರಾಜವಂಶ : ರಾಷ್ಟ್ರಕೂಟ

ಅರಸ : ಅಮೋಘವರ್ಷ

ಕಾಲಮಾನ : ಕ್ರಿ.ಶ. ೮೭೪

ಮೋರಿಯರ ಕರಿಬಟ್ಟಯ್ಯ ಕೆರೆಯನ್ನು ನಿರ್ಮಿಸಿ ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ.[೧೯]

೧೮. ಸ್ಥಳ : ಪ್ರಿನ್ಸ್ ವೇಲ್ಸ್ ವಸ್ತುಸಂಗ್ರಹಾಲಯ, ಬಾಂಬೇ

ಗ್ರಾಮ : ಹುಬ್ಬಳ್ಳಿ

ಮಹಾಮಂಡಳೇಶ್ವರ ಗೋವೆಯ ಕದಂಬ

ಅರಸ : ೩ನೇ ಜಯಕೇಶಿ

ಕಾಲಮಾನ : ಕ್ರಿ.ಶ. ೧೨೩೪

ವೀರಜಯಕೇಶಿದೇವ ಕೊಂಕಣ ೯೦೦, ಪಲಸಿಗೆ೧೨೦೦ವನ್ನ ಆಳುತ್ತಿದ್ದನು ಪಲಸಿಗೆನಾಡಿನಲ್ಲಿದ್ದ ಎಲೆಯ ಹುಬ್ಬಳ್ಳಿ ಪೂರ್ವಳ್ಳಿಯ ಊರೊಡನೆಯ೩೦೦ ಮಹಾಜಯನರು ಸವಿಕಾಣದಲ್ಲಿ ಮಹಾಸಭೆಯಾಗಿಸೇರಿ ನವಿಲೂರು ಕುರುಬಸೇಣಿಗರ ಕೈಯಿಂದ ಅಪ್ಪಣೆಪಡೆದು ಶೇಣಿಗೇಶ್ವರದೇವ ಅಂಗ,ರಂಗಬೋಗ, ಚೈತ್ರಪವಿತ್ರಕ್ಕೆ ದತ್ತಿ ಬಿಟ್ಟರು.[೨೦]

೧೯. ಸ್ಥಳ : ಈಶ್ವರ ದೇವಾಲಯ

ಗ್ರಾಮ : ಕುರಡಿಕೇರಿ

ಮಹಾಮಂಡಳೇಶ್ವರ : ಗೋವೆಯ ಕದಂಬ

ಅರಸ : ೬ನೇ ವಿಕ್ರಮಾದಿತ್ಯ

ಕಾಲಮಾನ : ಕ್ರಿ.ಶ. ೧೧೨೬

ಗೋವೆಯ ಕದಂಬ ಅರಸ ಜಯಕೇಶಿದೇವನು ಗೋವೆಯಿಂದ ಆಳ್ವಿಕೆ ನಡೆಸುತ್ತಿರುವಾಗ ಮೈಳಾಲದೇವಿಯು ಕುಂದೂರು ನೆಲೆವೀಡನ್ನು ನೋಡಿಕೊಳ್ಳುತ್ತಿದ್ದಳು ಆ ಸಮಯದಲ್ಲಿ ರಾಣಿ ಮೈಳದೇವಿಯು ಕುಡಿಯೇಶ್ವರದೇವರಿಗೆ ದತ್ತಿ ನೀಡಿದ್ದುದರ ಜೊತೆಗೆ ಅರವತ್ತೊಕ್ಕಲರು ತಮ್ಮ ತೋಟದ ಎಲೆ ಅಡಿಕೆ ನೀಡಿದರು. ಲಕಬ್ಬೆ ದೇವರನಂದಾದೀವಿಗೆಗೆ ಎಣ್ಣೆಯನ್ನು ನೀಡಿದ್ದಳು.[೨೧]

೨೦. ಸ್ಥಳ : ಸರ್ವೆನಂ. ೨೧೭ ಹೊಲದಲ್ಲಿ

ಗ್ರಾಮ : ನೂಲ್ವಿ

ಮಹಾಮಂಡಳೇಶ್ವರ : ಗೋವೆಯ ಕದಂಬ

ಅರಸ : ಪೆರ್ಮಾಡಿದೇವ

ಕಾಲಮಾನ : ಕ್ರಿ.ಶ. ೧೧೮೬

ಇದು ಕಲ್ಯಾಣ ಚಾಲುಕ್ಯ ಅರಸ ಇಮ್ಮಡಿ ಸೋಮೇಶ್ವರನ ಶಾಸನವೊಂದರ ಕೆಳಗೆ ಎರಡು ಸಾಲಿನಲ್ಲಿ ಕೊರೆಯಲ್ಪಟ್ಟಿವೆ. ಇದು ಕಾಳೇಶ್ವರಾರ್ಯನಿಗೆ ದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ.[೨೨]

೨೧. ಸ್ಥಳ : ಸರ್ವೆನಂ. ೨೧೭ ಹೊಲದಲ್ಲಿ

ಗ್ರಾಮ : ನೂಲ್ವಿ

ಮಹಾಮಂಡಳೇಶ್ವರ : ಗೋವೆಯ ಕದಂಬ

ಅರಸ : ತ್ರಿಭುವನಮಲ್ಲ

ಕಾಲಮಾನ : ಕ್ರಿ.ಶ. ೧೨೩೭

ದೇವರಾಸಿ ಪಂಡಿತ ದೇವನಿಗೆ ಅರುವತ್ತೊಕ್ಕಲರು ದತ್ತಿ ನೀಡಿದ ಬಗ್ಗೆ ಪ್ರಸ್ತಾಪವಿದೆ.[೨೨]

೨೨. ಸ್ಥಳ : ಜಂಬಕೇಶ್ವರ ದೇವಾಲಯದ ಮಧ್ಯಮಂಟಪದ ದ್ವಾರಬಲಕಂಬ

ಗ್ರಾಮ : ಹುಬ್ಬಳ್ಳಿ

ರಾಜವಂಶ : ಯಾದವ

ಅರಸ : ಸಿಂಘಣ

ಕಾಲಮಾನ : ಕ್ರಿ.ಶ. ೧೨೪೪

ತ್ರುಟಿತಗೊಂಡಿದೆ ದೇವರಿಗೆ ಎತ್ತುಗಳನ್ನು ದತ್ತಿ ನೀಡಲಾಗಿದೆ.[೨೩]

೨೩. ಸ್ಥಳ : ಜಂಬಕೇಶ್ವರ ದೇವಾಲಯದ ಎದುರು

ಗ್ರಾಮ : ಹುಬ್ಬಳ್ಳಿ

ರಾಜವಂಶ : ಯಾದವ

ಅರಸ : ಕನ್ನರದೇವ

ಕಾಲಮಾನ : ಕ್ರಿ.ಶ. ೧೨೪೮

ಬಿಸಟ್ಟಿಯ ಅಳಿಯ ಮಲ್ಲಸೆಟ್ಟಿಯು ಬ್ರಾಹ್ಮಣರಿಗೆ ಭೂ ದತ್ತಿ ನೀಡಿದ್ದಾನೆ.[೨೪]

೨೪. ಸ್ಥಳ : ಹನುಮಂತ ದೇವಾಲಯದ ಮುಂಭಾಗ

ಗ್ರಾಮ : ಬುಡರಸಿಂಗಿ

ಮಹಾಮಂಡಳೇಶ್ವರ : ಗೋವೆಯ ಕದಂಬ

ಅರಸ : ಚಟ್ಟಿಯ ದೇವ

ಕಾಲಮಾನ : ಕ್ರಿ.ಶ. ೧೨೫೭

ಚಟ್ಟಯ ದೇವನು ಸೊನ್ನಲಿಗೆಯ ಕಪಿಲಸಿದ್ದ ಮಲ್ಲಿಕಾರ್ಜುನ ದೇವನಿಗೆ ಹಲಸಿಗೆ ನಾಡಿನ ಸಬ್ಬಿ ಕಂಪಣದ ಉಚ್ಚಂಗಿ ಗ್ರಾಮವನ್ನು ದೇವರ ಅಂಗ,ರಂಗ, ಭೋಗ, ನೈವೇದ್ಯ, ಕಲಷಾಭಿಷೇಕ, ಗೋಪುಚಾರ, ನಿತ್ಯ ಹೋಮಗಳಿಗೆ ದತ್ತಿ ನೀಡಿದರು.[೨೫]

೨೫. ಸ್ಥಳ : ತಳವಾರಹೊಲ

ಗ್ರಾಮ : ಛಬ್ಬಿ

ರಾಜವಂಶ : ಯಾದವ

ಅರಸ : ಮಹಾದೇವ

ಕಾಲಮಾನ : ಕ್ರಿ.ಶ. ೧೨೬೪

ತಳಪದ ಅಚರಸಾದಿಗಳು ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ.[೨೬]

೨೬. ಸ್ಥಳ : ಮಾಕಾಶಿ ಬಾಲರಾಯನ ಮನೆಗೋಡೆ

ಗ್ರಾಮ : ನೂಲ್ವಿ

ರಾಜವಂಶ : ದೇವಗಿರಿ ಯಾದವ

ಅರಸ : ರಾಮಚಂದ್ರ

ಕಾಲಮಾನ : ಕ್ರಿ.ಶ. ೧೨೯೪

ತೃಟಿತಗೊಂಡಿದೆ. ಹಲಸಿಗೆ ೧೨೦೦ ಎಂದ ಉಲ್ಲೆಖವಿದೆ.[೨೮]

೨೭. ಸ್ಥಳ : ಹಿರೇಮಠದ ಹತ್ತಿರ

ಗ್ರಾಮ : ಬ್ಯಾಹಟ್ಟಿ

ಕಾಲಮಾನ : ಸು. ಕ್ರಿ.ಶ. ೧೩ ೧೪ನೇ ಶತಮಾನ

ಶಾಸನ ತೃಟಿತಗೊಂಡಿರುವುದರಿಂದ ಅಸ್ಪಷ್ಟವಾಗಿದೆ. ಬ್ಯಾಹಟ್ಟಿಯ ಇಪ್ಪತ್ತು ಜನ ಬ್ರಾಹ್ಮಣ ಪಂಡಿತರಿಗೆ ನೀಡಿದ ಭೂ ದತ್ತಿಯ ಬಗ್ಗೆ ತಿಳಿಸುತ್ತದೆ.[೨೯]

೨೮. ಸ್ಥಳ : ಚಾವಡಿಹತ್ತಿರ

ಗ್ರಾಮ : ಕೋಳಿವಾಡ

ಕಾಲಮಾನ : ಕ್ರಿ.ಶ. ೧೪೫೮

ಶಾಸನಗಳ ಅಕ್ಷರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ ಮಹಾದೇವರಿಗೆ ದತ್ತಿ ನೀಡಿದ ಬಗ್ಗೆ ಇದು ತಿಳಿಸುತ್ತದೆ.[೩೦]

೨೯. ಸ್ಥಳ : ಹಿರೇಮಠದ ಹತ್ತಿರ

ಗ್ರಾಮ : ಬ್ಯಾಹಟ್ಟಿ

ಕಾಲಮಾನ : ೧೫ನೇ ಶತಮಾನ

ಅಕ್ಷರಗಳು ತೃಟಿತಗೊಂಡಿದೆ. ಪಂಚಾಕ್ಷರದೇವರ ಮಠಕ್ಕೆ ದತ್ತಿ ಬಿಟ್ಟ ಬಗ್ಗೆ ಉಲ್ಲೇಖವಿದೆ.[೩೧]

೩೦. ಸ್ಥಳ : ನಾರಾಯಣದೇವರ ಗುಡಿ

ಗ್ರಾಮ : ಕೋಳಿವಾಡ

ರಾಜವಂಶ ವಿಜಯನಗರ

ಕಾಲಮಾನ : ಕ್ರಿ.ಶ. ೧೫೬೩

ಅಗಸ್ತ್ಯಗೋತ್ರದ ಅಶ್ವಲಾಯನ ಸೂತ್ರದ ಯಕ್ ಶಾಖೆಯ ಕೋಳಿವಾಡದ ಅಗ್ರಹಾರದ ಯಜಮಾನ ಆನೆಯ ದೇವಪಯ್ಯಗಳಮಗ ಸೂರಪಯ್ಯನು ಶ್ರೀಮಾಧವಜನಾರ್ಧನಸ್ವಾಮಿಯ ಗುಡಿಯ ಪಾತ್ರಕ್ಕೆ ತಿರುಮಲಬೋವನಮಗಳುಸೂರಿಯ ಮಾಣಿಕೆ ಎಂಬ ಹೆಣ್ಣನ್ನು ಕಾಣಬೆಯ ಪಾತ್ರವಾಗಿ ಅವಳ ಜೀವಿತವರ್ಷಕ್ಕೆ ಅರುಘಟ್ಟಿ ವರಹವನ್ನು ವಿವಿಧ ಕ್ಷೇತ್ರಗಳ ಹಸಿಗೆಯಲ್ಲಿ ಮೇಟಿಗೆ ವೊಂಮನದ ಕಟ್ಟಳೆಯಲ್ಲಿ ಬಿಟ್ಟನು.[೩೨]

೩೧. ಸ್ಥಳ : ಸವದತ್ತಿಯವರ ಹೊಲ

ಗ್ರಾಮ : ಬೈರಿದೇವರಕೊಪ್ಪ

ಕಾಲ : ಕ್ರಿ.ಶ. ೧೬ನೇ ಶತಮಾನ

ಹನುಮಂತದೇವರಿಗಾಗಿ ತಿಮ್ಮರಸ ಒಡೆಯನು ಕರುಸಾಕರಯ್ಯನಿಗೆ ದತ್ತಿ ನೀಡಿ ಬಗ್ಗೆ ಉಲ್ಲೇಖವಿದೆ.[೩೩]

೩೨. ಸ್ಥಳ : ಹಿರೇಗೌಡರ ಮನೆ ಹತ್ತಿರ

ಗ್ರಾಮ : ಸುಳ್ಳ

ಕಾಲಮಾನ : ೧೬ನೇ ಶತಮಾನ

ಸುಳ್ಳದಲ್ಲಿ ತಿಮ್ಮಪ್ಪನಾಯಕನು ಅಗೆಮಿಸಿದ ಬಾವಿಗೆ ದತ್ತಿ ಬಿಡಲಾಗಿದೆ.[೩೪]

೩೩. ಸ್ಥಳ : ಹಿರೇಗೌಡರ ಮನೆಯ ಹತ್ತಿರ ಕಂಬ

ಗ್ರಾಮ : ಸುಳ್ಳ

ಕಾಲಮಾನ : ೧೬ನೇ ಶತಮಾನ

ಚಂದ್ರಭಟ್ಟನಿಗೆ ದತ್ತಿ ನೀಡಿದ ಬಗ್ಗೆ ತಿಳಿಯುತ್ತದೆ.[೩೫]

೩೪. ಸ್ಥಳ : ವೆಂಕಟೇಶ ದೇಸಾಯಿ ಅವರ ಮನೆ ಕಂಬ

ಗ್ರಾಮ : ಹಳೇಹುಬ್ಬಳ್ಳಿ

ಕಾಲಮಾನ : ಕ್ರಿ.ಶ.೧೬೦೧

: ಹುಬ್ಬಳ್ಳಿ ಸೀಮೆ ಜಂಗಮರಿಗೆ ಸುಂಕದಾನ ನೀಡಲಾಗಿದೆ. [೩೬]

೩೫. ಸ್ಥಳ : ನಂದಿಕಂಬ

ಗ್ರಾಮ : ಛಬ್ಬಿ

ರಾಜವಂಶ ಹಾನಗಲ್ಲ ಕದಂಬ

ಅರಸ : ಕಾಮದೇವ

ಅಕ್ಷರಗಳು ತೃಟಿತವಾಗಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಶಿವಮುದ್ದು ದೇವನ ಶಿಷ್ಯ ಹಾಗೂ ಕಾಲಡಿಯ ಧವಳೇಶ್ವರ ದೇವರ ಅರ್ಚಕರನಾದ ರಾಜಗುರು ಲಕ್ಷ್ಮೀದೇವನಿಗೆ ದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ. [೩೭]

೩.೩. ವೀರಗಲ್ಲು ಶಾಸನಗಳು

ಕನ್ನಡಿಗರು ಪ್ರಾಚೀನ ಕಾಲದಿಂದಲೂ ಸದ್ಗತಿ ಸಂಪಾದಿಸಲು ತಮ್ಮ ಗುರಿಯಾಗಿಟ್ಟುಕೊಂಡು ಬದುಕುತ್ತಿದ್ದಾರೆ. ಇದಕ್ಕೆ ಆತ್ಮಾನುಸಂದಾನ, ಆದರ್ಶನುಸಂಧಾನ ಮತ್ತು ಮೌಲ್ಯಾನು ಸಂಧಾನಗಳನ್ನು ಸಾಧನಗಳನ್ನಾಗಿ ಪರಿಭಾವಿಸಿಕೊಂಡಿದ್ದಾರೆ. ಆತ್ಮಾನುಸಂಧಾನದಿಂದ ಸಮಾಧಿಮರಣ, ಮೌಲ್ಯಾನು

ಸಂಧಾನವಿಂದ ಬಲಿದಾನ ಮರಣ ಮತ್ತು ವೀರಮರಣಗಳು ಸದ್ಗತಿಯ ಹೆಸರಿನಲ್ಲಿ ಸಮಾಜವು ಕಾಲದೇಶ ಬದ್ಧವಾಗಿ ರೂಪಿಸಿಕೊಂಡ ಆಚರಣೆಗಳಾಗಿವೆ.[೩೮] ಇಂತಹ ಅಸಾಮಾನ್ಯ ಮರಣಗಳು ಪ್ರಾಚೀನಕಾಲದಿಂದಲೂ ಪ್ರಚಲಿತದಲ್ಲಿವೆ. ಇದರ ನೆನಪಿಗಾಗಿ ವೀರಗುಡಿಗಳನ್ನು ನಿರ್ಮಿಸುವ ವೀರಗಲ್ಲು ಮಹಾಸತಿಗಲ್ಲು ಮತ್ತು ನಿಷಧಿಗಲ್ಲುಗಳನ್ನು ನಿಲ್ಲಿಸುವ ಪರಂಪರೆ ಬೆಳೆದುಬಂದಿದೆ. ವೀರನತ್ಯಾಗ, ಬಲಿದಾನ, ಮಹಾಸತಿಯರ ಆದರ್ಶಗುಣ, ಸನ್ಯಾಸಿಗಳ ಪಾರಮಾರ್ಥಿಕ ಗುಣಗಳನ್ನು ತಿಳಿಸುವ ಮಾಧ್ಯಮಕ್ಕೆ ಸ್ಮಾರಕ ವೀರ ಗಲ್ಲುಗಲ್ಲುಗಳಿಂದ ಹೆಸರು.[೩೯] ಈ ಸ್ಮಾರಕ ಶಿಲೆಗಳು ಮೂಲತಃ ದಾಖಲೆ ವ್ಯಕ್ತಿ ಗುಣಗಾನಗಳಾಗಿದ್ದರೂ ಇವು ನಾಡಿನ ಪ್ರಾಚೀನ ಮೌಲ್ಯಗಳ ಪರಂಪರೆಯನ್ನು ತಿಳಿಸುವ ಉಲ್ಲೇಖಗಳಾಗಿವೆ. ಯುದ್ಧವೀರ, ದಾನವೀರ, ಮಹಾಸತಿ, ಮೊದಲಾದವರ ಆದರ್ಶಗಳನ್ನು ಸೂಚಿಸುವ ಸೂಚನಾ ಫಲಕಗಳಾಗಿವೆ. ಇವು ಸಮಾಜದ ಮೌಲ್ಯಗಳನ್ನು ಜೀವಂತವಾಗಿ ಸೆರೆಹಿಡಿಯುವಲ್ಲಿ ಸ್ಮಾರಕ ಶಿಲೆಗಳು ಮಹತ್ವದ ಪಾತ್ರವಹಿಸಿವೆ.[೪೦]

ಸ್ಮಾರಕಶಾಸನ ಶಿಲ್ಪಗಳಲ್ಲಿ ಕೆಲವೊಮ್ಮೆ ಬರವಣಿಗೆ ಇರುತ್ತದೆ. ಶಿಲ್ಪ ತನ್ನ ಭಾವನೆಗಳನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸುತ್ತವೆ. ಹೀಗಾಗಿ ಉಬ್ಬು ಶಾಸನ ಶಿಲ್ಪಗಳಲ್ಲಿ ಶಾಸನ ಕಾಣಬಹುದು. ಅನಕ್ಷರಸ್ಥರಿಗೂ ಈ ವಿಷಯ ತಿಳಿಯಲೆಂದು ಕಲೆಯನ್ನು ರೂಪಿಸುವುದು ಇದರ ಮೂಲ ಉದ್ದೇಶ[೪೧] ಇಂತಹ ಸ್ಮಾರಗಳು ಅಂದಿನ ಮಾನವನಜೀವನ ವಿಧಾನ, ಜೀವನದ ಬಗ್ಗೆ ಅವನಿಗೆ ಇರುವ ಧೋರಣೆ ಅಂದಿನ ಅವನ ನಾಗರಿಕತೆ ಮತ್ತು ಆತನ ಸುಸಂಸ್ಕೃತಿಯನ್ನು ತಿಳಿಸಿಕೊಡುವ ಪುರಾವೆಗಳಾಗಿವೆ. ಇವು ಸತ್ತ ವ್ಯಕ್ತಿಯ ನೆನಪನ್ನುಂಟು ಮಾಡುವ ಸಂಕೇತಗಳು ಹಾಗೂ ಆ ವ್ಯಕ್ತಿಯ ನೆನಪನ್ನು ಅಭಿವ್ಯಕ್ತಗೊಳಿಸುವ ಸಾಧನಗಳಾಗಿವೆ.[೪೨]

ವೀರಗಲ್ಲುಗಳು ವೀರತನದಿಂದ ಜೀವಿಸುತ್ತಿದ್ದ ಕನ್ನಡಿಗರು ವಿವಿಧ ಸನ್ನಿವೇಶಗಳಲ್ಲಿ ಹೋರಾಡಿ ವೀರಮರಣವನ್ನಪ್ಪಿದ ಹಾಗೆ ತನ್ನ ಕೋರಿಕೆಯನ್ನು ಈಡೇರಿಸಲು ಪ್ರಾಣವನ್ನು ಅರ್ಪಿಸಿದ ಪರೋಕ್ಷ ವಿನಾಯೋರ್ಥವಾಗಿ ವೀರಗಲ್ಲುಗಳನ್ನು ನಿಲ್ಲಿಸುವ ಪರಂಪರೆ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ.[೪೩] ಮಾನವನ ಸಮಾಧಿಮಾಡಿ, ಮಡಿದವನ ಸ್ಮರಣೆಬರುವಂತೆ ಸಂಕೇತಕ್ಕಾಗಿ ನಿಲ್ಲಿಸಿ ಸ್ಮಾರಕಗಳೇ ವೀರಗಲ್ಲು ಶಾಸನಗಳು[೪೪] ಸಂಕೇತಕ್ಕಾಗಿ ನಿಲ್ಲಿಸಿದ ಈ ಶಿಲೆಗಲು ವೀರನಜೀವನ ವಿಧಾನವನ್ನು ಮತ್ತು ಆತನ ಧೋರಣೆಯನ್ನು ಅಂದಿನ ನಾಗರಿಕತೆಯನ್ನು ಮತ್ತು ಸಂಸ್ಕೃತಿಯನ್ನು ಪ್ರತಿಬಿಂಭಿಸುವ ಸಂಕೇತಗಳಾಗಿವೆ.[೪೫]

ಮುಖ್ಯವಾಗಿ ಇವುಗಳ ಉದ್ದೇಶ ವೀರರಪರಾಕ್ರಮವನ್ನು ಎತ್ತಿ ಹಿಡಿಯುವಂತಹದ್ದು ಈ ವೀರಗಲ್ಲು ಶಿಲ್ಪಗಳು ಹೆಚ್ಚಿನ ಮಟ್ಟಿಗೆ ಮೂರು ನಾಲ್ಕು, ಏಳು, ಪಟ್ಟಿಕೆಗಳನ್ನು ಒಳಗೊಂಡಿರುತ್ತವೆ. ಮೇಲ್ಭಾಗದ ಹಂತ ಶಿವನ ಸಾನಿಧ್ಯ ಪಡೆದಂತಹ ಚಿತ್ರಣ, ಮಧ್ಯದ ಹಂತದಲ್ಲಿ ಅಪ್ಸರೆಯರು ವೀರನನ್ನು ಕೈಲಾಸಕ್ಕೆ ಕೊಂಡೊಯ್ಯುವಂತಹ ಚಿತ್ರ, ಕೊನೆಯ ಹಂತ ವೀರನು ಯುದ್ಧದಲ್ಲಿ ಹೋರಾಡುತ್ತಿರುವ ಚಿತ್ರಣವನ್ನು ಕಾಣುತ್ತೇವೆ.[೪೬]

ವೀರಗಲ್ಲುಗಳ ಶಿಲ್ಪಗಳಲ್ಲಿ ಹಲವಾರು ರೀತಿಯ ವೈವಿಧ್ಯತೆಗಳಿದ್ದು ಅವುಗಳಲ್ಲಿ ಗಡಿಕಾಳಗ, ಪೆಣ್‌ಬುಯಲ್, ಕಾಡುಪ್ರಾಣಿಯೊಂದಿಗಿನ ಹೋರಾಟ, ಗೋಗ್ರಹಣ, ತುರುಗೋಳ್ ಇನ್ನೂ ಮುಂತಾದವುಗಳನ್ನು ನಾವು ಗುರುತಿಸಬಹುದಾಗಿದೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಗಬ್ಬೂರು, ಇಂಗಳಹಳ್ಳಿ, ವರೂರು, ಕೋಳಿವಾಡ ಶಿರಗುಪ್ಪಿ, ಬೆಳಗಲಿ, ಇನ್ನು ಮುಂತಾದ ಗ್ರಾಮಗಳಲ್ಲಿ ದೊರೆತ ವೀರಗಲ್ಲು ಶಾಸನಗಳ ವೈಶಿಷ್ಟ್ಯತೆಯನ್ನು ಈ ಕೆಳಗೆ ನೀಡಲಾಗಿದೆ.

೧.	ಸ್ಥಳ	:	ಆಂಜನೇಯನ ದೇವಾಲಯ ಮುಂಭಾಗ
	ಗ್ರಾಮ	:	ಗಬ್ಬೂರು
	ಕಾಲಮಾನ	:	ಕ್ರಿ.ಶ. ೧೦ನೇ ಶತಮಾನ
	ವಸ್ತು		ಕಪ್ಪುಶಿಲೆ

ಈ ವೀರಗಲ್ಲು ಮೂರು ದೃಶ್ಯಗಳನ್ನು ಹೊದಿದೆ. ಕೆಳಗಿನ ದೃಶ್ಯದಲ್ಲಿ ವೀರನ ಕೈಯಲ್ಲಿ ಕತ್ತಿಹಿಡಿದು ವೈರಿಯೊಡನೆ ಹೋರಾಡುತ್ತಿದ್ದಾನೆ. ವೀರನ ಸಹಚರ ಕೈಯಲ್ಲಿ ಬಿಲ್ಲುಬಾಣ ಹಿಡಿದು ಪ್ರಯೋಗಭಂಗಿಯಲ್ಲಿದ್ದಾನೆ. ವೈರಿಪಡೆಯ ಯೋಧರು ಮೂರು ಕೈಗಳಲ್ಲಿ ಕತ್ತಿಯಂತಹ ಆಯುಧವನ್ನು ಹಿಡಿದಿದ್ದಾರೆ. ಇವರಲ್ಲಿ ಒಬ್ಬ ಕೆಳಗೆ ಬಿದ್ದು ಮರಣ ಹೊಂದಿದ್ದಾನೆ. ವೀರ ಮತ್ತು ಆತನ ಸಹಚರ ಕೆಳಭಾಗದಲ್ಲಿ ಹಸುಗಳು ಚೆಲ್ಲಾಪಿಲ್ಲಿಯಾಗಿ ನಿಂತಿವೆ. ಎರಡನೇ ದೃಶ್ಯ ಎರಡು ಅಪ್ಸರೆಯರು ವೀರನನ್ನುದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಮೇಲಿನ ದೃಶ್ಯದಲ್ಲಿ ವೀರ ರಾಜಲಲಿತಾಸನದಲ್ಲಿ ಕುಳಿತಿದ್ದಾನೆ. ಬದಿಗಳಲ್ಲಿ ಚೌರಿಧಾರಿಯರು ಒಂದು ಕೈಯಲ್ಲಿ ಚೌರಿ ಹಿಡಿದು ಮತ್ತೊಂದು ಕೈಯನ್ನು ಸೊಂಟದ ಮೇಲಿಟ್ಟುಕೊಂಡು ಒಂದು ಕಾಲನ್ನು ಹಿಂದಕ್ಕೆ ಮಾಡಿ ನಿಂತಿದ್ದಾರೆ. ತಲೆಯ ಕೇಶವನ್ನು ಮೇಲಕ್ಕೆ ಕಟ್ಟಿದ್ದಾರೆ. ವೀರಗಲ್ಲಿನಲ್ಲಿ ವೀರ ಕಿರೀಟಧಾರಿಯಾದ್ದಾನೆ. ವೀರ ಮತ್ತು ಅಪ್ಸರೆಯರೆಲ್ಲಾ ಕಟೀವಸ್ತ್ರಧಾರಿಗಳಾಗಿದ್ದಾರೆ. ಕಟೀವಸ್ತ್ರದ ನೆರಿಗೆಗಳು ನೈಜವಾಗಿವೆ. ಇವರು ಆಭರಣಗಳನ್ನು ಧರಿಸಿದ್ದಾರೆ. ಈ ಶಿಲ್ಪಗಳಲ್ಲಿ ವೀರ ಅಪ್ಸರೆಯರ ಕೈ ಕಾಲುಗಳನ್ನು ಚಿಕ್ಕದಾಗಿ ದೇಹದ ಪ್ರಮಾಣವನ್ನು ಬದ್ಧವಾಗಿ ತೋರಿಸಲಾಗಿದೆ. ಇವು ಈ ಶಿಲ್ಪದ ಪ್ರಧಾನ ಲಕ್ಷಣವಾಗಿವೆ. ಶಿಲ್ಪದ ಮಧ್ಯಪಟ್ಟಿಕಾ ಮತ್ತು ಮೇಲ್ಭಾಗದಲ್ಲಿ ಶಾಸನವಿದ್ದು ರಾಷ್ಟ್ರಕೂಟರ ಕನ್ನರದೇವನ ಆಳ್ವಿಕೆಯ ಕಾಲದ್ದಾಗಿದೆ. ಇದು ಗೋಗ್ರಹಣದ ಸಂದರ್ಭದಲ್ಲಿ ಸಿರಿವೆಗೆ ಎಂಬುವನು ಮರಣ ಹೊಂದಿದ ಬಗ್ಗೆ ತಿಳಿಸುತ್ತದೆ.[೪೭]

೨.	ಸ್ಥಳ	:	ಮಸೀದಿಯ ಬಳಿ
	ಗ್ರಾಮ	:	ಇಂಗಳಹಳ್ಳಿ
	ಕಾಲಮಾನ	:	ಕ್ರಿ.ಶ. ೧೦-೧೧ನೇ ಶತಮಾನ
	ವಸ್ತು		ನೀಲಿಮಿಶ್ರಿತ ಕೆಂಪು ಶಿಲೆ

ಈ ವೀರಗಲ್ಲು ಮೂರು ಪಟ್ಟಿಕೆಗಳಿಂದ ಕೂಡಿದ್ದು ಕೆಳಗಿನ ಪಟ್ಟಿಕೆಯಲ್ಲಿ ವೀರವೈರಿಗಳೊಂದಿಗೆ ಕಾದಾಡುತ್ತಿದ್ದಾನೆ. ಎರಡನೆ ಪಟ್ಟಿಕೆಯಲ್ಲಿ ಅಪ್ಸರೆಯರು ವೀರನನ್ನು ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಇಲ್ಲಿ ಇವರು ಹಾರುತ್ತಿರುವಂತೆ ಚಿತ್ರಿತಗೊಂಡಿದ್ದಾರೆ. ಅಪ್ಸರೆಯರು ತಮ್ಮ ಒಂದು ಕೈಯಲ್ಲಿ ಕಲಶವನ್ನು ಹಿಡಿದಿದ್ದಾರೆ. ಮೇಲಿನ ಪಟ್ಟಿಕೆಯಲ್ಲಿ ವೀರ ಸವ್ಯಲಲಿತಾಸನದಲ್ಲಿ ಕುಳಿತಿದ್ದಾನೆ. ಇಕ್ಕೆಲಗಳಲ್ಲಿ ಅಪ್ಸರೆಯರು ಕಲಶವನ್ನು ಹಿಡಿದು ನಿಂತಿದ್ದಾರೆ. ತಮ್ಮ ಮತ್ತೊಂದು ಕೈಯನ್ನು ಸೊಂಟದ ಮೇಲಿಟ್ಟುಕೊಂಡಿದ್ದಾರೆ. ವೀರಗಲ್ಲಿನಲ್ಲಿ ಅಪ್ಸರೆಯರು ಕೈಯಲ್ಲಿ ಕಲಶಹಿಡಿದಿರುವ ವೀರ ಸವ್ಯಲಲಿತಾಸನದಲ್ಲಿ ಕುಳಿತಿರುವುದು ವಿಶೇಷವೆನಿಸಿದೆ.[೪೮]

೩. ಸ್ಥಳ : ಮೈಲಾರಲಿಂಗನ ಗುಡಿಬಳಿ
ಗ್ರಾಮ : ಇಂಗಳಹಳ್ಳಿ
ಕಾಲಮಾನ : ಕ್ರಿ.ಶ. ೧೦ ೧೧ನೇ ಶತಮಾನ
ವಸ್ತು ನೀಲಿಮಿಶ್ರಿತ ಕಪ್ಪುಶಿಲೆ

ವೀರಗಲ್ಲಿನ ಕೆಳಭಾಗ ಮಣ್ಣಿನಲ್ಲಿ ಹೂತುಹೋಗಿವೆ. ಸದ್ಯ ಈಗ ಎರಡು ಭಾಗ ಮಾತ್ರ ಕಂಡುಬರುತ್ತದೆ. ಕೆಳಗಿನ ಭಾಗದಲ್ಲಿ ಮಡಿದ ವೀರನನ್ನ ಇಬ್ಬರು ಅಪ್ಸರೆಯರು ತಮ್ಮ ಭುಜದ ಮೇಲೆ ಹಾಕಿಕೊಂಡು ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಇವರು ಹಾರುವ ಭಂಗಿಯಲ್ಲಿದ್ದಾರೆ. ಮೇಲಿನ ಭಾಗದಲ್ಲಿ ವೀರ ಅರ್ಧ ಪದ್ಮಾಸನದಲ್ಲಿ ಕುಳಿತಿದ್ದಾನೆ. ಈತನ ಬಲಗೈ ತೊಡೆಯ ಮೇಲಿದ್ದು ಎಡಗೈ ಅಭಯ ಹಸ್ತದಲ್ಲಿದೆ. ವೀರನ ಇಕ್ಕೆಲಗಳಲ್ಲಿ ಅಪ್ಸರೆಯರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಅಪ್ಸರೆಯರು ತಮ್ಮ ಒಂದು ಕೈಯಲ್ಲಿ ಚೌರಿಯನ್ನು ಹಿಡಿದಿದ್ದಾರೆ. ಈ ಚಿತ್ರಣದ ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಚಿತ್ರಗಳಿವೆ.[೪೯]

೪. ಸ್ಥಳ : ಕಲ್ಮೇಶ್ವರ ದೇವಾಲಯ
ಗ್ರಾಮ : ಕೋಳಿವಾಡ
ಕಾಲಮಾನ : ಕ್ರಿ.ಶ. ೧೨ನೇ ಶತಮಾನ
ವಸ್ತು ಬೆಣಚು ಕಲ್ಲು

ವೀರಗಲ್ಲಿನ ಮೇಲ್ಭಾಗ ಭಗ್ನಗೊಡಿದೆ. ಉಳಿದಿರುವ ಒಂದು ದೃಶ್ಯದಲ್ಲಿ ಇಬ್ಬರು ವೀರರು ಬಿಲ್ಲು ಬಾಣಗಳನ್ನು ಹಿಡಿದು ಪ್ರಯೋಗ ಭಂಗಿಯಲ್ಲಿದ್ದಾರೆ. ಬಲಗಡೆಯ ವೀರ ಎದುರು ಮುಖ ಮಾಡಿಕೊಂಡಿದ್ದರೆ. ಎರಡನೆಯ ವೀರ ಬೆನ್ನನ್ನು ತೋರಿಸಿದ್ದಾನೆ. ಇಬ್ಬರು ವಿರುದ್ಧ ದಿಕ್ಕಿನಲ್ಲಿದ್ದಾರೆ. ಇವರಿಬ್ಬರ ಇಕ್ಕೆಲಗಳಲ್ಲಿ ಸ್ತಂಭಗಳಿವೆ. ಈ ದೃಶ್ಯದ ಕೆಳಭಾಗದಲ್ಲಿಅಪೂರ್ಣಗೊಂಡ ದೃಶ್ಯವಿದೆ.[೫೦]

೫. ಸ್ಥಳ : ವೀರಭದ್ರ ದೇವಾಲಯ ಮುಂಭಾಗ
ಗ್ರಾಮ : ವರೂರು
ಕಾಲಮಾನ : ಕ್ರಿ.ಶ. ೧೨ನೇ ಶತಮಾನ
ವಸ್ತು ನೀಲಿಮಿಶ್ರಿತ ಕಪ್ಪುಶಿಲೆ

ವೀರಗಲ್ಲು ಮೂರು ಭಾಗಗಳಲ್ಲಿದೆ. ಕೆಳಗಿನ ಭಾಗದಲ್ಲಿ ಯುದ್ಧದ ಚಿತ್ರಣವಿದೆ. ಹೋರಾಟದ ಈ ಚಿತ್ರದಲ್ಲಿ ವೀರ ಮತ್ತು ವೈರಿ ಕಾಲಾಳುಗಳು ಕೆಲವರು ಬಿಲ್ಲುಬಾಣ ಮತ್ತೆ ಕೆಲವರು ಕತ್ತಿ ಗುರಾಣಿಗಳನ್ನು ಹಿಡಿದಿದ್ದಾರೆ. ಇಲ್ಲಿ ಕಾಲಾಳುಗಳು ಮತ್ತು ಕೆಲವರು ಅಶ್ವದಳದವರಿದ್ದಾರೆ. ಎರಡನೇ ದೃಶ್ಯದಲ್ಲಿ ವಿಮಾನದಲ್ಲಿ ಕುಳಿತ ವೀರನನ್ನು ಅಪ್ಸರೆಯರಿಬ್ಬರು ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಅಪ್ಸರೆಯರು ಒಂದು ಕೈಯಲ್ಲಿ ವಿಮಾನವನ್ನು ಮತ್ತೊಂದು ಕೈಯಲ್ಲಿ ಚೌರಿಯನ್ನ ಹಿಡಿದ್ದಾರೆ. ವಿಮಾನದಲ್ಲಿ ವೀರ ಅರ್ದಪದ್ಮಾಸನದಲ್ಲಿ ಕೈಮುಗಿದು ಕುಳಿತಿದ್ದಾನೆ. ಮೇಲಿನ ಭಾಗದಲ್ಲಿ ಶಿವಲಿಂಗಕ್ಕೆ ನಿಂತ ಯತಿ ಪೂಜಿಸುತ್ತಿದ್ದಾನೆ. ಯತಿಯ ಬಲಭಾಗದಲ್ಲಿ ಮಡಿದ ವೀರ ಕೈಮುಗಿದು ಕುಳಿತಿದ್ದಾನೆ. ಶಿವಲಿಂಗದ ಎಡಬದಿಯಲ್ಲಿ ಕುಳಿತ ನಂದಿ ಇದೆ. ಶಿವಲಿಂಗಕ್ಕೆ ಕಿರೀಟ ಮಕುಟುವಿದೆ.[೫೧]

೬.	ಸ್ಥಳ	:	ಕೆರೆಯ ದಂಡೆಯ ಮೇಲೆ
	ಗ್ರಾಮ	:	ಬೆಳಗಲಿ
	ಕಾಲಮಾನ	:	ಕ್ರಿ.ಶ. ೧೨ನೇ ಶತಮಾನ
	ವಸ್ತು		ನೀಲಿಮಿಶ್ರಿತ ಕಪ್ಪುಶಿಲೆ

ವೀರಗಲ್ಲಿನಲ್ಲಿ ಮೂರು ಭಾಗಗಳಿವೆ. ಕೆಳಗಿನ ಭಾಗದಲ್ಲಿ ಹೋರಾಟದ ಚಿತ್ರಣವಿದೆ. ಹೋರಾಟದ ಚಿತ್ರಣದಲ್ಲಿ ವೀರ ಮತ್ತು ಸಂಗಡಿಗರು ಹಾಗೂ ವೈರಿ ಪಡೆಯವರು ಕಾಲಾಲುದಳದವರಾಗಿದ್ದು, ಕೈಗಳಲ್ಲಿ ಕೆಲವರು ಬಿಲ್ಲು, ಬಾಣ, ಕೆಲವರು ಕತ್ತಿಗುರಾಣಿಯನ್ನು ಹಿಡಿದಿದ್ದಾರೆ. ಅಪ್ಸರೆಯರು ಒಂದು ಕೈಯಲ್ಲಿ ವಿಮಾನವನ್ನು ಮತ್ತೊಂದು ಕೈಯಲ್ಲಿ ಚೌರಿಯನ್ನು ಹಿಡಿದ್ದಾರೆ. ಮೇಲಿನ ಭಾಗದ ಚಿತ್ರಗಳು ಸವೆದಿವೆ. ವೀರಗಲ್ಲು ಭಗ್ನಗೊಂಡಿದೆ.[೫೨]

೭.	ಸ್ಥಳ	:	ಹನುಮಂತ ದೇವಾಲಯದ ಬಳಿ
	ಗ್ರಾಮ	:	ಮಂಟೂರು
	ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
	ವಸ್ತು		ನೀಲಿಮಿಶ್ರಿತ ಕಪ್ಪುಶಿಲೆ

ಈ ವೀರಗಲ್ಲಿನಲ್ಲಿ ಕೂಡ ಹೋರಾಟದ ದೃಶ್ಯಗಳಿವೆ. ಎಡಗಡೆಗೆ ವೈರಿಗಳು ಎರಡು ಸಾಲುಗಳಲ್ಲಿ ನಿಂತು ಬಿಲ್ಲನ್ನು ಮುಂಚಾಚಿ ವೀರನ ಕಡೆಬಾಣ ಪ್ರಯೋಗಿಸುತ್ತಿರುವನು. ವೀರನ ಪಡೆಯವರನ್ನು ಕಿರಿದಾಗಿ ಬಲಕ್ಕೆ ಚಿತ್ರಿಸಲಾಗಿದೆ. ಎರಡನೆಯ ಚಿತ್ರದಲ್ಲಿ ಮಡಿದ ವೀರನನ್ನು ಅಪ್ಸರೆಯರು ಹೊತ್ತು ಆಕಾಶದಲ್ಲಿ ಹಾರುತ್ತಿರುವರು. ಮೂರರಲ್ಲಿ ವೀರನು ಅಪ್ಸರೆಯರಿಬ್ಬರ ನಡುವೆ ಸವ್ಯಲಲಿತಾಸನದಲ್ಲಿ ಕುಳಿತಿದ್ದಾನೆ. ವೀರನು ಹಾರುವ ಭಂಗಿ ಮತ್ತು ಸೇವಕಿಯರ ನಡುವೆ ಅವನು ಕುಳಿತಿರುವನು.[೫೩]

೮.	ಸ್ಥಳ	:	ಮೈಲಾರಲಿಂಗನ ದೇವರ ಬಳಿ
	ಗ್ರಾಮ	:	ಕೋಳಿವಾಡ

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಈ ವೀರಗಲ್ಲಿನಲ್ಲಿ ಮೂರು ದೃಶ್ಯಗಳಿವೆ ಕೆಳಗಿನ ದೃಶ್ಯದಲ್ಲಿ ವೀರ ತನ್ನ ವೈರಿ ಸಂಗಡ ಹೋರಾಡುತ್ತಿದ್ದಾನೆ. ಇವರಿಬ್ಬರೂ ಬಿಲ್ಲುಬಾಣಗಳನ್ನು ಹಿಡಿದಿದ್ದಾರೆ. ವೀರನ ಹಿಂಭಾಗದಲ್ಲಿ ಗೋವುಗಳನ್ನು ತೋರಿಸಲಾಗಿದೆ. ಮೇಲಿನ ದೃಶ್ಯದಲ್ಲಿ ಸ್ವರ್ಗಾರೋಹಣ ಚಿತ್ರಣವಿದೆ. ಇಲ್ಲಿ ಅಪ್ಸರೆಯರಿಬ್ಬರು ವೀರರನ್ನು ದೇವಲೋಕಕ್ಕೆ ಕೊಂಡೊಯ್ಯುತ್ತಿದ್ದಾರೆ. ಮೇಲಿನ ದೃಶ್ಯದ ಮಧ್ಯದಲ್ಲಿ ಶಿವಲಿಂಗವಿದೆ. ಶಿವಲಿಂಗಕ್ಕೆ ರುದ್ರಾಕ್ಷಿ ಪೇಟವನ್ನು ತೊಡಿಸಲಾಗಿದೆ. ಶಿವಲಿಂಗದ ಬಲಬದಿಯಲ್ಲಿ ವೀರ ಕೈಮುಗಿದು ಕುಳಿತಿದ್ದಾನೆ. ಶಿವಲಿಂಗದ ಎಡಕ್ಕೆ ಕುಳಿತ ನಂದಿಯಿದೆ. ಈ ಮೂರು ಚಿತ್ರಣವನ್ನು ಮಂಟಪದಲ್ಲಿ ತೋರಿಸಿರುವುದು ಇದೊಂದು ಗೋಗ್ರಹಣ ವೀರಗಲ್ಲಾಗಿದೆ. ಈ ವೀರಗಲ್ಲಿನ ಬಳಿಯಲ್ಲಿಯೇ ಮತ್ತೊಂದು ವೀರಗಲ್ಲು ಈ ವೀರಗಲ್ಲು ಪಟ್ಟಿಕೆಯಲ್ಲಿ ಕೆಳಗಿನ ಚೌಕದಲ್ಲಿ ವೀರನು ಬಂದೂಕನ್ನು ಹಿಡಿದು ಪ್ರಯೋಗ ಭಂಗಿಯಲ್ಲಿದ್ದಾನೆ.[೨೪]

೯. ಸ್ಥಳ : ಆಂಜನೇಯ ದೇವಾಲಯ ಬಳಿ

ಗ್ರಾಮ : ಅದರಗುಂಚಿ

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಈ ವೀರಗಲ್ಲಿನಲ್ಲಿ ನಾಲ್ಕು ಭಾಗಗಳಿವೆ. ಕೆಳಗಿನ ಭಾಗದಲ್ಲಿ ಹೋರಾಟದ ಚಿತ್ರಣವಿದೆ. ಇಲ್ಲಿ ಎರಡೂ ಕಡೆಯವರು ಹೋರಾಟದಲ್ಲಿ ನಿರತರಾಗಿದ್ದಾರೆ. ಇಲ್ಲಿ ಕೆಲವರು ಬಿಲ್ಲು ಬಾಣವನ್ನು ಕೆಲವರು ಕತ್ತಿ ಗುರಾಣಿಯನ್ನು ಹಿಡಿದಿದ್ದಾರೆ. ವೀರನೊಂದಿಗೆ ಮತ್ತಿಬ್ಬರು ಸಹಚರರಿದ್ದಾರೆ. ವೈರಿ ದಳದಲ್ಲಿ ನಾಲ್ವರಿದ್ದು ಅವರಲ್ಲಿ ಇಬ್ಬರು ಅಶ್ವರೂಢರಾಗಿದ್ದಾರೆ. ಮತ್ತೊಬ್ಬರು ಕಾಲಾಳುದವರಾಗಿದ್ದಾರೆ. ಮೂರನೆ ಭಾಗದಲ್ಲಿ ಆರು ಜನ ಅಪ್ಸರೆಯರು ವೀರನನ್ನು ವಿಮಾನದಲ್ಲಿ ಕುಳ್ಳರಿಸಿಕೊಂಡು ದೇವಲೋಕಕ್ಕೆ ಕೊಂಡೊಯ್ಯುತ್ತಿದ್ದ ದೃಶ್ಯ ಆಕರ್ಷಕ. ಇವರು ಒಬ್ಬರ ಕೈ ಒಬ್ಬರು ಹಿಡಿದು ಸಾಲಾಗಿ ನಿಂತಿದ್ದಾರೆ. ಮೇಲಿನ ಭಾಗದಲ್ಲಿ ದೇವಲೋಕದ ಚಿತ್ರಣವಿದೆ. ಮಧ್ಯದಲ್ಲಿ ಶಿವಲಿಂಗಕ್ಕೆ ಪೂಜಿಸುತ್ತಿರುವ ನಿಂತ ಯತಿ ಇದ್ದಾನೆ. ಆತನ ಬಲಭಾಗಕ್ಕೆ ವೀರ ಪೀಠದ ಮೇಲೆ ಕುಳಿತಿದ್ದಾನೆ.ಶಿವಲಿಂಗದ ಎಡಗಡೆಗೆ ಕುಳಿತ ನಂದಿ ಇದೆ. ವೀರಗಲ್ಲಿನಲ್ಲಿ ಶಾಸನ ಇದ್ದು ತೃಟಿತಗೊಂಡಿದೆ.[೨೫]

೧೦. ಸ್ಥಳ : ಮಹಾಮಾಯಿ ದೇವಾಲಯ

ಗ್ರಾಮ : ಕೋಳಿವಾಡ

ಕಾಲಮಾನ : ಕ್ರಿ.ಶ. ೧೬ನೇ ಶತಮಾನ

ವಸ್ತು : ಕಪ್ಪುಶಿಲೆ

ವೀರಗಲ್ಲು ಒಂದೇ ಪಟ್ಟಿಕೆಯಲ್ಲಿದ್ದರೂ ಎರಡು ಭಾಗಗಳಾಗಿ ತೋರಿಸಿದ್ದಾರೆ. ವೀರ ಬಲಗೈಯಲ್ಲಿ ಕತ್ತಿಯನ್ನು ಎಡಗೈಯಲ್ಲಿ ಗುರಾಣಿಯನ್ನು ಹಿಡಿದು ನಿಂತಿರುವನು. ಕೈಯಲ್ಲಿ ಕುಂಡಲ, ಕೈಕಡಗ, ಕಾಲ್ಗಡಗ ಮುಂತಾದ ಆಭರಣಗಳಿಂದ ಅಲಂಕೃತಗೊಂಡಿರುವನು. ವೀರನ ಕೆಳಭಾಗದಲ್ಲಿ ಆತನ ಕುದುರೆ ಇದೆ. ಶಿಲ್ಪಕ್ಕೆ ಬಣ್ಣ ಬಳೆದಿರುವುದರಿಂದ ವಿವರಣೆ ಅಸ್ಪಷ್ಟವಾಗಿದೆ.[೫೬]

೧೧.	ಸ್ಥಳ	:	ಮಹಾಮಾಯಿ ದೇವಾಲಯ
	ಗ್ರಾಮ	:	ಕೋಳಿವಾಡ
	ಕಾಲಮಾನ	:	ಕ್ರಿ.ಶ. ೧೬ನೇ ಶತಮಾನ
	ವಸ್ತು	:	ಕಪ್ಪುಶಿಲೆ

ವೀರಗಲ್ಲಿನಲ್ಲಿ ವೀರ ಕುದುರೆಯ ಮೇಲೆ ಕುಳಿತಿದ್ದಾನೆ. ಮತ್ತೊಬ್ಬ ಕುದುರೆಗೆ ಅಭಿಮುಖವಾಗಿ ನಿಂತು ಕೈಯಲ್ಲಿ ಹಿಡಿದ ಬಾಣದಿಂದ ಕುದುರೆಗೆ ಚುಚ್ಚುತ್ತಿದ್ದಾನೆ. ಎಡಗೈಯಲ್ಲಿ ಬಿಲ್ಲು ಇದೆ. ಶಿಲ್ಪದಲ್ಲಿ ಇಬ್ಬರೂ ವ್ಯಕ್ತಿಗಳಿಗೆ ಸಮಾನ ಪ್ರಾಮುಖ್ಯತೆ ನೀಡಿರುವುದರಿಂದ ವೀರಯಾರೆಂಬುದು ಸರಿಯಾಗಿ ತಿಳಿದು ಬರುತ್ತಿಲ್ಲ. ಪ್ರಾಯಶಃ ಕುದುರೆಯ ಮೇಲೆ ಕುಳಿತಿರುವನೇ ವೀರನಾಗಿರಬಹುದು ಈ ದೃಶ್ಯದ ಮೇಲ್ಪಟ್ಟಿಕೆಯಲ್ಲಿ ಶಿವಲಿಂಗವನ್ನು ತೋರಿಸಲಾಗಿದೆ.[೫೭]

ಶಾಸನೋಕ್ತ ವೀರಗಲ್ಲು

ಶಾಸನೋಕ್ತ ವೀರಗಲ್ಲುಗಳೆಂದರೆ ಶಾಸನವನ್ನೊಳಗೊಂಡ ವೀರಗಲ್ಲು ಎಂದರ್ಥ. ಉಬ್ಬು ಶಿಲ್ಪದ ಜೊತೆಗೆ ಕೆಳಭಾಗದಲ್ಲಿ ಅಥವಾ ಪಟ್ಟಿಕೆಯಲ್ಲಿ ಶಾಸನಗಳನ್ನು ಕೊರೆದಿರುವುದು ಶಾಸನೋಕ್ತವೀರಗಲ್ಲುಗಳ ವೈಶಿಷ್ಟ್ಯತೆಯಾಗಿದೆ. ಇಂತಹ ಶಾಸನೋಕ್ತವೀರಗಲ್ಲುಗಳು ಹುಬ್ಬಳಿ ತಾಲೂಕಿನಲ್ಲಿ ಇದ್ದು ಅವುಗಳ ಪಟ್ಟಿಕೆಗಳನ್ನು ಈ ರೀತಿ ನೊಡಲಾಗಿದೆ.

೧.	ಸ್ಥಳ	:	ಹನುಮಂತ ದೇವರಗುಡಿ
	ಗ್ರಾಮ	:	ಗಬ್ಬೂರು
	ರಾಜವಂಶ		ಮುಮ್ಮಡಿಕೃಷ್ಣ
	ಕಾಲಮಾನ	:	ಸು. ಕ್ರಿ.ಶ. ೮-೯ನೇ ಶತಮಾನ

ಇದೊಂದು ವೀರಗಲ್ಲು ಶಾಸನವಾಗಿದೆ. ಅಕ್ಷರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ ಗೋಗ್ರಹಣದಲ್ಲಿ ಸಿರಿವೆಗೆ ಎಂಬುವವನು ಮರಣ ಹೊಂದಿದ ಬಗ್ಗೆ ತಿಳಿಸುತ್ತದೆ.[೫೮]

೨.	ಸ್ಥಳ	:	ಸರ್ವೆನಂ. ೧೪ ಹೊಲದಲ್ಲಿ
	ಗ್ರಾಮ	:	ಕಟ್ನೂರು
	ಕಾಲಮಾನ	:	ಸು. ಕ್ರಿ.ಶ. ೯ನೇ ಶತಮಾನ

ಇದೊಂದು ವೀರಗಲ್ಲು ಶಾಸನ ಕಟ್ನೂನೂರ ಗೋಗ್ರಹಣದಲ್ಲಿ ಕಟ್ಟಳಿಲಾಣಗನು ಮರಣ ಹೊಂದಿದ ಬಗ್ಗೆ ತಿಳಿಸುತ್ತವೆ.[೫೯]

೩. ಸ್ಥಳ : ಹನುಮಂತ ದೇವಾಲಯದ ಬಳಿ

ಗ್ರಾಮ : ಗಬ್ಬೂರು

ಕಾಲಮಾನ : ಕ್ರಿ.ಶ. ೯೦೯

ಶಾಸನ ಅಕ್ಷರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಗೊಬ್ಬನೂರಿನಲ್ಲಿ ಕೊಂತದ ನಾಗನ ಮರಣ ಎಂಬ ಉಲ್ಲೇಖವಿದೆ.[೬೦]

೪. ಸ್ಥಳ : ಹನುಮಂತ ದೇವಾಲಯದ ಎದುರು

ಗ್ರಾಮ : ಮಂಟೂರು

ಕಾಲಮಾನ : ಕ್ರಿ.ಶ. ೧೧ನೇ ಶತಮಾನ

ಇದೊಂದು ವೀರಗಲ್ಲು ಶಾಸನವಾಗಿದೆ. ಅಕ್ಷರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಕಲಿಬಿಟ್ಟನ ಮರಣದ ಬಗ್ಗೆ ತಿಳಿಸುತ್ತದೆ.[೬೧]

೫. ಸ್ಥಳ : ಕಲ್ಮೇಶ್ವರ ದೇವಾಲಯದ ಆವರಣ.

ಗ್ರಾಮ : ಕೋಳಿವಾಡ

ಕಾಲಮಾನ : ಸು. ಕ್ರಿ.ಶ. ೧೨ನೇ ಶತಮಾನ

ಇದೊಂದ ವೀರಗಲ್ಲು ಶಾಸನವಾಗಿದೆ. ಆಕರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟ.[೬೨]

೬. ಸ್ಥಳ : ಕೆರೆಯ ಬಳಿ

ಗ್ರಾಮ : ನೂಲ್ವಿ

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ಇದೊಂದು ವೀರಗಲ್ಲು ಶಾಸನವಾಗಿದೆ. ಅಕ್ಷರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ.[೬೩]

೭. ಸ್ಥಳ : ಊರ ಕೆರೆಬಳಿ ವೀರಗಲ್ಲು

ಗ್ರಾಮ : ಬೆಳಗಲಿ

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ಇದೊಂದು ವೀರಗಲ್ಲು ಶಾಸನವಾಗಿದೆ. ಅಕ್ಷರಗಳು ತೃಟಿತಗೊಂಡಿರುವದರಿಂದ ವಿಷಯ ಅಸ್ಪಷ್ಟವಾಗಿದೆ. ಮರಣಹೊಂದಿದ ವೀರನಿಗೆ ಗಾವುಂಡ ಹಾಗೂ ಹಿಟ್ಟುಗಳು ದತ್ತಿ ನೀಡಿದ್ದಾರೆ.[೬೪]

೮. ಸ್ಥಳ : ವೀರಭದ್ರ ದೇವಾಲಯ ಹತ್ತಿರ ವೀರಗಲ್ಲ

ಗ್ರಾಮ : ಬ್ಯಾಹಟ್ಟಿ

ಕಾಲಮಾನ : ೧೨ನೇ ಶತಮಾನ

ಈ ವೀರಗಲ್ಲು ಶಾಸನ ಅಸ್ಪಷ್ಟವಾಗಿದೆ.[೬೫]

೯. ಸ್ಥಳ : ಹನುಮಂತ ದೇವರಗುಡಿ ಹತ್ತಿರ ವೀರಗಲ್ಲ

ಗ್ರಾಮ : ಬ್ಯಾಹಟ್ಟಿ

ಕಾಲಮಾನ : ೧೨ನೇ ಶತಮಾನ

ಇದೊಂದು ವೀರಗಲ್ಲು ಶಾಸನವಾಗಿದೆ. ಈಶ್ವರನೆಂಬುವನು ಗಾವುಂಡನಾಗಿದ್ದ ಬಗ್ಗೆ ತಿಳಿಸುತ್ತದೆ.[೧೬]

೧೦. ಸ್ಥಳ : ವಲ್ಲಭೇಶ್ವರ ದೇವಾಲಯದ ಆವರಣ

ಗ್ರಾಮ : ಮಂಟೂರು

ಕಾಲಮಾನ : ಸು. ಕ್ರಿ.ಶ. ೧೨ನೇ ಶತಮಾನ

ಅಕ್ಷರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ.[೧೭]

೧೧. ಸ್ಥಳ : ಹುಡೇದಹತ್ತಿರ ವೀರಗಲ್ಲು (ಈಗ ಇಲ್ಲ)

ಗ್ರಾಮ : ಛಬ್ಬಿ

ಕಾಲಮಾನ : ಸು. ಕ್ರಿ.ಶ. ೮ ೯ನೇ ಶತಮಾನ

ಎಲೆವಳಿಯ ಬಿಜ್ಜಯ ಮತ್ತು ಜಕ್ಕರಿಸರು ವೀರ ಮರಣಹೊಂದಿದ ಬಗ್ಗೆ ತಿಳಿಸುತ್ತದೆ.[೧೮]

೧೨. ಸ್ಥಳ : ಹನುಮಂತ ದೇವಾಲಯದ ಬಳಿಯ ವೀರಗಲ್ಲ

ಗ್ರಾಮ : ವರೂರು

ಇದೊಂದು ವೀರಗಲ್ಲು ಶಾಸನಾವಗಿದೆ.ಎಲೆವಳೆಯ ಬಿಜ್ಜಯ ಮತ್ತು ಜಕ್ಕರಸರು ವೀರಮರಣ ಹೊಂದಿದ ಬಗ್ಗೆ ತಿಳಿಸುತ್ತದೆ.[೧೯]

೧೩. ಸ್ಥಳ : ಕಛೇರಿಯ ಆವರಣ (ಈಗ ಇಲ್ಲ)

ಗ್ರಾಮ : ಹುಬ್ಬಳ್ಳಿ

ತೃಟಿತಗೊಂಡಿದೆ.[೨೦]

೧೪. ಸ್ಥಳ : ಚಿಕ್ಕಮಠದ ಹತ್ತಿರ ವೀರಗಲ್ಲು

ಗ್ರಾಮ : ಬೆಳಗಲಿ

ಕಾಲಮಾನ : ೧೩ನೇ ಶತಮಾನ

ವೀರ ಮಡಿದ ಬಗ್ಗೆ ತಿಳಿಸುತ್ತದೆ.[೨೧]

೧೫. ಸ್ಥಳ : ಹನುಮಂತ ದೇವಾಲಯದ ಬಳಿ ವೀರಗಲ್ಲು

ಗ್ರಾಮ : ಅದರಗುಂಚಿ

ಕಾಲಮಾನ : ಕ್ರಿ.ಶ. ೧೪ನೇ ಶತಮಾನ

ಇದೊಂದು ವೀರಗಲ್ಲು ಶಾಸನವಾಗಿದೆ ಅಕ್ಷರಗಳು ತೃಟಿತಗೊಂಡಿದೆ.[೨೨]

೧೬. ಸ್ಥಳ : ಹುಡೇದ ಹತ್ತಿರ ವೀರಗಲ್ಲು

ಗ್ರಾಮ : ಛಬ್ಬಿ

ಕಾಲಮಾನ : ಕ್ರಿ.ಶ. ೧೫ನೇ ಶತಮಾನ

ತೃಟಿತ. ಅಸ್ಪಷ್ಟ [೨೩]

೩.೪. ಮಾಸ್ತಿಗಲ್ಲುಗಳು

ಮಾಸ್ತಿ ಎಂಬುದು ಸಂಸ್ಕೃತದ ಮಹಾಸತಿ ಎಂಬುದರ ಸಂಕ್ಷಿಪ್ತ ರೂಪ. ಪತಿ, ಸತ್ತ ಮೇಲೆ ಅವನ ಜೊತೆ ಪ್ರಾಣತ್ಯಾಗ ಮಾಡುವ ಸ್ತ್ರೀಯನ್ನು ಮಹಾಸತಿ ಅಥವಾ ಮಾಸ್ತಿ ಎಂದು ಕರೆಯುತ್ತಾರೆ. ಸತಿ ಹೋದವಳಿಗೆ ಸಮಾಜದಲ್ಲಿ ಹೆಚ್ಚಿನ ಗೌರವವಿರಲಿಲ್ಲ ಕಾರಣ ಅನಿವಾರ್ಯವಾಗಿ ಗಂಡ ಸತ್ತ ಮೇಲೆ ಆವನ ಜೊತೆ ಪ್ರಾಣತ್ಯಾಗ ಮಾಡುವ ಪದ್ಧತಿ ಇತ್ತು. ಮಡಿದ ಗಂಡನೊಂದಿಗೆ ಚಿತೆಯನ್ನು ಪ್ರವೇಶ ಮಾಡುವುದನ್ನು ಸಹಗಮನ ಎಂಬುದಾಗಿ ಕರೆಯುತ್ತಾರೆ. ಸತಿ ಹೋಗುವುದು ಎಂಬದಾಗಿ ಕೆಲವೊಮ್ಮೆ ಕರೆಯುತ್ತಾರೆ. ಈ ರೀತಿ ಮಾಡಿ ಮಡಿದ ಮಹಿಳೆಯಕ ಸ್ಮಾರಕಗಳೇ ಮಹಾಸತಿ ಗಲ್ಲುಗಳು. ಇವುಗಳನ್ನು ಮಾಸ್ತಿಗಲ್ಲು, ಮಾಸ್ತ್ಯಮ್ಮ, ವ್ಯಾಸನತೋಳು ಎಂಬುದಾಗಿ ಇಂದಿಗೂ ಕರೆಯುತ್ತಾರೆ.[೨೪]

ಪತಿಯ ಮೇಲಿನ ಅತಿಯಾದ ಪ್ರೇಮ ಪತಿವ್ರತೆಯ ವೈಭವೀಕರಣ ವೈಯಕ್ತಿಕ ಪ್ರತಿಷ್ಟೆ ಮಾನರಕ್ಷಣೆಯ ವ್ಯವಸ್ಥೆ ವಿಧವೆಯ ನಿಕೃಷ್ಟ ಜೀವನ ಮೊದಲಾದ ವೈಯಕ್ತಿಕ ಹಾಗೂ ಪತ್ನಿ ಅಗಲಬಾರದೆಂಬ ಪುರಷನ ಸ್ವಾರ್ಥ, ಪತ್ನಿ, ಇನ್ನೊಬ್ಬರ ವಶವಾಗಬಾರದೆಂಬ ಪುರುಷನ ಇಚ್ಛೆ, ಸಂಪತ್ತು ಪಡೆಯುವ ಸಂಚು, ಮನೆತನ ಹಾಗೂ ಸಮಾಜದ ಪ್ರತಿಷ್ಠೆ, ಸತ್ತವನೊಂದಿಗೆ ಪ್ರಿಯ ವಸ್ತುಗಳನ್ನು ಕಳಿಸುವ ನಂಬಿಕೆ, ಸತಿ, ಪತಿಗಳಿಬ್ಬರು ಸ್ವರ್ಗ ಪಡೆಯುವ ನಂಬಿಕೆ ಮೊದಲಾದ ಪರಲೋಕ ಕಲ್ಪನೆಗಳು, ಪುನರ್ಜನ್ಮ ಕಲ್ಪನೆ ಮೊದಲಾದ ಅಲೌಕಿಕ ಕಾರಣಗಳ ಸತಿ ಪದ್ಧತಿಯ ಉಗಮಕ್ಕೂ ಅದರ ಬೆಳವಣಿಗೆಗೂ ಕಾರಣವಾಗಿವೆ.[೨೫]

ವೀರಗಲ್ಲಿಗಳಿರವಂತೆ ಮಹಾಸತಿಗಲ್ಲುಗಳೂ ಮೂರು ಅಥವಾ ನಾಲ್ಕು ಚಿತ್ರಗಳಿರುತ್ತವೆ. ಬರೀ ಸ್ತ್ರೀವಿಗ್ರಹವೂ ಇರಬಹುದು. ಅಂದು ಸಹಗಮನವನ್ನು ಬಲವಂತವಾಗಿ ಮಾಡಿಸಲಾಗುತ್ತಿತ್ತು. ಎಂಬುದಕ್ಕೆ ಕರ್ನಾಟಕದಲ್ಲಿ ಎಲ್ಲಿಯೂ ನಿದರ್ಶನಗಳು ದೊರೆಯುವುದಿಲ್ಲ. ಸಹಗಮನ ಮಾಡುವುದು ಬಿಡುವುದು. ಹೆಂಗಸಿನ ವೈಯಕ್ತಿಕ ಪ್ರಶ್ನೆಯಾಗಿತ್ತು ಅನೇಕ ಮಹಿಳೆಯರು ಯುದ್ಧದಲ್ಲಿ ಮಡಿದ ತಮ್ಮ ಗಂಡಂದಿರಿಗೆ ವೀರಗಲ್ಲನ್ನು ನಿಲ್ಲಿಸಿರುವ ನಿರ್ದರ್ಶನಗಳು ದೊರೆಯುತ್ತವೆ. ಕೆಲವು ಮಹಾಸತಿಗಳ ಮೇಲೆ ಒಂದು ಕಂಬ ಮತ್ತು ಅದರ ಬಲಭಾಗದಿಂದ ಹೊರಟಿರುವ ಒಂದು ಕೈ ಇರುತ್ತದೆ. ಇದು ಒಕ್ಕೈಮಾಸ್ತಿಕಲ್ಲು ಎರಡು ಕೈಗಳು ಹೊರಟಿದ್ದರೆ ಇಕ್ಕೈ ಮಾಸ್ತಿಗಲ್ಲು ಎಂದು ಹೆಸರಿಸುತ್ತಾರೆ. ಕೆಲವೊಮ್ಮೆ ಮಹಾಸತಿಯ ಕೈಯಲ್ಲಿ ನಿಂಬೆಹಣ್ಣು ತಲೆ ಹಿಂದೆ ಪ್ರಭಾವಳಿಯಂತೆ ಕಾಣುವ ಜ್ವಾಲೆ ಇವರ ಸಂಕೇತವಾಗಿತ್ತು. ಕೆಲವೊಮ್ಮೆ ಮಹಾಸತಿಯರನ್ನು ವೀರರೊಡನೆ ಒಬ್ಬರಿಗಿಂತ ಹೆಚ್ಚು ಸ್ತ್ರೀಯರು ಸಹಗಮನ ಮಡಿದ್ದರೆ ಅಷ್ಟು ಜನ ಸ್ತ್ರಿ ತನ್ನ ಪತಿಯ ಬಲಗಡೆನಿಂತು ಎಡಗೈಯನ್ನು ಎತ್ತಿಸಿರುವ ಚಿತ್ರವನ್ನು ನಾವು ಗಮನಿಸಲಾಗಿದೆ.[೨೬]

ಪ್ರಸ್ತುತ ಈ ಅಧ್ಯಯನ ಹುಬ್ಬಳ್ಳಿ ತಾಲೂಕಿಗೆ ಸೀಮಿತವಾಗಿರುವುದರಿಂದ ಈ ತಾಲೂಕಿನ ಪ್ರದೇಶಗಳಾದ ಬೈರಿದೇವರಕೊಪ್ಪ, ವರೂರು, ನೂಲ್ವಿ, ಉಣಕಲ್ಲ, ಛಬ್ಬಿ, ಇನ್ನೂ ಮುಂತಾದ ಸ್ಥಳಗಳಲ್ಲಿ ನಾವು ಗುರುತಿಸಬಹುದಾಗಿದೆ.

೧. ಸ್ಥಳ : ಬಸ್ ನಿಲ್ದಾಣದ ಬಳಿ ಇರುವ ಕಲ್ಮೇಶ್ವರ ದೇವಾಲಯದ ಮುಂಭಾಗ
ಗ್ರಾಮ : ಬೈರಿದೇವರಕೊಪ್ಪ
ಕಾಲ : ಕ್ರಿ.ಶ. ೧೨ನೇ ಶತಮಾನ
ವಸ್ತು : ಕಪ್ಪುಶಿಲೆ

ಮಹಾಸತಿ ಶಿಲ್ಪದಲ್ಲಿ ಸತಿಯನ್ನು ಬೃಹತ್‌ಗಾತ್ರದಲ್ಲಿ ತೋರಿಸಲಾಗಿದೆ. ಸತಿಯು ತನ್ನ ಬಲಗೈಯನ್ನು ಮೇಲಕೆತ್ತಿ ಎಡಗೈಯನ್ನು ಕೆಳಗೆ ಇಳಿಬಿಟ್ಟಿದ್ದಾಳೆ. ಅಲ್ಲದೆ ಎಡಗೈಯಲ್ಲಿ ನಿಂಬೆಹಣ್ಣನ್ನು ಹಿಡಿದಿದ್ದಾಳೆ. ಸೀರೆಯನ್ನು ಉಟ್ಟಿದ್ದಾಳೆ. ಕೇಶವನ್ನು ಕೇದಿಗೆಯಿಂದ ಅಲಂಕರಿಸಿಕೊಂಡಿದ್ದಾಳೆ. ಕರ್ಣಕುಂಡಲ, ಹಾರ, ಸರ, ಕೈಕಡ ತೋಳಬಂಧಿ ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿದ್ದಾಳೆ.[೨೨]

೨. ಸ್ಥಳ : ನಾರಾಯಣ ದೇವಾಲಯದ ಗೋಡೆಯಲ್ಲಿ
ಗ್ರಾಮ : ಛಬ್ಬಿ
ಕಾಲ : ಕ್ರಿ.ಶ. ೧೫ ೧೬ನೇ ಶತಮಾನ
ವಸ್ತು : ಕಪ್ಪುಶಿಲೆ

ಇಲ್ಲಿ ವೀರಸತಿಗಲ್ಲು ಎರಡು ಪಟ್ಟಿಕೆಗಳಲ್ಲಿ ಕಂಡುಬರುತರ್ತದೆ. ಕೆಳಗಿನ ಪಟ್ಟಿಕೆಯಲ್ಲಿ ವೀರ ಸತಿಯರಿಬ್ಬರು ಕೈಮುಗಿದು ಅರ್ಧ ಪದ್ಮಾಸನದಲ್ಲಿ ಕುಳಿತಿದ್ದಾರೆ. ಇವರು ಪತ್ರಕುಂಡಲ, ಕೈಕಡಗ, ಕಾಲಕಡಗ, ಹಾರ, ಸರ, ಇನ್ನೂ ಮುಂತಾದ ಅಭರಣಗಳಿಂದ ಅಲಂಕೃತಗೊಂಡಿದ್ದಾರೆ. ತಮ್ಮ ಕೇಶವನ್ನು ಮೇಲಕೆತ್ತಿ ಕಟ್ಟಿದ್ದಾರೆ. ಇವರ ಮೇಲ್ಭಾಗದಲ್ಲಿ ಪದ್ಮದ ಅಲಂಕರಣವಿದೆ. ಮೇಲಿನ ಪಟ್ಟಿಕೆಯ ಮಧ್ಯಭಾಗದಲ್ಲಿ ಶಿವಲಿಂಗವಿದೆ. ಅದರ ಬದಿಯಲ್ಲಿ ವೀರ ಸತಿಯರಿಬ್ಬರು ಕೈಮುಗಿದು ಕುಳಿತಿದ್ದಾರೆ. ಶಿವಲಿಂಗದ ಎಡಭಾಗದಲ್ಲಿ ಕುಳಿತ ನಂದಿ ಇದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರಿದ್ದಾರೆ.[೨೩]

೩. ಸ್ಥಳ : ಬಸ್‌ನಿಲ್ದಾಣ ಬಳಿಯ ಮಠದಹತ್ತಿರ
ಗ್ರಾಮ : ಬೈರಿದೇವರಕೊಪ್ಪ
ಕಾಲ : ಕ್ರಿ.ಶ. ೧೨ನೇ ಶತಮಾನ
ವಸ್ತು : ಕಪ್ಪುಶಿಲೆ

ಈ ವೀರ ಸತಿಕಲ್ಲಿನಲ್ಲಿ ಕೇವಲ ಎರಡು ಭಾಗಗಳು ಮಾತ್ರ ಕಂಡುಬರುತ್ತವೆ. ಕೆಳಗಿನ ಭಾಗದಲ್ಲಿ ಬಲ ಮಗ್ಗಲಿನಲ್ಲಿ ಇಬ್ಬರು ಸತಿಯರು ತಮ್ಮ ಬಲಗೈಗಳನ್ನು ಮೇಲಕ್ಕೆತ್ತಿ ಎಡಗೈಯನ್ನು ಕೆಳಗೆ ಇಳಿಬಿಟ್ಟು ನಿಂತಿದ್ದಾರೆ. ಈ ಇಬ್ಬರು ಸತಿಯರು ವಸ್ತ್ರಾಭರಣಗಳಿಂದ ಅಲಂಕೃತಗೊಂಡಿದ್ದು ತಮ್ಮ ಕೇಶವನ್ನು ಕೇದಿಗೆಯಿಂದ ಅಲಂಕರಿಸಿಕೊಂಡಿದ್ದಾರೆ. ಇವರಿಬ್ಬರ ಮಧ್ಯದಲ್ಲಿ ವ್ಯಕ್ತಿ ಒಬ್ಬನನ್ನು

ತೋರಿಸಲಾಗಿದೆ. ಸತಿಯರ ಎಡಮಗ್ಗಲಲ್ಲಿ ಅಂದರೆ ಶಿಲ್ಪದ ಎಡಭಾಗದಲ್ಲಿ ಒಂದು ಮಗುವಿದ್ದು ಅದರ ಮಧ್ಯದಲ್ಲಿ ವೀರ, ವೀರನ ಬದಿಯಲ್ಲಿ ಸತಿಯರಿಬ್ಬರು ಕುಳಿತಿದ್ದಾರೆ. ಈ ಮೂರ ಜನ ಪದ್ಮಾಸನದಲ್ಲಿ ಕೈಮುಗಿದು ಕುಳಿತಿದ್ದಾರೆ. ವಿಮಾನವನ್ನು ಅಪ್ಸರೆಯರಿಬ್ಬರೂ ಹಿಡಿದುಕೊಂಡು ನಿಂತಿದ್ದಾರೆ. ಮೇಲಿನ ಭಾಗದಲ್ಲಿ ಶಿವಲಿಂಗಕ್ಕೆ ಯತಿಯೊಬ್ಬ ನಿಂತು ಪೂಜಿಸುತ್ತಿದ್ದಾನೆ. ಆತನ ಹಿಂಭಾಗದಲ್ಲಿ ವೀರ ಕೈಮುಗಿದು ಕುಳಿತಿದ್ದಾನೆ. ವೀರನ ಬಲಕ್ಕೆ ಸತಿಯರಿಬ್ಬರು ಕೈ ಮುಗಿದು ಕುಳಿತಿದ್ದಾರೆ. ಶಿವಲಿಂಗದ ಎಡಬದಿಯಲ್ಲಿ ಕುಳಿತ ಮೂರು ನಂದಿಗಳನ್ನು ತೋರಿಸಲಾಗಿದೆ.[೨೯]

೩.೫. ನಿಷದಿಗಲ್ಲುಗಳು

ಜೈನ ಪರಂಪರೆಯಲ್ಲಿ ತಮ್ಮ ಆತ್ಮೀಯರು ಬಂಧುಗಳು ಗುರುಗಳು ಪೂಜ್ಯವ್ಯಕ್ತಿಗಳು ತಮ್ಮ ಬದುಕಿನ ಪರಮ ಗುರಿಯಾದ ಸದ್ಗತಿ (ಮೋಕ್ಷ) ಸಂಪಾದನೆಗಾಗಿ ಸಲ್ಲೇಖನದಿಂದ ಮರಣವನ್ನು ಅಪ್ಪಿದಾಗ ಅವರ ಪರೋಕ್ಷ ವಿನಯಾರ್ಥವಾಗಿ ಜಿನಾಲಯಗಳನ್ನು ನಿರ್ಮಿಸುವುದು ನಿಷಧಿಗಲ್ಲುಗಳನ್ನು ನಿಲ್ಲಿಸುವುದು. ನಿಷಧಿ ಮಂಟಪಗಳನ್ನು ಕಟ್ಟಿಸುವುದು. ಶಾಸನಗಳನ್ನು ಹಾಕಿಸುವುದು ಚತುರ್ದಾನಗಳನ್ನು ಮಾಡುವುದು ಪ್ರಾಚೀನ ಕಾಲದಿಂದ ನಡೆದುಬಂದ ಪರಂಪರೆಯಾಗಿದೆ.

ರತ್ನಕರಂಡಕ ಶ್ರಾವಕಾಚಾರ ಶಾಸ್ತ್ರಸಾರ ಸಮುಚ್ಚಯ ಭಗವತೀಆರಾಧನಾ, ಉತ್ತರಾಧ್ಯಯನ ಸೂತ್ರ ಮೊದಲಾದವುಗಳಲ್ಲಿ ಈ ವಿಷಯದ ಕುರಿತು ಪ್ರಸ್ತಾಪವಿದೆ. ಶ್ರಾವಕಾಚಾರದಲ್ಲಿ ಸತ್ ಮತ್ತು ಲೇಖನ ಎಂಬೆರೆಡು ಶಬ್ದಗಳಿಂದ ಸಲ್ಲೇಖನ ಎಂದು ತಿಳಿಸುವುದು[೩೦] ಒಟ್ಟಾರೆ ಮರಣವನ್ನಪ್ಪಿದವರ ಪರೋಕ್ಷ ವಿನಯಾರ್ಥವಾಗಿ ನಿಲ್ಲಿಸಿದ ಶಿಲಾಫಲಕಗಳೇ ನಿಷಧಿಗಲ್ಲುಗಳಾಗಿವೆ. ಶಾಸನಗಳಲ್ಲಿ ನಿಶೀಧಿಕಾ ನಿಶಿಧಿ, ನಿಶೀದಿಗೆ, ನಿಷಧಿ, ನಿಷಿದಿ, ನಿಷಿದ್ಯಾಂ, ನಿಷಿದಿಗೆ ನಿಸ್ತಿಗೆ ಎಂದು ಕರೆಯಲಾಗಿದೆ.[೩೧]

ನಿಷಧಿ ಫಲಕಗಳಲ್ಲಿ ಸಾಮಾನ್ಯವಾಗಿ ಮುಖಿ ಅಥವಾ ಶ್ರಾವಕರ ಸಲ್ಲೇಖನ ವೃತ್ತದ ವಿಚಾರಗಳನ್ನು ಕೆಳಗಿನಿಂದ ಮೇಲಕ್ಕೆ ಅವರ ಪ್ರತಿರೂಪವನ್ನು ಉಬ್ಬಾಶಿಲ್ಪಗಳ ಮುಖಾಂತರ ನಿರೂಪಿಸಲಾಗುತ್ತದೆ. ಕೆಳಹಂತದಲ್ಲಿ ಶ್ರುತಪೀಠದ ಮೇಲಿರಿಸಿದ ಜಿನಶಾಸನದ ಪ್ರತಿನಿಧಿ ಅದರ ಇಕ್ಕೆಲಗಳಲ್ಲಿ ಉಪದೇಶ ಮಾಡುವ ಮುನಿ ಮತ್ತು ಉಪದೇಶ ಪಡೆಯುತ್ತಿರುವ ಶಿಷ್ಯನನ್ನು ಚಿತ್ರಿಸಲಾಗಿರುತ್ತದೆ. ಮೇಲಿನ ಹಂತದಲ್ಲಿ ತೀರ್ಥಂಕರ ಅವನ ಪಾರ್ಶ್ವಗಳಲ್ಲಿ ಸಮಾಧಿ ಮರಣನಂತರ ತೀರ್ಥಂಕರನ ಸನ್ನಿಧಿಯಲ್ಲಿ ಶಾಶ್ವತ ಉಪದೇಶ ಪಡೆಯುತ್ತಿರುವ ವ್ರತಸ್ಥರ ಚಿತ್ರಣಗಳಿರುತ್ತವೆ. ಈ ನಿಷಧಿಗಲ್ಲುಗಳು ಆಕಾರ ಒಂದರಿಂದ ನಾಲ್ಕು ಹಂತದ ಶಿಲ್ಪ ಪಟ್ಟಿಕೆಗಳನ್ನೊಳಗೊಂಡ ಫಲಕದ ಆಕಾರದಲ್ಲಿರುತ್ತವೆ.[೩೨] ಇವೆಲ್ಲವೂ ನಿಷಧಿಗಲ್ಲುಗಳ ಸಾಮಾನ್ಯ ಲಕ್ಷಣಗಳಾಗಿವೆ.

ಪ್ರಸ್ತುತ ಈ ಅಧ್ಯಯನ ಹುಬ್ಬಳ್ಳಿ ತಾಲ್ಲೂಕಿಗೆ ಒಳಪಟ್ಟಿದ್ದು ಈ ಪ್ರದೇಶದಲ್ಲಿ ಮಂಟೂರು, ಛಬ್ಬಿಯಲ್ಲಿ ನಿಷಧಿಗಲ್ಲುಗಳನ್ನು ಕಾಣಬಹುದಾಗಿದೆ.

೧.	ಸ್ಥಳ	:	ವಲ್ಲಭೇಶ್ವರ ದೇವಾಲಯದ ಮುಂಭಾಗ
	ಗ್ರಾಮ	:	ಮಂಟೂರು

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ವಸ್ತು ಕಪ್ಪುಶಿಲೆ

ಈ ನಿಷಧಿಯ ಕೆಳಗಿನ ಭಾಗದಲ್ಲಿ ಶಾಸನ ಇದೆ. ಮೇಲಿನ ಎರಡು ಪಟ್ಟಿಕೆಗಳಲ್ಲಿ ಚಿತ್ರಗಳನ್ನು ಹೊಂದಿದೆ. ಒಂದು ದೃಶ್ಯದಲ್ಲಿ ಮಧ್ಯದಲ್ಲಿ ವ್ಯಾಸಪೀಠ ಇದೆ. ಅದರಲ್ಲಿ ಪುಸ್ತಕವಿದೆ. ಈ ಪೀಠದ ಎಡಬದಿಯಲ್ಲಿ ಜೈನಮುನಿಯು ತನ್ನ ಬಲಗೈಯನ್ನು ಪುಸ್ತಕದ ಕಡೆ ಮಾಡಿ ಎಡಗೈಯನ್ನು ತೊಡೆಯ ಮೇಲಿಟ್ಟುಕೊಂಡು ಸಲ್ಲೆಖನವ್ರತವನ್ನು ಉಪದೇಶಿಸಿದ್ದಾನೆ. ವ್ಯಾಸಪೀಠದ ಮತ್ತೊಂದು ಮಗ್ಗಲಲ್ಲಿ ವ್ರತಧಾರಿಯು ಕೈಮುಗಿದು ಕುಳಿತು ವ್ರತವನ್ನು ಉಪದೇಶಿಸಿದ್ದಾನೆ. ವ್ಯಾಸಪೀಠದ ಮತ್ತೊಂದು ಮಗ್ಗಲಲ್ಲಿ ವ್ರತ ಧಾರಿಯು ಕೈಮುಗಿದು ಕುಳಿತು ಉಪದೇಶವನ್ನು ಕೇಳುತ್ತಿದ್ದಾನೆ. ಈ ದೃಶ್ಯದ ಮೇಲಿನ ಪಟ್ಟಿಕೆಯಲ್ಲಿ ಜಿನನು ಪದ್ಮಾಸನದಲ್ಲಿ ಕುಳಿತಿದ್ದಾನೆ. ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಜಿನನಪಾರ್ಶ್ವಗಳಲ್ಲಿ ಚಾಮರಧಾರಿಣಿ ಇದ್ದು ಇವರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಇಲ್ಲಿ ಸಲ್ಲೇಖನವನ್ನು ಕೈಗೊಂಡ ವ್ಯಕ್ತಿಯು ಜಿನನ ಸಾನಿದ್ಯಕ್ಕೆ ಹೋಗುವವನು ಎಂಬ ಅರ್ಥದಲ್ಲಿ ಎರಡು ದೃಶ್ಯದಲ್ಲಿ ಜಿನನನ್ನು ತೋರಿಸಲಾಗಿದೆ.[೮೩]

೩.೬. ಇತರೆ ಶಾಸನಗಳು

ಮೇಲಿನ ಶಾಸನಗಳು ಹೊರತಾಗಿ ಹುಬ್ಬಳ್ಳಿ ತಾಲೂಕಿನಾದ್ಯಂತ ಇತರೆ ಸ್ಮಾರಕ ಶಿಲ್ಪಗಳಾದ ಶಾಸನಗಳು ದೊರೆತಿವೆ. ಅವುಗಳ ವೈಶಿಷ್ಟ್ಯತೆಯನ್ನು ಈ ಕೆಳಗೆ ನೀಡಲಾಗಿದೆ.

೧. ಸ್ಥಳ : ಹುಡೆದ ಹನುಮಂತ ದೇವರ ಗುಡಿಹತ್ತಿರ

ಗ್ರಾಮ : ಶಿರಗುಪ್ಪಿ

ರಾಜವಂಶ : ಸೇಂದ್ರಕ

ಅರಸ : ಬಾಣಸತ್ತಿ

ಕಾಲಮಾನ : ಕ್ರಿ.ಶ. ೬ ೭ನೇ ಶತಮಾನ

ತ್ರುಟಿತಗೊಂಡಿದೆ ಅರಸನ ಮಗನು ಸಿರಗುಪ್ಪಿಯನ್ನಾಳಿದ ಉಲ್ಲೇಖವಿದೆ.[೮೪]

೨. ಸ್ಥಳ : ಹುಡೆದ ಬಾವಿ ಕಂಬ

ಗ್ರಾಮ : ಛಬ್ಬಿ

ರಾಜವಂಶ : ಬಾದಾಮಿ ಚಾಲುಕ್ಯ

ಅರಸ : ವಿಜಯಾದಿತ್ಯ

ಕಾಲಮಾನ : ಕ್ರಿ.ಶ. ೮ನೇ ಶತಮಾನ

ಅಕ್ಷರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಿದೆ.[೮೫]

೩. ಸ್ಥಳ : ತಟ್ಟೆಯವರ ಮನೆಹತ್ತಿರ ಪಾದಪೀಠ

ಗ್ರಾಮ : ಸುಳ್ಳ

ರಾಜವಂಶ : ರಾಷ್ಟ್ರಕೂಟ

ಅರಸ : ಅಮೋಘವರ್ಷ

ಕಾಲಮಾನ : ೮ನೇ ಶತಮಾನ

ಪಾದ ಪೀಠದ ಮೇಲಿನ ಶಾಸನ ಇದಾಗಿದೆ. ಗುರುವಿನ ಪಾದುಕೆಗಳ ಪೂಜೆ ಆರಾಕಲ್ಲು ೬೦ರ ಗಾವುಂಡರ ಬಗ್ಗೆ ಉಲ್ಲೆಖಿಸುತ್ತದೆ. [೮೬]

೪. ಸ್ಥಳ : ಕಟ್ಟಿದ ಹನುಮಂತ ದೇವರ ಗುಡಿ ಹಿಂಭಾಗ

ಗ್ರಾಮ : ಶಿರಗುಪ್ಪಿ

ರಾಜವಂಶ : ರಾಷ್ಟ್ರಕೂಟರು

ಅರಸ : ಬಾಣಸತ್ತಿ

ಕಾಲಮಾನ : ಕ್ರಿ.ಶ. ೮-೯ನೇ ಶತಮಾನ

ಪರಶುರಾಮತಿಲಕ ಮತ್ತು ಇಂದ್ರರನ್ನು ಉಲ್ಲೇಖಿಸುತ್ತದೆ.[೮೭]

೫. ಸ್ಥಳ : ಕಲ್ಮೇಶ್ವರ ಗುಡಿ ಆವರಣ

ಗ್ರಾಮ : ಕೋಳಿವಾಡ

ರಾಜವಂಶ : ರಾಷ್ಟ್ರಕೂಟ

ಅರಸ : ಖೊಟ್ಟಿಗೆ

ಕಾಲಮಾನ : ಕ್ರಿ.ಶ. ೯-೧೦ನೇ ಶತಮಾನ

ಅಕ್ಷರಗಳು ತೃಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿವೆ. ಗಂಗವಂಶದ ಸತ್ಯಾಶ್ರಯ ಕೊಂಗಣಿ ವರ್ಮನನ್ನು ಉಲ್ಲೆಖಿಸುತ್ತದೆ.[೮೮]

೬. ಸ್ಥಳ : ಕಛೇರಿ ಆವರಣ

ಗ್ರಾಮ : ಹುಬ್ಬಳ್ಳಿ

ರಾಜವಂಶ : ರಾಷ್ಟ್ರಕೂಟ

ಅರಸ : ನಿತ್ಯವರ್ಷ

ಕಾಲಮಾನ : ಕ್ರಿ.ಶ. ೯-೧೦ನೇ ಶತಮಾನ

ಶಾಸನ ತ್ರುಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ.[೮೯]

೭. ಸ್ಥಳ : ಊರಚಾವಡಿಯ ಬಳಿ

ಗ್ರಾಮ : ಇಂಗಳಹಳ್ಳಿ

ಕಾಲಮಾನ : ಕ್ರಿ.ಶ. ೧೦ನೇ ಶತಮಾನ

ಅಕ್ಷರಗಳು ಸಂಪೂರ್ಣ ಸವೆದುಹೋದುದರಿಂದ ವಿಷಯದ ಮಾಹಿತಿ ಇಲ್ಲ. [೯೦]

೮. ಸ್ಥಳ : ಊರು ಅಗಸಿಯ ಹತ್ತಿರ

ಗ್ರಾಮ : ಇಂಗಳಹಳ್ಳಿ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ತ್ರೈಲೋಕ್ಯಮಲ್ಲ

ಕಾಲಮಾನ : ಕ್ರಿ.ಶ. ೧೧ನೇ ಶತಮಾನ

ಶಾಸನದ ಅಕ್ಷರಗಳು ತ್ರುಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ.[೯೧]

೯. ಸ್ಥಳ : ಮಲ್ಲಿಕಾರ್ಜುನ ದೇವಾಲಯ

ಗ್ರಾಮ : ಬಂಧಿವಾಡ

ರಾಜವಂಶ : ಕಲ್ಯಾಣದ ಚಾಲುಕ್ಯ

ಅರಸ : ತ್ರೈಲೋಕ್ಯಮಲ್ಲ

ಕಾಲಮಾನ : ಕ್ರಿ.ಶ. ೧೧ನೇ ಶತಮಾನ

ಶಾಸನದ ಅಕ್ಷರಗಳು ಸವೆದಿರುವ ಕಾರಣ ವಿಷಯ ಅಸ್ಪಷ್ಟವಾಗಿದೆ.[೯೨]

೧೦. ಸ್ಥಳ : ಕರಿಮಲ್ಲೇಶ್ವರ ದೇವಾಲಯ

ಗ್ರಾಮ : ಛಬ್ಬಿ

ರಾಜವಂಶ : ಕಲ್ಯಾಣದ ಚಾಲುಕ್ಯ

ಕಾಲಮಾನ : ಕ್ರಿ.ಶ. ೧೧ನೇ ಶತಮಾನ

ಅಕ್ಷರಗಳು ತ್ರುಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ತಳವರ ಸಾಸಣಿಗಲ್ಲಿ ನಾಯಕನ ಬಗ್ಗೆ ಉಲ್ಲೇಖವಿದೆ.[೯೩]

೧೧. ಸ್ಥಳ : ವಲ್ಲಭೇಶ್ವರ ದೇವಾಲಯ ಆವರಣ

ಗ್ರಾಮ : ಮಂಟೂರು

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ಅಸ್ಪಷ್ಟವಾಗಿದೆ.[೯೪]

೧೨. ಸ್ಥಳ : ಸೋಮೇಶ್ವರ ದೇವಾಲಯ

ಗ್ರಾಮ : ಮಲ್ಲಿಗವಾಡ

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ಈ ಶಾಸನದ ಶಿವಲಿಂಗದ ಜಲಹರಿ ಪೀಠದ ಮೇಲಿದೆ. ಗುರುವಿನ ವರ್ಣನೆ ಬಗ್ಗೆ ತಿಳಿಸುತ್ತದೆ.[೯೫]

೧೩. ಸ್ಥಳ : ಸೋಮೇಶ್ವರ ದೇವಾಲಯ

ಗ್ರಾಮ : ಮಲ್ಲಿಗವಾಡ

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ಶಾಸನ ಅಕ್ಷರಗಳು ತ್ರುಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಚಿಕ್ಕಗೇರಿಯ ಪಟ್ಟೆಗಾರ ಕುಲದ ಸೋಮಗಾವುಂಡನ ಬಗ್ಗೆ ತಿಳಿಸುತ್ತದೆ.[೯೬]

೧೪. ಸ್ಥಳ : ಬನಶಂಕರಿಗುಡಿ ಗೋಡೆ (ಈಗ ಕಾಣುವುದಿಲ್ಲ)

ಗ್ರಾಮ : ಗಬ್ಬೂರು

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ಶಾಸನದ ಅಕ್ಷರಗಳು ತ್ರುಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ.[೯೭]

೧೫. ಸ್ಥಳ : ಹನುಮಂತ ದೇವಾಲಯದ ಪಾದ ಪೀಠ

ಗ್ರಾಮ : ಉಣಕಲ್

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ಪ್ರಸ್ತುತ ವಾಮದೇವ ಪಂಡಿತನಿಂದ ಉಗುರೇಶ್ವರದ ಕೇಶವ ದೇವರು ಸ್ಥಾಪನೆಯಾದ ಬಗ್ಗೆ ತಿಳಿಸುತ್ತದೆ.[೯೮]

೧೬. ಸ್ಥಳ : ಕಲ್ಮೇಶ್ವರ ದೇವಾಲಯ ಆವರಣ

ಗ್ರಾಮ : ಕೋಳಿವಾಡ

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

೧. ಇನ್ನೂರ್ವರ ಧರ್ಮಾಕೋಳಿವಾಡದ ಸೋವರಾಸಿ.

೨. ಮಾಡಿಸಿದ ಊರೊಡೆಯ ಧರ್ಮ ಎಂಬ ಉಲ್ಲೇಖವಿದೆ.[೯೯]

೧೭. ಸ್ಥಳ : ಜೈನಬಸದಿ ತೀರ್ಥಂಕರ ಪದಪೀಠ

ಗ್ರಾಮ : ಛಬ್ಬಿ

ಕಾಲಮಾನ : ಕ್ರಿ.ಶ. ೧೨ನೇ ಶತಮಾನ

ಅಸ್ಪಷ್ಟವಾಗಿದೆ. ಮೂರ್ತಿ ಸ್ಥಾಪನೆಯ ಬಗ್ಗೆ ಪ್ರಸ್ತಾಪಿಸುತ್ತದೆ.[೧೦೦]

೧೮. ಸ್ಥಳ : ಚಾವಡಿ ಬಳಿ

ಗ್ರಾಮ : ಬ್ಯಾಹಟ್ಟಿ

ರಾಜವಂಶ ಹೊಯ್ಸಳ

ಅರಸ ವೀರಬಲ್ಲಾಳ

ಕಾಲಮಾನ : ಕ್ರಿ.ಶ. ೧೨ ೧೩ನೇ ಶತಮಾನ

ಅಕ್ಷರಗಳು ತ್ರುಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಮಹಾಪ್ರಧಾನ ಸೇನಾಧಪಿತಿ ಬಾಹತ್ತರ ನಿಯೋಗಾಧಿಪತಿ ಕುಮಾರು ಪಂಡಿಕಯ್ಯನು ಬೆಳ್ವಲ ೩೦೦ ಆಳುತ್ತಿದ್ದ ಬಗ್ಗೆ ಉಲ್ಲೇಖಗಳಿವೆ.[೧೦೧]

೧೯. ಸ್ಥಳ : ಕಲ್ಮೇಶ್ವರ ಗುಡಿ ಆವರಣ

ಗ್ರಾಮ : ಕೋಳಿವಾಡ

ರಾಜವಂಶ ಕಲ್ಯಾಣ ಚಾಲುಕ್ಯ

ಕಾಲಮಾನ : ಕ್ರಿ.ಶ. ೧೨ ೧೩ನೇ ಶತಮಾನ

ಆರ್ಯ ತಾರಾಭಗವತಿಯ ಪ್ರಾರ್ಥನೆ[೧೦೨]

೨೦. ಸ್ಥಳ : ಮೊಕಾಶಿವಾಲರಾಯನ ಮನೆಗೋಡೆ

ಗ್ರಾಮ : ನೂಲ್ವಿ

ರಾಜವಂಶ ದೇವಗಿರಿ ಯಾದವರು

ಅರಸ ರಾಮಚಂದ್ರ

ಕಾಲಮಾನ : ಕ್ರಿ.ಶ. ೧೨೯೪

ತೃಟಿತಗೊಂಡಿದೆ. ಹಲಸಿಗೆ ೧೨೦೦೦ ಉಲ್ಲೇಖವಿದೆ.[೧೦೩]

೨೧. ಸ್ಥಳ : ಸರ್ವೆ ನಂ. ೫೭ ಹೊಲ

ಗ್ರಾಮ : ಅದರಗುಂಚಿ

ಕಾಲಮಾನ : ಕ್ರಿ.ಶ. ೧೨ ೧೩ನೇ ಶತಮಾನ

ಯಾಪನೀಯ ಸಂಘ ಕಾನೂರಂಗಕ್ಕೆ ಸಂಬಂಧಿಸಿದ ಉಚ್ಚಂಗಿ ಬಸವಿಯನ್ನು ಉಲ್ಲೇಖಿಸುತ್ತದೆ.[೧೦೪]

೨೨. ಸ್ಥಳ : ಹಿರೇಮಠದ ಹತ್ತಿರ

ಗ್ರಾಮ : ಬ್ಯಾಹಟ್ಟಿ

ಕಾಲಮಾನ : ಕ್ರಿ.ಶ. ೧೩ನೇ ಶತಮಾನ

ತೃಟಿತಗೊಂಡಿರುವುದರಿಂದ ಅಸ್ಪಷ್ಟವಾಗಿದೆ.[೧೦೫]

೨೩. ಸ್ಥಳ : ಊರಚಾವಡಿ

ಗ್ರಾಮ : ಶಿರಗುಪ್ಪಿ

ಕಾಲಮಾನ : ಕ್ರಿ.ಶ. ೧೩ನೇ ಶತಮಾನ

ದಂಡನಾಯಕ ನಾಗರಸನು ಬ್ರಹ್ಮಪುರಿಯನ್ನು ನಿರ್ಮಾಣ ಮಾಡಿದ್ದಾನೆ. ಇಲ್ಲಿ ಅಯ್ಯೊವೊಳೆಯ ಉಲ್ಲೇಖವಿದೆ.[೧೦೬]

೨೪. ಸ್ಥಳ : ಜೈನಬಸದಿ ತೀರ್ಥಂಕರ ವಿಗ್ರಹ ಪಾದಪೀಠ

ಗ್ರಾಮ : ಹಳೇಹುಬ್ಬಳ್ಳಿ

ರಾಜವಂಶ ಹೊಯ್ಸಳ

ಅರಸ ವೀರಬಲ್ಲಾಳ

ಕಾಲಮಾನ : ಕ್ರಿ.ಶ. ೧೩ನೇ ಶತಮಾನ

ಯಾಪನೀಯ ಸಂಘ ಕಾಣೂರ ಗಣದ ಉಲ್ಲೇಖವಿದೆ.[೧೦೭]

೨೫. ಸ್ಥಳ : ಕೆರೆಯ ಹತ್ತಿರ

ಗ್ರಾಮ : ಭೈರಿದೇವರಕೊಪ್ಪ

ಕಾಲಮಾನ : ಕ್ರಿ.ಶ. ೧೪೩೮

ತೃಟಿತಗೊಂಡಿದೆ.[೧೦೮]

೨೬. ಸ್ಥಳ : ಚಾವಡಿ ಹತ್ತಿರ

ಗ್ರಾಮ : ಉಣಕಲ್ಲ

ಕಾಲಮಾನ : ಕ್ರಿ.ಶ. ೧೪೫೮

ಶಾಸನ ತ್ರುಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ.[೧೦೯]

೨೭. ಸ್ಥಳ : ಕಾಳಮ್ಮ ದೇವಾಲಯ

ಗ್ರಾಮ : ಛಬ್ಬಿ

ಕಾಲಮಾನ : ಕ್ರಿ.ಶ. ೧೫ನೇ ಶತಮಾನ

ತೃಟಿತಗೊಂಡಿದೆ.[೧೧೦]

೨೮. ಸ್ಥಳ : ಮಲ್ಲಿಪಾಟೀಲರ ಮನೆಹತ್ತಿರ

ಗ್ರಾಮ : ಸುಳ್ಳ

ಕಾಲಮಾನ : ಕ್ರಿ.ಶ.೧೫೮೯

ತಿಮ್ಮಪ್ಪನಾಯಕ ಮತ್ತು ಅರವಟ್ಟಿಗೆಯ ಉಲ್ಲೇಖವಿದೆ.[೧೧೧]

೨೯. ಸ್ಥಳ : ಸ.ನಂ. ೧೩೪ರ ಹೊಲದಲ್ಲಿ

ಗ್ರಾಮ : ಶರೇವಾಡ

ಕಾಲಮಾನ : ಕ್ರಿ.ಶ. ೧೫೩೯

ಇದೊಂದು ವಾಮನ ಮುದ್ರೆ ಕಲ್ಲಾಗಿದೆ. ಕೇವಲ ಮಿತಿಯ ಉಲ್ಲೇಖವಿದೆ.[೧೧೨]

೩೦. ಸ್ಥಳ : ಸ.ನಂ. ೪ ರ ಹೊಲ

ಗ್ರಾಮ : ಕಟ್ನೂರು

ಕಾಲಮಾನ : ೧೬ನೇ ಶತಮಾನ

ಬುಡರಸಿಂಗಿಯ ಹನುಮಂತ ದೇವರ ಹೊಲದ ಉಲ್ಲೇಖವಿದೆ. [೧೧೩]

೩೧. ಸ್ಥಳ : ಹನುಮಂತ ದೇವರ ಗುಡಿ

ಗ್ರಾಮ : ಪರಸಾಪುರ

ಕಾಲಮಾನ : ಕ್ರಿ.ಶ. ೧೬ನೇ ಶತಮಾನ

ಶಾಸನ ತ್ರುಟಿತಗೊಂಡಿದೆ.[೧೧೪]

೩೨. ಸ್ಥಳ : ಶಂಖದ ಚನ್ನಪ್ಪ ಮನೆ ಹಿತ್ತಲು ವೀರಭದ್ರ ವಿಗ್ರಹ ಪೀಠ

ಗ್ರಾಮ : ಛಬ್ಬಿ

ಕಾಲಮಾನ : ಕ್ರಿ.ಶ. ೧೬ನೇ ಶತಮಾನ

ಅಸ್ಪಷ್ಟಗೊಂಡಿದೆ.[೧೧೫]

೩೩. ಸ್ಥಳ : ಛಬ್ಬಿಯವರ ಹೊಲ

ಗ್ರಾಮ : ಗಬ್ಬೂರು

ಕಾಲಮಾನ : ಕ್ರಿ.ಶ. ೧೬ನೇ ಶತಮಾನ

ಇದು ವಾಮನ ಮುದ್ರೆ ಕಲ್ಲಾಗಿದೆ. ಶ್ರೀ ತಿಮ್ಮಸಮುದ್ರ ಎಂಬ ಉಲ್ಲೇಖವಿದೆ. [೧೧೬]

೩೪. ಸ್ಥಳ : ಹುಡೇದ ಹನುಮಂತ ದೇವಾಲಯ ತೊಲೆ

ಗ್ರಾಮ : ಶಿರಗುಪ್ಪಿ

ರಾಜವಂಶ ವಿಜಯನಗರ

ಅರಸ ಕೃಷ್ಣದೇವರಾಯ

ಕಾಲಮಾನ : ಕ್ರಿ.ಶ. ೧೬ನೇ ಶತಮಾನ

ಈ ಶಾಸನವನ್ನು ದೇವಾಲಯದ ತೊಲೆಯಲ್ಲಿ ಕೆತ್ತಲಾಗಿದೆ. ಬಾಗಿಲ, ತಿಮ್ಮಪ್ಪ ನಾಯಕನ ಅಧಿಕಾರಿ ತಿರುಮಲಪ್ಪನ ಪುಣ್ಯಾರ್ಥವಾಗಿ ಅಳಿಯ ಐರಾವೇಳನು ದೇವಾಲಯ ಕಟ್ಟಿಸಿದ ಬಗ್ಗೆ ಉಲ್ಲೇಖಿಸುತ್ತದೆ. [೧೧೭]

೩೫. ಸ್ಥಳ : ಕಛೇರಿಯ ಆವರಣ

ಗ್ರಾಮ : ಹುಬ್ಬಳ್ಳಿ

ಕಾಲಮಾನ : ಕ್ರಿ.ಶ. ೧೬೪೪

ಶಾಸನದ ಅಕ್ಷರಗಳು ತ್ರುಟಿತಗೊಂಡಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. [೧೧೮]

೩೬. ಸ್ಥಳ : ಪ್ಯಾಟಿಯವರ ಬಾವಿ

ಗ್ರಾಮ : ಹಳೇಹುಬ್ಬಳ್ಳಿ

ರಾಜವಂಶ ಕಲ್ಯಾಣಿ ಚಾಲುಕ್ಯ

ಅಕ್ಷರಗಳು ಸವೆದಿರುವ ಕಾರಣ ವಿಷಯ ಅಸ್ಪಷ್ಟವಾಗಿವೆ. ಉಪಾದ್ಯಾಯನೊಬ್ಬನ ಉಲ್ಲೇಖವಿದೆ.[೧೧೯]

೩೭. ಸ್ಥಳ : ಕೊರಿಯವರ ಬಾವಿಯಲ್ಲಿ

ಗ್ರಾಮ : ಮರಿಯನ ತಿಮ್ಮಸಾಗರ

ಕಾಲಮಾನ : ಕ್ರಿ.ಶ. ೧೭೨೯

ಸತ್ಯಪೂರ್ಣ ತೀರ್ಥ ಗುರುವಿಗೆ ಶರಣು ಎಂಬ ಉಲ್ಲೇಖವಿದೆ. [೧೨೦]

೩೮. ಸ್ಥಳ : ಕಛೇರಿ ಆವರಣ

ಗ್ರಾಮ : ಹುಬ್ಬಳ್ಳಿ

ಕಾಲಮಾನ : ಕ್ರಿ.ಶ. ೧೮ನೇ ಶತಮಾನ

ಶಿಷ್ಯರಂಗು ಭಟ್ಟನ ಸರ್ವಮಾನ್ಯ ಹೊಲ ಎಂದು ದಾಖಲಿಸಿದೆ. [೧೨೧]

೩೯. ಸ್ಥಳ : ಗೋರಿಯ ಮೇಲೆ

ಗ್ರಾಮ : ಅಹೋಬಳಿಪುರ

ಕಾಲಮಾನ : ಕ್ರಿ.ಶ. ೧೮೧೮

ಇಂಗ್ಲೀಷ್ ಭಾಷೆಯಲ್ಲಿದೆ. ಹುಬ್ಬಳ್ಳಿಯಲ್ಲಿ ಹರದೇವ ಕಾಲರಾ ಬೇನೆಯಿಂದ ಜಾರ್ಜ್‌ಬಾಯಿಡ್ ಕಲರನು ಮರಣ ಹೊಂದಿದ ಎಂದಿದೆ.[೧೨೨]

೪೦. ಸ್ಥಳ : ಗೋರಿಯ ಮೇಲೆ

ಗ್ರಾಮ : ಅಹೋಬಳಿಪುರ

ಕಾಲಮಾನ : ಕ್ರಿ.ಶ. ೧೮೧೮

ಇಂಗ್ಲೀಷ್ ಭಾಷೆಯಲ್ಲಿದೆ. ಸನ್‌ಕಮೀಷನ್ ಅಫೀಸರನ ಮರಣದ ಬಗ್ಗೆ ತಿಳಿಸುತ್ತದೆ.[೧೨೩]

೪೧. ಸ್ಥಳ : ಜೈನಬಸದಿ ಜಾಗಟೆ

ಗ್ರಾಮ : ಹಳೇಹುಬ್ಬಳ್ಳಿ

ಕಾಲಮಾನ : ಕ್ರಿ.ಶ. ೧೮೬೩

ಹಳೇಹುಬ್ಬಳ್ಳಿಯ ಅನಂತನಾಥ ಬಸದಿಗೆ ಹನ್ನೊಂದು ನೂರು ವರ್ಷಗಳಷ್ಟು ಹಿಂದಿನ ಜಾಗಟೆಯನ್ನು ಮುಂದು ಹೊಸದಾಗಿ ಜಾಗಟೆ ಮಾಡಿದ ಬಗ್ಗೆ ಉಲ್ಲೇಖವಿದೆ.[೧೨೪]

೪೨. ಸ್ಥಳ ಗೋರಿಯ ಮೇಲೆ

ಗ್ರಾಮ ಅಹೋಬಳಾಪುರ

ಕಾಲ ಕ್ರಿ.ಶ. ೧೮೧೮

ಇಂಗ್ಲೀಷ್ ಭಾಷೆಯಲ್ಲಿದೆ. ನಾನ್ ಕಮೀಶನರ್ ಮರಣದ ಬಗ್ಗಿ ತಿಳಿಸುತ್ತದೆ.[೧೨೫]

೪೩. ಸ್ಥಳ : ಸ.ನಂ. ೧೮ ರ ಹೊಲದಲ್ಲಿ

ಗ್ರಾಮ : ಮುರಾಹಳ್ಳಿ

ಕಾಲಮಾನ : ೨೦ನೇ ಶತಮಾನ

ಪೊಡವಿಡಿ ದೇವನ ಹೊಲದ ಬಗ್ಗೆ ಪ್ರಸ್ತಾಪಿಸಿದೆ.[೧೨೬]

೪೪. ಸ್ಥಳ : ಹೊಸಮಠ ಗೋರಿ

ಗ್ರಾಮ : ಮಜಿದಪುರ

ಕಾಲಮಾನ : ಆಧುನಿಕ

ಹೊಸಹುಬ್ಬಳ್ಳಿ ಮಜದಪುರದ ಮುನಿಯಪ್ಪ ಬಸಪ್ಪ ಶೆಟ್ಟರ ಸಮಾಧಿ ಎಂದಿದೆ.[೧೨೭]

೪೫. ಸ್ಥಳ : ಹೊಸಮಠ ಗೋರಿ

ಗ್ರಾಮ : ಮಜಿದಪುರ

ಕಾಲಮಾನ : ಆಧುನಿಕ

ಮಹಜಿದಪುರದ ಬಸಪ್ಪ ಕಾಡಪ್ಪ ಶೆಟ್ಟರ ಸಮಾಧಿ ಎಂದಿದೆ.[೧೨೮]

ಟಿಪ್ಪಣಿಗಳು

೧. ಎಂ.ಜಿ.ಮಂಜುನಾಥ ಜಿ.ಕೆ. ದೇವರಾಜಸ್ವಾಮಿ ಕನ್ನಡ ಲಿಪಿ ವಿಕಾಸ, ೨೦೦೪, ಪು.೧

೨. ಆರ್.ಶೇಷಶಾಸ್ತ್ರಿ ಕರ್ನಾಟಕದ ವೀರಗಲ್ಲುಗಳು, ೨೦೦೫, ಪು. ೬

೩. ASIE 1941-45 No_{41}

೪. ASIE 1941-42 No_{43}

೫. ಆರ್.ಎನ್. ಗುರವ ಅವರ ಸಂಗ್ರಹ

೬. ದ.ಕದಂಬಾಸ್ ಆಫ್ ಗೋವಾ, ನಂ.೨೧, ಪು. ೫೭೭

೭. ಆರ್.ಎನ್.ಗುರವ ಅವರ ಸಂಗ್ರಹ

೮. ASIE 1941-42 No_{29}

೯. ASIE 1952-53 No_{73}

೧೦. ASIE 1946-47 No_{245}

೧೧. ಆರ್.ಎನ್.ಗುರವ ಅವರ ಸಂಗ್ರಹ

೧೨. ASIE 1941-42 No_{11}

೧೩. ASIE 1941-42 No_{9}

೧೪ ASIE 1941-42 No_{8}

೧೫ ASIE 1952-53 No_{81}

೧೬ ASIE 1952-53 No_{80}

೧೭ ASIE 1952-53 No_{76}

೧೮ ASIE 1952-53 No_{33}

೧೯ ASIE 1941-42 No_{36}

೨೦ K.I. P. 467-74

೨೧. ದ ಕದಂಬಾಸ್ ಆಫ್ ಗೋವಾ, ಪು. ೫೭೮

೨೨. ಅದೇ ಪು.

೨೩. ಅದೇ ಪು.

೨೪. SII, Vo- XV 176

೨೫. SII, Vo- XV 187 p. 221-22

೨೬. EIXXXVI

೨೭. ASIE 1941-42 No_{24}

೨೮. ASIE 1941-42 No_{49}

೨೯. ASIE 1952-53 No_{80}

೩೦. ASIE 1952-53 No_{86}

೩೧. ASIE 1952-53 No_{80}

೩೨. KIV Vol V 123

೩೩. ASIE 1941-42 No_{13}

೩೪.ASIE 1952-53 No_{100}

೩೫. ASIE 1952-53 No_{101}

೩೬. ASIE 1941-42 No_{32}

೩೭. ASIE 1941-42 No_{25}

೩೮. ಕಲಬುರ್ಗಿ ಎಂ.ಎಂ. ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು ೧೯೮೦ ಪು. ೩೪

೩೯. ಅದೇ, ಪುಟ

೪೦. ಅದೇ, ಪು. ೯೯. ೧೦೦

೪೧. ಪರಮಶಿವಮೂರ್ತಿ ಡಿ.ವಿ. ಕನ್ನಡ ಶಾಸನಶಿಲ್ಪ ೧೯೯೯, ಪು. ೨೨

೪೨. ಶೇಷಶಾಸ್ತ್ರಿ ಆರ್. ಪೂರ್ವೋಕ್ತ ಪುಟ ೧೧

೪೩. ಅದೇ ಪು. ೧೮

೪೪. ಪಂಚಮುಖಿ ಆರ್.ಎಸ್. ಕರ್ನಾಟಕದ ಇತಿಹಾಸ ೧೯೬೭, ಪು. ೭೦. ೭೧

೪೫. ಶೇಷಶಾಸ್ತ್ರಿ ಆರ್. ಪೂರ್ವೋಕ್ತ ಪು. ೧೧

೪೬. ಚಿದಾನಂದಮೂರ್ತಿ ಎಂ. ಪೂರ್ವೋಕ್ತ ಪು. ೪. ೫

೪೭. ಆರ್. ಗೋಪಾಲ್ ಸಂ ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ೨೦೦೮, ಪು. ೨೮೯

೪೮. ಬಿ. ಜಯಮ್ಮ ಧಾರವಾಡ ಜಿಲ್ಲೆಯ ಪೂರ್ವೋಕ್ತ ಪು. ೧೨೦

೪೯. ಅದೇ ಪು. ೧೭೧

೫೦. ಅದೇ ಪು. ೧೭೧

೫೧. ಅದೇ, ಪು. ೧೭೩

೫೨. ಅದೇ, ಪು. ೧೭೩

೫೩. ಅದೇ, ಪು. ೧೮೯

೫೪. ಅದೇ ಪು. ೧೭೮

೫೫. ಅದೇ ಪು. ೧೭೯

೫೬. ಅದೇ ಪು. ೧೭೯

೫೭. ಅದೇ ಪು. ೧೮೨

೫೮. ASIE 1941-42 No_{28}

೫೯. ASIE 1941-42 No_{42}

೬೦. ASIE 1941-42 No_{27}

೬೧. ASIE 1946-47 No_{246}

೬೨. ASIE 1952-53 No_{88}

೬೩. ASIE 1942-43 No_{50}

೬೪. ASIE 1941-42 No_{10}

೬೫. ASIE 1952-53 No_{74}

೬೬. ASIE 1952-53 No_{75}

೬೭ ASIE 1952-53 No_{245}

೬೮. ASIE 1941-42 No_{15}

೬೯. ASIE 1941-42 No_{59}

೭೦. ASIE 1941-42 No_{36}

೭೧. ASIE 1941-42 No_{9}

೭೨. ASIE 1941-42 No_{1}

೭೩. ASIE 1941-42 No_{17}

೭೪. ಶೇಷಶಾಸ್ತ್ರಿ ಆರ್. ಪೂರ್ವೋಕ್ತ ಪು. ೨೯

೭೫. ಕೆ.ಶಿವಲೀಲಾ ಲೋಕೇಶ್, ಕಮಲಾಪುರ ಒಂದು ಸಾಂಸ್ಕೃತಿಕ ಅಧ್ಯಯನ ಶಾಸನಶಾಸ್ತ್ರಿ ವಿಭಾಗ ಕ.ವಿ.ವಿ. ಹಂಪಿ ೨೦೦೮ (ಅಪ್ರಕಟಿತ ಪಿಎಚ್.ಡಿಪ್ರಬಂಧ) ಪು. ೧೮೨

೭೬. ಶೇಷಶಾಸ್ತ್ರಿ ಆರ್. ಪೂರ್ವೋಕ್ತ ಪು. ೩೦

೭೭. ಬಿ. ಜಯಮ್ಮ ಪೂರ್ವೋಕ್ತ ಪು. ೧೮೦

೭೮. ಅದೇ ಪು. ೧೮೨

೭೯. ಅದೇ ಪು. ೧೮೪

೮೦. ಮಿರ್ಜ ಅಣ್ಣಾರಾಯ, ಪೂರ್ವೋಕ್ತ ಪು. ೫೧೭

೮೧. ಕಲಬುರ್ಗಿ ಎಂ.ಎಂ., ಪೂರ್ವೋಕ್ತ ಪು. ೧೦

೮೨. ಪರಮಶಿವಮೂರ್ತಿ ಡಿ.ವಿ., ಪೂರ್ವೋಕ್ತ ಪು. ೧೧೮

೮೩. ಬಿ.ಜಯಮ್ಮ, ಪೂರ್ವೋಕ್ತ ಪು. ೧೮೬

೮೪. ASIE 1933-34 No_{32}

೮೫. ASIE 1941-42 No_{16}

೮೬. ASIE 1952-53 No_{97}

೮೭. SII Vol XVIII,. 318 p. 420-21

೮೮. KIV p. 5

೮೯. ASIE 1941-42 No_{36}

೯೦. ASIE 1952-53 No_{84}

೯೧. ASIE 1952-53 No_{82}

೯೨. ASIE 1952-53 No_{71}

೯೨. ASIE 1941-42 No_{19}

೯೪. ASIE 1952-532 No_{45}

೯೫. ASIE 1952-53 No_{92}

೯೬. KIV Vo V 102, p. 305

೯೭. ASIE 1941-42 No_{29}

೯೮. ASIE 1941-42 No_{58}

೯೯. KIV v 91. p 289

೧೦೦. ASIE 1941-42 No_{21}

೧೦೧. ASIE 1952-53 No_{72}

೧೦೨. KIV. Vol 107, JIH XXXII-p 88

೧೦೩. ASIE 1941-42 No_{49}

೧೦೪. ASIE 1941-42 No_{2}

೧೦೫. ASIE 1952-53 No_{72}

೧೦೬. SII vol XVII 394 p. 469

೧೦೭. ASIE 1941-42 No_{34}

୧୦୮. ASIE 1941-42 No_{12}

୧୦୯ ASIE 1941-42 No_{57}

୧୧୦. ASIE 1941-42 No_{23}

୧୧୧. ASIE 1952-53 No_{99}

୧୧୨. ASIE 1941-42 No_{56}

୧୧୩. ASIE 1941-42 No_{43}

୧୧୪. ASIE 1941-42 No_{55}

୧୧୫. ASIE $1941\text{-}42_{22}$

୧୧୬. ASIE 1941-42 No_{30}

୧୧୭. ASIE 1952-53 No_{72}

୧୧୮. ASIE 1941-42 No_{38}

୧୧୯. ASIE 1941-42 No_{31}

୧୨୦. ASIE 1941-42 No_{47}

୧୨୧. ASIE 1941-42 No_{36}

୧୨୨. ASIE 1941-42 No_{4}

୧୨୩. ASIE 1941-42 No_{5}

୧୨୪. ASIE 1941-42 No_{6}

୧୨୫. ASIE 1941-42 No_{35}

୧୨୬. ASIE 1941-42 No_{84}

୧୨୭. ASIE 1941-42 No_{45}

୧୨୮. ASIE 1941-42 No_{46}

ಅಧ್ಯಾಯ ೪

ದೇವಾಲಯಗಳು

ಅಧ್ಯಾಯ ೪

ದೇವಾಲಯಗಳು

೪.೧. ಪೀಠಿಕೆ

ಭಾರತೀಯ ಇತಿಹಾಸದಲ್ಲಿ ದೇವರ ಕಲ್ಪನೆ ದೇವಾಲಯಗಳ ಉಗಮ, ಬೆಳವಣಿಗೆ ಮುಂತಾದ ಹಲವು ಸಂಗತಿಗಳನ್ನು ತಿಳಿದುಕೊಂಡರೆ ಒಳಿತು. ಮಾನವನು ಪ್ರಕೃತಿಯ ಒಂದು ಭಾಗವಾಗಿ ಅಲೆಮಾರಿಯಾಗಿ ಜೀವನ ಸಾಗಿಸುತ್ತಿದ್ದನು. ಇದರ ಜೊತೆಗೆ ಅವನಲ್ಲಿ ಪ್ರಕೃತಿಯ ಬಗ್ಗೆ ಭಯ ಮತ್ತು ಆಶ್ಚರ್ಯವುಂಟಾಯಿತು. ಮಳೆ, ಗುಡುಗು, ಸಿಡಿಲು, ಹುಟ್ಟು, ಸಾವುಗಳು ನಿಸರ್ಗದ ನಿಯಮಗಳೆಂದು ಅರಿಯದೆ ಭೀತಿಗೊಂಡನು. ಹಾಗಾಗಿ ನಿಸರ್ಗದಲ್ಲಿ ಏನೋ ಶಕ್ತಿ ಇದೆ. ಎಂದು ನಂಬಿದನು.[೧] ಈ ಶಕ್ತಿಯ ರಹಸ್ಯ ತಿಳಿಯಲು ಪೂಜೆಯನ್ನು ಮಾಡಲು ಪ್ರಾರಂಭಿಸಿದನು. ಅದಕ್ಕಾಗಿ ಒಂದು ಚಿತ್ರವನ್ನು ರೂಪಿಸಿಕೊಂಡು ನಂತರ ಅದಕ್ಕೆ ಆಭರಣಗಳನ್ನು ತೊಡಿಸುವ ವ್ಯವಸ್ಥೆ ಮಾಡದನು. ತರುವಾಯ ಚಿತ್ರದ ಸುತ್ತಲು ಮಂಡಲವನ್ನು ಹಾಕಿ ಅದು ಪವಿತ್ರವೆಂದು ಭಾವಿಸಿದನು. ಕಾಲಾನಂತರದಲ್ಲಿ ಚಿತ್ರಗಳಿಗೆ ಬದಲಾಗಿ ಪ್ರತ್ಯೇಕವಾಗಿ ಪ್ರತಿಮೆಯನ್ನು ಮಾಡಿಕೊಂಡು ಅವುಗಳ ಸುತ್ತಲೂ ರಕ್ಷಣೆಗಾಗಿ ಗೋಡೆ ನಿರ್ಮಿಸಿದನು. ಈ ರೀತಿ ದೇವಾಲಯದ ಉಗಮ ಪ್ರಾರಂಭವಾಯಿತು.

ಕ್ರಿ.ಪೂ. ೬ನೇ ಶತಮಾನದಲ್ಲಿ ಬೌದ್ಧಧರ್ಮ ಉದಯಗೊಂಡಿತೆಂಬ ಪ್ರತೀತಿಇದೆ. ಇದರ ಪ್ರಭಾವಕ್ಕೆ ಒಳಗಾಗಿ ಮೌರ್ಯರು ಗುಹಾಲಯ ಸ್ತೂಪಗಳನ್ನು ರಚಿಸಿದರು ಇದಕ್ಕೆ ಪ್ರೇರಣೆಯೆಂದರೆ ನವಶಿಲಾಯುಗದ ಮಾನವರು ನಿರ್ಮಿಸಿಕೊಂಡಿದ್ದ ಮನೆಗಳು, ಗುಡಿಸಲುಗಳು ಮತ್ತು ಬೃಹತ್ ಶಿಲಾಯುಗದ ಕಾಲದಲ್ಲಿ ಕಲ್ಲಿನ ಚಪ್ಪಡಿಗಳನ್ನು ಅಥವಾ ಗುಂಡು ಕಲ್ಲುಗಳನ್ನು ಬಳಸಿಕೊಂಡು ಜೋಡಿಸಿ ಮೇಲೆ ಒಂದು ಕಲ್ಲನ್ನು ಹಾಕಿಸಿದಂತಹ ಸಮಾಧಿ ಕಟ್ಟಡಗಳು ಕಂಡುಬಂದಿವೆ.[೨] ಇವುಗಳು ಬೌದ್ಧವಾಸ್ತು ಶಿಲ್ಪಕ್ಕೆ ಪ್ರೇರಣೆ ನೀಡಿವೆ ಎಂದು ಹೇಳಬಹುದು.

ಬೌದ್ಧ ವಾಸ್ತು ಶಿಲ್ಪವು ಬೆಳವಣಿಗೆಗೊಂಡು ಇದರ ಪ್ರೇರಣೆಯಿಂದ ದೇವಾಲಯಗಳು ರಚಿತಗೊಂಡವು. ಪ್ರಾರಂಭದಲ್ಲಿ ಬೃಹತ್ ಶಿಲಾಯುಗದ ಪಾಂಡುಕುಳಿ ವಿನ್ಯಾಸದಂತೆ ಮೂರು ಚಪ್ಪಡಿಕಲ್ಲುಗಳನ್ನು ಪೂರ್ವಾಭಿಮುಖವಾಗಿ ಖಾಲಿ ಇರುವಂತೆ ನೆಟ್ಟು ಅದರ ಮೇಲೆ ಹಾಸುಬಂಡೆಯನ್ನು ಹೊದಿಸುತ್ತಿದ್ದರು. ಮತ್ತು ಒಳಗಡೆ ಶಿವಲಿಂಗವನ್ನು ಇಟ್ಟು ಪೂಜಿಸುತ್ತಿದ್ದರೆಂದು ತಿಳಿದುಬರುತ್ತದೆ.[೩] ನಂತರ ಧಾರ್ಮಿಕ ಪದ್ಧತಿಗಳು ಬೆಳವಣಿಗೆಯಾಗಿ ದೇವರಿಗೆ ಪ್ರತ್ಯೇಕವಾದ ಆಲಯವನ್ನು ಕಟ್ಟುವ ಆಲೋಚನೆ ಬೆಳೆದು ಬಾದಾಮಿ,ಚಾಲುಕ್ಯರಕಾಲದಲ್ಲಿ ದೇವಾಲಯ ಪ್ರಯೋಗವಾಗಿ ನಂತರ ಕಾಲದಲ್ಲಿ ದೇವಾಲಯ ಲಕ್ಷಣಗಳು ಬದಲಾವಣೆಗೊಂಡಿತು.

ದೇವಾಲಯಗಳು ಮಾನವನ ಬದುಕಿನಲ್ಲಿ ಮಹತ್ತರ ಪಾತ್ರವಹಿಸಿವೆ. ಒಂದು ದೇವಾಲಯ ಎಂಬುದು ಸಾಮೂಹಿಕ ಪೂಜೆ ಪ್ರಾರ್ಥನೆಗಳನ್ನು ಸಲ್ಲಿಸಲು ಅನುಕೂಲವಿರುವ ಒಂದು ತಾಣ[೪] ದೇವಾಲಯ ಎಂದರೆ ದೇವರ ಆಲಯ ಎಂದರ್ಥ ಆಲಯ ಎಂದರೆ ಕಟ್ಟಡ ದೇವರು ಇರತಕ್ಕ ಸ್ಥಾನ ಅಥವಾ ಧಾರ್ಮಿಕ ಶ್ರದ್ಧೆ ಮೂಡುವ ಸ್ಥಳ.[೫]

ಪ್ರಸ್ತುತ ಈ ಅಧ್ಯಯನ ಹುಬ್ಬಳ್ಳಿ ತಾಲೂಕಿಗೆ ಸೀಮಿತವಾಗಿರುವುದರಿಂದ ಹುಬ್ಬಳ್ಳಿ ತಾಲೂಕಿನಲ್ಲಿ ಒಳಪಡುವ ದೇವಾಲಯಗಳ ವಾಸ್ತುವನ್ನು ಈ ಕೆಳಕಂಡಂತೆ ದಾಖಲಿಸಲಾಗಿದೆ. ಪ್ರಸ್ತುತ ಇಲ್ಲಿರುವ ದೇವಾಲಯಗಳು ಶೈವ, ವೈಷ್ಣವ, ಜೈನ, ಬೌದ್ಧ, ಪರಂಪರೆಗಳಿಗೆ ಸಂಬಂಧಿಸಿದವುಗಳಾಗಿದ್ದು ಇವುಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

೪.೨. ಶೈವಧರ್ಮ :

ಶೈವಧರ್ಮದ ಪ್ರಾಚೀನತೆಯನ್ನು ಸಿಂಧೂನಾಗರಿಕತೆಯ ಹರಪ್ಪ ಮಹೆಂಜೋದಾರೋ ಕಾಲಿಬಂಗಾನ್ ಮೊದಲಾದ ನೆಲೆಗಳಲ್ಲಿ ದೊರೆತ ಶಿವಲಿಂಗದಂತಹ ಕಾಣುವ ಕುರುಹುಗಳು ಉದಾ: ಪಶುಪತಿ ಮುದ್ರೆಗಳು. ಈ ಧರ್ಮದ ಧಾರ್ಮಿಕ ನಿರ್ಮಾಣಗಳು ಶಾತವಾಹನ, ಚುಟು ಇಕ್ಷಾಕು, ಮನೆತನಗಳ ಆಳ್ವಿಕೆ ಕಾಲಾವಧಿಯಿಂದೀಚೆಗೆ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಕನ್ನಡ ನಾಡಿನಲ್ಲಿ ನರಗುಂದ ತಾಲೂಕಿನ ವಾಸವ ಮತ್ತು ಶಿಕಾರಿಪುರ ತಾಲೂಕಿನ ಮಳವಳ್ಳಿಯಲ್ಲಿ ಕ್ರಿ.ಶ. ೩ನೇ ಶತಮಾನದ ಶಾಸನೋಕ್ತ ಶಿವದೇವಲಾಯಗಳ ಉಲ್ಲೆಖಗಳೇ ಅತ್ಯಂತ ಪ್ರಾಚೀನವಾಗಿವೆ.[೬] ನಂತರ ಕಾಲಘಟ್ಟದಲ್ಲಿ ಬಾದಾಮಿ ಚಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ವಿಜಯನಗರದ ಅರಸರು ಈ ಎಲ್ಲಾ ಮನೆತನಗಳ ಅರಸರು ಮಹಾಮಂಡಳೇಶ್ವರರು ಮಹಾಸಾಮಂತರುಗಳ ಆಶ್ರಯ ಪ್ರೋತ್ಸಾಹದಿಂದ ಈ ಧರ್ಮದ ದೇವಾಲಯಗಳ ನಿರ್ಮಾಣ ಬೆಳೆದು ಬಂದಿವೆ. ಪ್ರಸ್ತುತ ಹುಬ್ಬಳ್ಳಿ ತಾಲೂಕಿನ ಶೈವ ದೇವಾಲಯಗಳ ದಾಖಲಾತಿ ಇಲ್ಲಿದೆ.

೧. ಊರು : ಅದರಗುಂಚಿ ಸ್ಥಳ : ಊರಮಧ್ಯೆ

ಸ್ಮಾರಕ : ದೊಡ್ಡೇಶ್ವರ ದೇವಾಲಯ ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ೯ ಕಿ.ಮೀ. ದೂರದಲ್ಲಿರುವ ಈ ದೊಡ್ಡೇಶ್ವರ ದೇವಾಲಯದ ಒಳಭಾಗ. ಗರ್ಭಗೃಹ ಅಂತರಾಳ ಮತ್ತು ಸಭಾಮಂಟಪಗಳನ್ನು ಒಳಗೊಂಡಿದ್ದು ಗರ್ಭಗೃಹದಲ್ಲಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ ವಹಾವೀರನ ಶಿಲ್ಪವಿದೆ ಇದನ್ನು ಈಗ ದೊಡ್ಡೇಶ್ವರ ಎಂದು ಸ್ಥಳೀಯರು ಕರೆಯುತ್ತಾರೆ. ದಕ್ಷಿಣ ಮತ್ತು ಪೂರ್ವಕ್ಕೆ ಪ್ರವೇಶದ್ವಾರವಿದೆ. ಗರ್ಭಗೃಹದ್ವಾರದ ಲಲಾಟಬಿಂಬದಲ್ಲಿ ನಿಂತಿರುವ ಗಣಪತಿ ಉಬ್ಬುಶಿಲ್ಪ ಇದೆ. ಅಂತರಾಳದ ದ್ವಾರವನ್ನು ಮರದಿಂದ ಮಾಡಿದ್ದು ಸೂಕ್ಷ್ಮ ಕೆತ್ತನೆಗಳ ಅಲಂಕರಣದಿಂದ ಕೂಡಿದೆ. ದೇವಾಲಯದ ಮೇಲೆ ಸಣ್ಣದಾದ ಗಾರೆ ಶಿಖರವನ್ನು ನಿರ್ಮಿಸಿ ಕಳಸವನ್ನು ಅಳವಡಿಸಲಾಗಿದೆ. ಸಭಾಮಂಟಪದಲ್ಲಿ ಮುಂಭಾಗದ ಅಂಕಣಗಳಿಗೆ ಕಮಾನುಗಳ ಅಲಂಕರಣ ಮಾಡಿರುವುದರಿಂದ ದೇವಾಲಯದ ಸೌಂದರ್ಯ ಹೆಚ್ಚಿದೆ.[೭]

೨. ಊರು : ಅದರಗುಂಚಿ ಸ್ಥಳ : ಊರಮಧ್ಯೆ

ಸ್ಮಾರಕ : ಕಲ್ಲೇಶ್ವರ ದೇವಾಲಯ ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ೯ ಕಿ.ಮೀ. ದೂರದಲ್ಲಿರುವ ಈ ದೇವಾಲಯ ಪೂರ್ವಾಭಿಮುಖವಾಗಿದ್ದು ಈ ದೇವಾಲಯವು ಸಾಲಾಗಿ ನಿರ್ಮಿಸಿರುವ ಮೂರು ಗರ್ಭಗೃಹ ಮತ್ತು ಸಭಾಮಂಟಪ ಒಳಗೊಂಡಿದೆ. ಮಧ್ಯದ ಗರ್ಭಗೃಹದಲ್ಲಿ ಪ್ರಾಚೀನ ಕಾಲದ ಲಿಂಗವಿದ್ದು ಅದೇರೀತಿ ಎಡ-ಬಲಗಳಲ್ಲಿರುವ ಗರ್ಭಗೃಹಗಳಲ್ಲಿ ಕ್ರಮವಾಗಿ ಗಣಪತಿ ಮತ್ತು ಪಾರ್ವತಿಯ ಇತ್ತೀಚಿನ ಶಿಲ್ಪಗಳಿವೆ. ಹಾಗೆಯೇ ಸಭಾಮಂಟಪದಲ್ಲಿ ಇತ್ತೀಚಿನ ನಂದಿಶಿಲ್ಪವನ್ನು ಕಾಣುತ್ತೇವೆ.[೮]

೩. ಊರು : ಇಂಗಳಹಳ್ಳಿ ಸ್ಥಳ : ಊರಮಧ್ಯೆ

ಸ್ಮಾರಕ : ಕಲ್ಲೇಶ್ವರ ದೇವಾಲಯ ಧರ್ಮ : ಶೈವ

ಕಾಲ : ಕ್ರಿ.ಶ.೧೧-೧೨ನೇ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದೇವಾಲಯದ ಒಳಭಾಗ ಗರ್ಭಗೃಹ ಮತ್ತು ಸಭಾಮಂಟಪದಿಂದ ಕೂಡಿದೆ. ಗರ್ಭಗೃಹದಲ್ಲಿ ಪ್ರಾಚೀನ ಲಿಂಗವಿದೆ. ಸಭಾಮಂಟಪದಲ್ಲಿ ನಂದಿ ಹಾಗೂ ಹೊರಭಾಗದಲ್ಲಿ ಭಗ್ನಗೊಂಡಿರುವ ಲಿಂಗ, ನಾಗ ಮತ್ತು ಸ್ತ್ರೀದೇವತೆಗಳ ಎರಡು ಶಿಲ್ಪಗಳಿವೆ. ಈ ಶಿಲ್ಪಗಳ ಎಡಕೈಯಲ್ಲಿ ಬಟ್ಟಲು ಹಿಡಿದಿದ್ದು, ಒಂದು ಶಿಲ್ಪದ ತೊಡೆಯ ಮೇಲೆ ಮಗುವಿದೆ. ಸ್ಥಳೀಯರು ಈ ಸ್ತ್ರೀ ದೇವತೆಗಳನ್ನು ಜಂಗಿಮಾಳಮ್ಮ ಎಂದು ಕರೆಯುತ್ತಾರೆ.

ಈ ಊರಿನ ಮೈಲಾರಲಿಂಗಪ್ಪನ ಗುಡಿ ಎದುರು ವೀರಗಲ್ಲು ಮತ್ತು ಬಟ್ಟಲು ಹಿಡಿದ ಸ್ತ್ರೀದೇವತೆಯ ಶಿಲ್ಪವಿದೆ. ಹಾಗೂ ಉಡಚಮ್ಮನ ಗುಡಿಯ ಪಕ್ಕದಲ್ಲಿ ಶಿಲಾಯುಗದ ಕೈಕೊಡಲಿಗಳು, ಲಿಂಗಗಳನ್ನು ಕಾಣುತ್ತೇವೆ.[೯]

೪. ಊರು : ಉಣಕಲ್ ಸ್ಥಳ : ಊರಮಧ್ಯೆ

ಸ್ಮಾರಕ : ಚಂದ್ರಮೌಳೇಶ್ವರ ದೇವಾಲಯ ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ವಾಯುವ್ಯಕ್ಕೆ ಸುಮಾರು ೪ ಕಿ.ಮೀ ದೂರದಲ್ಲಿ ಪೂರ್ವಾಭಿಮುಖವಾಗಿ ಈ ದೇವಾಲಯವಿದ್ದು ದೇವಾಲಯದ ಒಳಭಾಗ ಗರ್ಭಗೃಹ. ಅಂತರಾಳ, ನವರಂಗವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಲಿಂಗವಿದೆ. ನಾಲ್ಕು ದಿಕ್ಕುಗಳಿಂದಲೂ ಪ್ರವೇಶವಿದ್ದು ಸುತ್ತಲೂ ಪ್ರದಕ್ಷಿಣಾಪಥವನ್ನು ನಿರ್ಮಿಸಲಾಗಿದೆ. ಗರ್ಭಗೃಹದ ನಾಲ್ಕು ದ್ವಾರಗಳು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದೆ. ಅಂತರಾಳದ ದ್ವಾರವು ಜಾಲಂಧ್ರ, ಅರ್ಧಕಂಬ ಮತ್ತು ಸೂಕ್ಷ್ಮ ಕೆತ್ತನೆಗಳ ಅಲಂಕರಣದಿಂದ ಕೂಡಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಉಬ್ಬು ಶಿಲ್ಪ ಇದೆ. ಇದರ ಮೇಲಿರುವ ಮಕರತೋರಣದಲ್ಲಿ ಮೂರು ತೆರೆದ ಗೂಡುಗಳ ರಚನೆ ಇದೆ. ಅಂತರಾಳ ದ್ವಾರದ ಇಕ್ಕೆಲಗಳಲ್ಲಿ ದೇವಕೋಷ್ಠಗಳಿದ್ದು, ಮೇಲೆ ದ್ರಾವಿಡ ಶೈಲಿ ಶಿಖರದ ಅಲಂಕರಣವಿದೆ. ಅಂತರಾಳದ ಮುಂದಿನ ನವರಂಗಭಾಗವು ಬಿದ್ದು ಹೋಗಿದ್ದು

ಸಂಪೂರ್ಣವಾಗಿ ತೆರೆದ ಸ್ಥಿತಿಯಲ್ಲಿದೆ. ದೇವಾಲಯದ ಹೊರಬಿತ್ತಿ ಅಧಿಷ್ಠಾನವನ್ನು ಹೊಂದಿದ್ದು ಗೋಡೆಗಂಬ, ಅರ್ಧಕಂಬ ಮತ್ತು ದೇವಕೋಷ್ಠಗಳ ರಚನೆಗಳಿಂದ ಅಲಂಕೃತಗೊಂಡಿದೆ. ಹೊರಭಾಗದಲ್ಲಿ ನಂದಿ ಮತ್ತಿತರ ಅವಶೇಷಗಳು ಕಂಡುಬರುತ್ತವೆ.[೧೦]

೫. ಊರು : ಕಟ್ನೂರು | ಸ್ಥಳ : ಊರಮುಂಭಾಗ

ಸ್ಮಾರಕ : ಕಲ್ಲೇಶ್ವರ ದೇವಾಲಯ | ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ದಕ್ಷಿಣಕ್ಕೆ ಹತ್ತು ಕಿ.ಮೀ. ದೂರದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದೇವಾಲಯದ ಒಳಭಾಗ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಲಿಂಗ ಮತ್ತು ನಂದಿಯ ಶಿಲ್ಪವಿದೆ. ದ್ವಾರ ಸರಳ ರಚನೆಯಾಗಿದ್ದು ಲಲಾಟಬಿಂಬದಲ್ಲಿ ಗಣಪತಿಯ, ಉಬ್ಬುಶಿಲ್ಪ ಇದೆ. ಅಂತರಾಳದ ಮೇಲಿನ ಫಲಕದಲ್ಲಿ ಐದು ಸಣ್ಣಶಿಖರಗಳ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ದ್ವಾರದ ಎಡಭಾಗದಲ್ಲಿ ಮಾತ್ರ ಜಾಲಾಂಧರವನ್ನು ಕಾಣಬಹುದು. ಸಭಾಮಂಟಪದಲ್ಲಿ ದೇವಕೋಷ್ಠಗಳಿದ್ದು ಇವು ನಾಗರಶೈಲಿಯ ಶಿಖರಗಳಿಂದ ಅಲಂಕರಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಕಕ್ಷಾಸನದ ವಾಸ್ತು ಅವಶೇಷಗಳು ಚೆಲ್ಲಾಡಿವೆ. ಇದರಿಂದ ಸಭಾಮಂಟಪವು ಕಕ್ಷಾಸನವನ್ನೂ ಹೊಂದಿತ್ತೆಂದು ಗ್ರಹಿಸಬಹುದು. ನಡುವಿನ ನಾಲ್ಕು ಕಂಬಗಳು ಚೌಕ ಮತ್ತು ಬಹುಮುಖ ರಚನೆಗಳಿಂದ ಕೂಡಿದೆ. ಇದರ ಹೊರಮೈಯನ್ನು ಸಿಮೆಂಟಿನಿಂದ ಮುಚ್ಚಿ ಜೀರ್ಣೋದ್ಧಾರ ಮಾಡಿದ್ದಾರೆ. ದೇವಾಲಯದ ಹೊರಭಾಗದಲ್ಲಿ ವೀರಗಲ್ಲುಗಳು ಕಂಡುಬರುತ್ತವೆ.[೧೧]

೬. ಊರು : ಕಟ್ನೂರು | ಸ್ಥಳ : ಬುಡರಸಿಂಗಿರಸ್ತೆ

ಸ್ಮಾರಕ : ಕಲ್ಮೇಶ್ವರ ದೇವಾಲಯ | ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ದಕ್ಷಿಣಕ್ಕೆ ಹತ್ತು ಕಿ.ಮೀ ದೂರದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಸ್ಥಳೀಯವಾಗಿ ಹಾಳುಗುಡಿ ಎಂದು ಕರೆಯುತ್ತಿದ್ದರು. ಪ್ರಸ್ತುತ ಇದೇ ಸ್ಥಳದಲ್ಲಿ ಹೊಸದಾಗಿ ಕೊಠಡಿಯನ್ನು ನಿರ್ಮಿಸಲಾಗಿದೆ. ಇಲ್ಲಿ ಪ್ರಾಚೀನ ಲಿಂಗ, ಭಗ್ನ ನಂದಿ, ಮತ್ತಿತರ ಶಿಲ್ಪಾವಶೇಷಗಳಿದ್ದು ಮುಂಭಾಗದಲ್ಲಿ ಹಳೆಯ ದೇವಾಲಯದ ವಾಸ್ತು ಅವಶೇಷಗಳು ಚೆಲ್ಲಾಪಿಲ್ಲಿಯಾಗಿವೆ. ಇಲ್ಲಿನ ನಂದಿ ಕಂಬದ ಮೇಲೆ ಯಾದವ ರಾಮಚಂದ್ರನ ಕಾಲದ ಶಾಸನವಿದೆ ಅದರಲ್ಲಿ ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನನಿಗೆ ಬಿಟ್ಟ ದಾನದ ಉಲ್ಲೇಖಿಸಲಾಗಿದೆ.[೧೨]

೭. ಊರು : ಕಿರೇಸೂರು | ಸ್ಥಳ : ಕೆರೆದಂಡೆ

ಸ್ಮಾರಕ : ಕಲ್ಲೇಶ್ವರ ದೇವಾಲಯ | ಧರ್ಮ : ಶೈವ

ಕಾಲ : ಆಧುನಿಕ

ಹುಬ್ಬಳ್ಳಿಯಿಂದ ವಾಯುವ್ಯಕ್ಕೆ ೨೦ ಕಿ.ಮೀ. ದೂರದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಈ ದೇವಾಲಯದ ಒಳಭಾಗವು ಗರ್ಭಗೃಹ ಮತ್ತು ಸಭಾಮಂಟಪ

ಒಳಗೊಂಡಿದೆ. ಹಳೇಯ ದೇವಾಲಯಕ್ಕೆ ಸಂಬಂಧಿಸಿದ ಲಿಂಗಗಳು ಮತ್ತಿತರ ಶಿಲ್ಪಾವಶೇಷಗಳು ಹೊರಗೆ ಮರದ ಕೆಳಗಿವೆ. ಇಲ್ಲಿ ಪ್ರಾಚೀನ ದೇವಾಲಯವಿದ್ದು, ಅದು ಬಿದ್ದು ಹೋದನಂತರ ಈಗಿನ ದೇವಾಲಯವನ್ನು ನಿರ್ಮಿಸಿದ್ದಾರೆ. ಕ್ರಿ.ಶ. ೧೬೨೩ರ ಶಾಸನದಲ್ಲಿ ಈ ದೇವಾಲಯಕ್ಕೆ ಬಾಗಿಲನ್ನು ನಿರ್ಮಿಸಿದ ಬಗ್ಗೆ ಉಲ್ಲೇಖ ಇದೆ. ಇತ್ತೀಚೆಗೆ ಗರ್ಭಗೃಹದಲ್ಲಿ ಹಳೆಯ ಲಿಂಗದ ರುದ್ರಭಾಗದ ಸುತ್ತಲೂ ಸಿಮೆಂಟಿನ ಚೌಕಟ್ಟನ್ನು ರಚಿಸಿ ಕಲ್ಮೇಶ್ವರ ಲಿಂಗವೆಂದು ಪೂಜಿಸಲಾಗುತ್ತಿದೆ. ದೇವಾಲಯದ ಎದುರುಗಡೆ ಭಗ್ನಗೊಂಡಿರುವ ಲಿಂಗವಿದ್ದು ಇದರ ಪಕ್ಕದಲ್ಲಿ ಸ್ತ್ರೀಶಿಲ್ಪವಿದ್ದು ಇದನ್ನು ಪದ್ಮಾವತಿ ಎಂದು ಕರೆಯುತ್ತಾರೆ. ಈ ಶಿಲ್ಪ ಇತ್ತೀಚಿನದಾಗಿದೆ. ದೇವಾಲಯದ ಮುಂಭಾಗದಲ್ಲಿ ಅರುಗೋಸನಕಲ್ಲು ಮತ್ತು ಕುರಬರ ಓಣಿಯಲ್ಲಿ ಸುಂದರ ರಚನೆಯ ಗಜಲಕ್ಷ್ಮಿ ಶಿಲ್ಪವಿದ್ದು ಇದು ಮಕರ ತೋರಣ, ಕೀರ್ತಿಮುಖ ಮತ್ತು ಸೂಕ್ಷ್ಮ ಕೆತ್ತನೆಗಳ ಅಲಂಕರಣದಿಂದ ಕೂಡಿದ್ದು ಶಿಲ್ಪದ ಪೀಠದಲ್ಲಿ ನೃತ್ಯಗಾರ್ತಿಯರ ಮತ್ತು ಸಂಗೀತಗಾರರ ಉಬ್ಬುಶಿಲ್ಪ ಇದೆ.[೧೩]

೮. ಊರು : ಕುರಡಿಕೇರಿ — ಸ್ಥಳ : ಊರಮುಂಭಾಗ

ಸ್ಮಾರಕ : ಈಶ್ವರ ದೇವಾಲಯ — ಧರ್ಮ : ಶೈವ

ಕಾಲ : ಕ್ರಿ.ಶ. ೧೨ನೇ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದೇವಾಲಯದ ಒಳಭಾಗವು ಗರ್ಭಗೃಹ ಮತ್ತು ಸಭಾಮಂಟಪ ಒಳಗೊಂಡಿದೆ. ಗರ್ಭಗೃಹದಲ್ಲಿ ಪ್ರಾಚೀನ ಲಿಂಗ ಮತ್ತು ನಂದಿಯ ಶಿಲ್ಪಗಳಿವೆ. ದೇವಾಲಯ ಸ್ಥಳೀಯ ಶೈಲಿಯಲ್ಲಿದ್ದು ಸಂಪೂರ್ಣವಾಗಿ ಕಲ್ಲಿನಿಂದ ಕಟ್ಟಿಸಿದ್ದಾರೆ. ದೇವಾಲಯದ ದಕ್ಷಿಣ ಗೋಡೆಯಲ್ಲಿ ಶಾಸನವಿದ್ದು. ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನಿಗೆ ಸಂಬಂಧಿಸಿದ್ದು ಕ್ರಿ.ಶ. ೧೧೦೮ರ ಕಾಲಕ್ಕೆ ಸೇರಿದ್ದು, ದಂಡನಾಯಕ ಅನಂತಪಾಳದ ಸುಂಕಾಧಿಕಾರಿ ನಾರಣದೇವನು ಭೋಜಂಗೇಶ್ವರ ದೇವಾಲಯಕ್ಕೆ ಸುಂಕದಾನವನ್ನು ನೀಡಿದ ವಿಷಯ ತಿಳಿಸುತ್ತದೆ. ಈ ದೇವಾಲಯದ ಪ್ರಾಚೀನ ಹೆಸರು ಭೋಜಂಗೇಶ್ವರ ದೇವಾಲಯ ಎಂದೇ ಹೆಸರಿಸಲಾಗುತ್ತದೆ.[೧೪]

೯. ಊರು : ಕುರಡಿಕೇರಿ — ಸ್ಥಳ : ಕೆರೆದಂಡೆ

ಸ್ಮಾರಕ : ಶಂಕರ ದೇವಾಲಯ — ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದೇವಾಲಯ ನೆಲಸಮಗೊಂಡಿದ್ದು ಗರ್ಭಗೃಹವಿದ್ದಲ್ಲಿ ಲಿಂಗ ಮತ್ತಿತರ ಶಿಲ್ಪಾವಶೇಷಗಳಿವೆ. ಜನರ ಆರ್ಥಿಕ ಶಕ್ತಿ ಮತ್ತು ಸಂಬಂಧಗಳ ಕೊರತೆಗಳಿಂದಾಗಿ ದೇವಾಲಯ ನಿರ್ಮಾಣಗೊಂಡಿಲ್ಲ. ತೆರೆದ ಬಯಲಿನಲ್ಲಿ ಶಿಲ್ಪಾವಶೇಷಗಳು ಪಾಳು ಬಿದ್ದಿವೆ.

ಕ್ರಿ.ಶ. ೧೧೨೬ರಲ್ಲಿ ಗೋವೆ ಕದಂಬರ ಎರಡನೆಯ ಜಯಕೇಶಿ ಶಾಸನವು ಅವನ ಪಟ್ಟಮಹಿಷೆ ಮೈಳಲದೇವಿಯು ಕುಡಿಯೇಶ್ವರ ದೇವರಿಗೆ ಸುಂಕವನ್ನು ದಾನ ನೀಡಿದಳೆಂಬ ವಿಷಯ ತಿಳಿಸುತ್ತದೆ. ಹಾಗೆಯೇ ಈ ಊರಿನ ಸ್ಥಳನಾಮವು ಅಲ್ಲಿನ ದೇವಾಲಯ ಮತ್ತು ಕೆರೆಯ ಮೂಲಗಳಿಂದ ಹುಟ್ಟಿಕೊಂಡಂತೆ ಕಾಣುತ್ತದೆ.[೧೫]

೧೦.	ಊರು : ಕೋಳಿವಾಡ	ಸ್ಥಳ : ಕುರುಬರ ಓಣಿ

ಸ್ಮಾರಕ : ಕಲ್ಮೇಶ್ವರ ದೇವಾಲಯ	ಧರ್ಮ : ಶೈವ

ಕಾಲ : ಕ್ರಿ.ಶ. ೧೬-೧೭ನೇ ಶತಮಾನ

ಹುಬ್ಬಳ್ಳಿಯಿಂದ ಪೂರ್ವಕ್ಕೆ ೨೯ ಕಿ.ಮೀ ದೂರದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದೇವಾಲಯದ ಒಳಭಾಗವು ಗರ್ಭಗೃಹ ಮತ್ತು ಸಭಾಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಲಿಂಗವಿದ್ದು, ಸಭಾಮಂಟಪದಲ್ಲಿ ನಂದಿಶಿಲ್ಪಗಳು ಇವೆ. ಹೊರಭಾಗದಲ್ಲಿ ಭಗ್ನಗೊಂಡ ಪ್ರಾಚೀನ ಕಾಲದ ಲಿಂಗವಿದ್ದು ಅದರ ಬ್ರಹ್ಮಭಾಗದ ಮೇಲೆ ಸಂಸ್ಕೃತದ ಅಕ್ಷರಗಳಿದ್ದು ಅಲ್ಲಲ್ಲಿ ಹಾಳಾಗಿವೆ. ರುದ್ರಭಾಗ ಸವೆದು ಚೂಪಾಗಿ ಕಾಣುತ್ತದೆ. ಬಹುಶಃ ಇಲ್ಲಿನ ಪ್ರಾಚೀನ ದೇವಾಲಯ ಮತ್ತು ಶಿಲ್ಪಗಳು ಹಾಳಾದ ಮೇಲೆ ಈಗಿನ ದೇವಾಲಯವನ್ನು ನಿರ್ಮಿಸಿರಬೇಕು. ಈ ಊರಿನ ಮಹಾಮ್ಮಾಯಿ ದೇವಾಲಯದ ಗೋಡೆಯಲ್ಲಿ ಮಹಿಷಮರ್ಧಿನಿ ವೀರಗಲ್ಲು ಹಾಗೂ ಸಪ್ತಮಾತೃಕೆಯರ ಫಲಕ ಶಿಲ್ಪಗಳನ್ನು ನೋಡಬಹುದಾಗಿದೆ.[೨]

೧೧.	ಊರು : ಗಬ್ಬೂರು	ಸ್ಥಳ : ಊರಿನ ಮಧ್ಯಭಾಗ

ಸ್ಮಾರಕ : ಕಲ್ಮೇಶ್ವರ ದೇವಾಲಯ	ಧರ್ಮ : ಶೈವ

ಕಾಲ : ಆಧುನಿಕ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಪ್ರಾಚೀನ ದೇವಾಲಯವಿದ್ದ ಸ್ಥಳದಲ್ಲಿ ಇತ್ತೀಚೆಗೆ ಕೊಠಡಿಯೊಂದನ್ನು ನಿರ್ಮಿಸಿ ಹೊಸದಾಗಿ ಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ. ಹಳೆಯ ದೇವಾಲಯಕ್ಕೆ ಸಂಬಂಧಿಸಿದ ಲಿಂಗಗಳು ಕಮಲದ ಶಿಲ್ಪಫಲಕ ಮತ್ತಿತರ ಶಿಲ್ಪಾವಶೇಷಗಳು ಕಂಡುಬಂದಿದ್ದು. ಈ ದೇವಾಲಯ ಸ್ಥಳೀಯ ಶೈಲಿಯಲ್ಲಿರುವುದು ಕಂಡುಬರುತ್ತದೆ. ಸಮೀಪದ ಅಂಜನೇಯ ದೇವಾಲಯದ ಮುಂಭಾಗದಲ್ಲಿ ಸಪ್ತಮಾತ್ರಿಕೆಯರ ಶಿಲ್ಪ ಫಲಕ ಮತ್ತು ವೀರಗಲ್ಲುಗಳಿವೆ. ಈ ವೀರಗಲ್ಲುಗಳು ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದು ಗಬ್ಬೂರಿನ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಈ ಶಾಸನದಿಂದ ಗಬ್ಬೂರಿನ ಪ್ರಾಚೀನ ರೂಪ ಗೊಬ್ಬನೂರು ಎಂದು ತಿಳಿದುಬರುತ್ತದೆ.[೨]

೧೨.	ಊರು : ಗಬ್ಬೂರು	ಸ್ಥಳ : ಊರಿನ ಈಶಾನ್ಯಭಾಗ

ಸ್ಮಾರಕ : ಬಸವೇಶ್ವರ ದೇವಾಲಯ	ಧರ್ಮ : ಶೈವ

ಕಾಲ : ವಿಜಯನಗರೋತ್ತರ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದೇವಾಲಯದ ಒಳಭಾಗ ಗರ್ಭಗೃಹ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಲಿಂಗವಿದ್ದು ಒಳಚಾವಣಿ ಗುಮ್ಮಟಾಕಾರದಲ್ಲಿ ನಿರ್ಮಾಣ ಗೊಂಡಿರುವುದು ಗಮನಾರ್ಹ. ದ್ವಾರ ಸಣ್ಣದಾಗಿದ್ದು ದ್ವಾರಬಂಧದ ಮೇಲೆ ನಾಲ್ಕು ಸ್ತ್ರೀ ದೇವತೆಗಳ ಉಬ್ಬು ಶಿಲ್ಪಗಳಿವೆ. ಅವುಗಳ ಕೈಗಳಲ್ಲಿ ಖಡ್ಗ, ಬಟ್ಟಲು ಮತ್ತಿತರ ಆಯುಧಗಳನ್ನು ಹಿಡಿದಿವೆ. ಗರ್ಭಗೃಹದ ಮೇಲೆ ಗಾರೆಗಚ್ಚಿನಲ್ಲಿ ಮೆಟ್ಟಿಲಾಕಾರದ ಶಿಖರವನ್ನು ಕಟ್ಟಲಾಗಿದೆ. ಸಭಾಮಂಟಪದಲ್ಲಿ ನಂದಿಯನ್ನೇ ಆರಾಧಿಸುವುದರಿಂದ ಈ ದೇವಾಲಯವನ್ನು ಬಸವೇಶ್ವರ ಗುಡಿ ಎಂದು

ಕರೆಯುತ್ತಾರೆ. ಇದು ಮಾಳಿಗೆ ಶೈಲಿಯಲ್ಲಿದ್ದು, ಮರಮುಟ್ಟುಗಳಿಂದ ನಿರ್ಮಿಸಿರುವುದನ್ನು ಕಾಣುತ್ತೇವೆ. ದೇವಾಲಯದ ಹೊರಭಾಗದಲ್ಲಿ ಭಗ್ನಗೊಂಡ ಲಿಂಗ, ಪಾಣಿಪೀಠ, ಮೊದಲಾದ ಶಿಲ್ಪಾವಶೇಷಗಳು ಕಂಡುಬಂದಿದ್ದು, ಬೇವಿನಮರದ ಕೆಳಗೆ ಭೈರವಿ ಶಿಲ್ಪವಿದ್ದು ಇವನ್ನು ಸ್ಥಳೀಯರು ಬನಶಂಕರಿ ಎಂದು ಕರೆಯುತ್ತಾರೆ.[೧೮]

೧೩. ಊರು : ಛಬ್ಬಿ — ಸ್ಥಳ : ಕೆರೆ ಏರಿ

ಸ್ಮಾರಕ : ಕರೆಮಲ್ಲೇಶ್ವರ ದೇವಾಲಯ — ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಸುಮಾರು ಹದಿನಾರು ಕಿ.ಮೀ. ದೂರದಲ್ಲಿರುವ ಈ ದೇವಾಲಯ ಪೂರ್ವಾಭಿಮುಖವಾಗಿದ್ದು ದೇವಾಲಯದ ಒಳಭಾಗ ಗರ್ಭಗೃಹವನ್ನು ಮಾತ್ರ ಹೊಂದಿದೆ. ಗರ್ಭಗೃಹದಲ್ಲಿ ನಕ್ಷತ್ರಾಕಾರದ ಲಿಂಗವಿದ್ದು, ಸುತ್ತೂಲ ಬೃಂದಾವನ ಶೈಲಿಯ ಕೈಪಿಡಿಗೋಡೆಯ ಅಲಂಕರಣ ಇದೆ. ನಡುವೆ ಗುಮ್ಮಟಾಕಾರದ ಗಾರೆ ಶಿಖರವನ್ನು ಕಟ್ಟಿದ್ದಾರೆ. ನೋಡಲು ಮುಸ್ಲಿಂ ಸ್ಮಾರಕವನ್ನು ನೆನಪಿಸುತ್ತದೆ. ಶಿಖರದ ಮುಂಭಾಗದಲ್ಲಿ ಜಿನಮೂರ್ತಿಯ ಒರಟು ರಚನೆಯನ್ನು ಕಾಣಬಹುದು. ದೇವಾಲಯದ ಹೊರಭಾಗದಲ್ಲಿ ಭಗ್ನ ನಂದಿಶಿಲ್ಪಗಳು ಮತ್ತು ಭಗ್ನ ಭೈರವಿ ಶಿಲ್ಪ ಮತ್ತು ಈ ದೇವಾಲಯದ ಸಮೀಪ ಪ್ರಾಚೀನ ಜೈನ ಶಿಲ್ಪವನ್ನು ಗುರುತಿಸಲಾಗಿದೆ.[೧೯]

೧೪. ಊರು : ಛಬ್ಬಿ — ಸ್ಥಳ : ಊರಿನ ಉತ್ತರಭಾಗ

ಸ್ಮಾರಕ : ಬಸವೇಶ್ವರ ದೇವಾಲಯ — ಧರ್ಮ : ಶೈವ

ಕಾಲ : ಆಧುನಿಕ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಹದಿನಾರು ಕಿ.ಮೀ. ದೂರಲ್ಲಿರುವ ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ದೇವಾಲಯದ ಒಳಭಾಗವು ಗರ್ಭಗೃಹ ಮತ್ತು ಸಭಾಮಂಟಪಗಳಿಂದ ಕೂಡಿದ್ದು ಸ್ಥಳೀಯ ಶೈಲಿಯಲ್ಲಿ ರಚನೆಗೊಂಡಿದೆ. ಗರ್ಭಗೃಹದಲ್ಲಿ ಎತ್ತರವಾದ ನಂದಿಕಂಬವಿದ್ದು ತುದಿಯಲ್ಲಿ ನಂದಿಶಿಲ್ಪವುಂಟು ಇದರ ಮೇಲೆ ಹಾನಗಲ್ಲ ಕದಂಬರ ಕಾಮದೇವನ ಶಾಸನವಿದೆ. ಈ ಶಾಸನ ಶಿವಮುದ್ದುದೇವನ ಶಿಷ್ಯ ಹಾಗೂ ಕಾಲಡಿಯ ಧವಳೇಶ್ವರ ದೇವರ ಅರ್ಚಕನಾದ ರಾಜಗುರು ಲಕ್ಷ್ಮೀದೇವನಿಗೆ ಬಿಟ್ಟ ದಾನವನ್ನು ಉಲ್ಲೇಖಿಸುತ್ತದೆ. ಇದರಿಂದಾಗಿ ಗರ್ಭಗೃಹದಲ್ಲಿರುವ ನಂದಿಕಂಬ ಹಾನಗಲ್ಲು ಕದಂಬರ ಕಾಲದ್ದೆಂದು ಸ್ಪಷ್ಟವಾಗುತ್ತದೆ.[೨೦]

೧೫. ಊರು : ದೇವರಗುಡಿಹಾಳು — ಸ್ಥಳ : ಕೆರೆಮುಂಭಾಗ

ಸ್ಮಾರಕ : ಮಲ್ಲಿಕಾರ್ಜುನ ದೇವಾಲಯ — ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದೇವಾಲಯದ ಒಳಭಾಗ ಗರ್ಭಗೃಹ ಅರ್ಧಮಂಟಪ ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಲಿಂಗವಿದ್ದು ಬಾಗಿಲುದ್ವಾರ ಸಣ್ಣದಾಗಿದೆ. ಬಾಗಿಲು ವಾಡಗಳಲ್ಲಿ ಅರ್ಧಕಂಬಗಳ ಅಲಂಕರಣವನ್ನು ಕಾಣಬಹುದು. ದ್ವಾರಬಂಧದ ಲಲಾಟಬಿಂಬದಲ್ಲಿ

ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ಗರ್ಭಗೃಹ ಮತ್ತು ಅರ್ಧಮಂಟಪಗಳು ಜೀರ್ಣೋದ್ಧಾರಗೊಂಡಿದ್ದು ಒಳಭಿತ್ತಿಯನ್ನು ಟೈಲ್ಸ್‌ನಿಂದ ಇತ್ತೀಚೆಗೆ ಕಟ್ಟಲಾಗಿದೆ. ಸಭಾಮಂಟಪವನ್ನು ಚಚ್ಚೌಕರದ ಕಲ್ಲಿನ ಕಂಬಗಳನ್ನ ಮತ್ತು ತೊಲೆಗಳನ್ನು ಇತ್ತೀಚೆಗೆ ನಿರ್ಮಿಸಿರುವುದನ್ನು ಕಾಣುತ್ತೇವೆ. ಸಭಾಮಂಟಪವು ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿದ್ದು ಪೂರ್ವದಿಕ್ಕಿನ ಚಾವಣಿಯಲ್ಲಿ ನಾಗಬಂಧ ಶಿಲ್ಪವನ್ನು ಕಡೆಯಲಾಗಿದೆ. ಇದರ ಗೂಡುಗಳಲ್ಲಿ ಭಗ್ನಗೊಂಡಿರುವ ಕಾರ್ತೀಕೇಯ, ಗಣಪತಿ ಮತ್ತು ನಾಗಶಿಲ್ಪಗಳು ಪ್ರಾಚೀನ ಕಾಲದವುಗಳಾಗಿವೆ. ದೇವಾಲಯದ ಹೊರಭಾಗದಲ್ಲಿ ಅಧಿಷ್ಠಾನವು ಜಗತಿ ಪ್ರತಿ, ಉಪಾನ, ಕಂಠ, ಕುಮುದ, ಕಪೋತ ಭಾಗಗಳನ್ನು ಹೊಂದಿದ್ದು ಭಿತ್ತಿಯು ಜೀರ್ಣೋದ್ಧಾರಗೊಂಡಿರುವುದರಿಂದ ಸಪಾಟಾಗಿದೆ. ಈ ಊರಿನ ದಾರಿಯಲ್ಲಿರುವ ಸುಮಾರು ೧೭ನೇ ಶತಮಾನದ ಶಾಸನವೊಂದು ಘಂಟರಾವು ಎಂಬುವನು ಮಲ್ಲಿಕಾರ್ಜುನ ದೇವಾಲಯಕ್ಕೆ ಭೂಮಿಯನ್ನು ದಾನ ನೀಡಿದನೆಂದು ಉಲ್ಲೇಖಿಸುತ್ತದೆ.[೨೧]

೧೬. ಊರು : ನೂಲ್ವಿ ಸ್ಥಳ : ಊರಹೊರಗೆ
ಸ್ಮಾರಕ : ಆದಿಬಸವಣ್ಣ ದೇವಾಲಯ ಧರ್ಮ : ಶೈವ
ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಸುಮಾರು ಹತ್ತು ಕಿ.ಮೀ. ದೂರದಲ್ಲಿರುವ ನೂಲ್ವಿ ಗ್ರಾಮದ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು. ಈ ದೇವಾಲಯದ ಒಳಭಾಗದಲ್ಲಿ ಗರ್ಭಗೃಹವಿದ್ದು ಇದರಲ್ಲಿ ಪ್ರಾಚೀನ ಕಾಲದ ಲಿಂಗವಿದೆ. ಗರ್ಭಗೃಹ ಭಗ್ನಸ್ಥಿತಿಯಲ್ಲಿದ್ದು, ಹೊರಭಿತ್ತಿಬಿದ್ದಿದೆ. ಇದು ಲತಾಬಳ್ಳಿಗಳ ಅಲಂಕರಣವಿರುವ ಉಬ್ಬುಶಿಲ್ಪ ಫಲಕ ಮತ್ತು ಭಗ್ನನಂದಿಶಿಲ್ಪವನ್ನು ಕಾಣುತ್ತೇವೆ.[೨೨]

೧೭. ಊರು : ನೂಲ್ವಿ ಸ್ಥಳ : ಉಡುಚವ್ವನಗುಡಿ
ಸ್ಮಾರಕ : ಕಲ್ಮೇಶ್ವರ ದೇವಾಲಯ ಧರ್ಮ : ಶೈವ
ಕಾಲ : ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಹತ್ತು ಕಿ.ಮೀ ದೂರದಲ್ಲಿರುವ ಈದೇವಾಲಯವು ಪೂರ್ವಾಭಿಮುಖವಾಗಿದ್ದು ಈ ದೇವಾಲಯದ ಒಳಭಾಗ. ಗರ್ಭಗೃಹ ಮತ್ತು ಅಂತರಾಳಗಳನ್ನು ಒಳಗೊಂಡಿದ್ದು ಸದ್ಯ ಭಗ್ನಸ್ಥಿತಿಯಲ್ಲಿದ್ದುದನ್ನು ನೋಡುತ್ತೇವೆ. ಗರ್ಭಗೃಹದಲ್ಲಿ ಲಿಂಗವಿದ್ದು ಗರ್ಭಗೃಹ ಮತ್ತು ಅಂತರಾಳಗಳ ಒಳಚಾವಣಿಯಲ್ಲಿ ಭುವನೇಶ್ವರಿ ಇದೆ. ಅಂತರಾಳದ ದ್ವಾರದ ಇಕ್ಕೆಲಗಳಲ್ಲಿ ಜಾಲಂದ್ರಗಳಿದ್ದು ದೊಡ್ಡ ಕಿಂಡಿಗಳನ್ನು ಕೊರೆಯಲಾಗಿದೆ. ಒರಟು ರಚನೆ ಮತ್ತು ಸರಳ ಅಲಂಕರಣೆಯ ಜಾಲಾಂದ್ರಗಳಿರುವ ದೇವಾಲಯಗಳು ಸಾಮಾನ್ಯವಾಗಿ ಗೋವೆಯ ಕದಂಬರ ಆಳ್ವಿಕೆಯ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಪ್ರಸ್ತುತ ಕಲ್ಮೇಶ್ವರ ದೇವಾಲಯವು ಸಹ ಗೋವೆ ಕದಂಬರ ಆಳ್ವಿಕೆ ವ್ಯಾಪ್ತಿಯಲ್ಲಿ ನಿರ್ಮಾಣಗೊಂಡಿದೆ. ದೇವಾಲಯ ಹೊರಭಾಗದಲ್ಲಿ ಭೈರವ, ವಿಷ್ಣು, ಲಿಂಗವೊಂದರ, ರುದ್ರಭಾಗ, ಲಿಂಗ, ಭಗ್ನಗೊಂಡ ಸಪ್ತಮಾತ್ರಿಕೆಯರ ಶಿಲ್ಪಫಲಕ ಮತ್ತು ನಾಗಶಿಲ್ಪಗಳು ಕಂಡುಬರುತ್ತವೆ. ಈ ಊರಿನಲ್ಲಿ ಮೂರು ಶಾಸನಗಳು ಗೋವೆ ಕದಂಬರ ಕಾಲಕ್ಕೆ ಸಂಬಂಧಿಸಿದ್ದವುಗಳಾಗಿವೆ. ಊರ

ಒಕ್ಕಲಿಗರು ದೇವಾಲಯಗಳ ಆಚಾರ್ಯರಿಗೆ ನೀಡಿದ ಭೂದಾನವನ್ನು ಉಲ್ಲೇಖಿಸುತ್ತದೆ.[೨]

೧೮. ಊರು : ನೂಲ್ವಿ ಸ್ಥಳ : ಊರ ಈಶಾನ್ಯ ಭಾಗ

ಸ್ಮಾರಕ : ಮಲ್ಲಿಕಾರ್ಜುನ ದೇವಾಲಯ ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ೧೦ ಕೀ.ಮೀ ದೂರದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದೆ. ದೇವಾಲಯದ ಒಳಭಾಗ ಗರ್ಭಗೃಹಮಾತ್ರ ಒಳಗೊಂಡಿದೆ. ಇಲ್ಲಿ ಪ್ರಾಚೀನ ಲಿಂಗವಿದೆ. ಹೊರಭಾಗದಲ್ಲಿ ಭಗ್ನ ನಂದಿ ಶಿಲ್ಪವಿದ್ದು ಈ ಊರಿನಲ್ಲಿ ಹೆಚ್ಚಿನ ದೇವಾಲಯಗಳಿದ್ದು ಗರ್ಭಗೃಹಗಳು ಮಾತ್ರ ಉಳಿದು ಬಂದಿದ್ದು ಹೆಚ್ಚಿನಭಾಗ ಪಾಳುಬಿದ್ದಿವೆ.[೨೫]

೧೯. ಊರು : ನೂಲ್ವಿ ಸ್ಥಳ : ಊರಮಧ್ಯೆ

ಸ್ಮಾರಕ : ರಾಮೇಶ್ವರ ದೇವಾಲಯ ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ೧೦ ಕಿ.ಮೀ ದೂರದಲ್ಲಿರುವ ಈ ದೇವಾಲಯವು ಪೂರ್ವಾಭಿಮುವಾಗಿದ್ದು ದೇವಾಲಯದ ಒಳಭಾಗ ಗರ್ಭಗೃಹ ಮತ್ತು ಮುಖಮಂಟಪ ಹೊಂದಿದೆ. ಗರ್ಭಗೃಹದಲ್ಲಿ ಲಿಂಗದ ರುದ್ರಭಾಗ ಮಾತ್ರ ಇದೆ. ಮುಖಮಂಟಪದಲ್ಲಿ ನಂದಿಶಿಲ್ಪವಿದೆ. ದೇವಾಲಯದ ಹೊರಭಾಗದಲ್ಲಿ ಕೆಲವು ಭಗ್ನಶಿಲ್ಪಾವಶೇಷಗಳು ಕಂಡುಬರುತ್ತವೆ.[೨೬]

೨೦. ಊರು : ನೂಲ್ವಿ ಸ್ಥಳ : ಕುಂಬಾರ ಓಣಿ

ಸ್ಮಾರಕ : ವೀರಭದ್ರ ದೇವಾಲಯ ಧರ್ಮ : ಶೈವ

ಕಾಲ : ಆಧುನಿಕ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ೧೦ ಕಿ.ಮೀ ದೂರದಲ್ಲಿರುವ ಈ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಈ ದೇವಾಲಯದ ಒಳಭಾಗವು ಗರ್ಭಗೃಹ ಮತ್ತು ಸಭಾಮಂಟಪದಿಂದ ಕೂಡಿದೆ. ಗರ್ಭಗೃಹ ಪ್ರಾಚೀನ ದೇವಾಲಯದ ಇತ್ತೀಚೆಗೆ ಹೊಸದಾಗಿ ನಿರ್ಮಿಸುತ್ತಿದ್ದು ವೀರಭದ್ರನ ಶಿಲ್ಪವು ಸಿಂಹಲಾಂಛನದ ಪಾಣಿಪೀಠದ ಮೇಲಿರುವುದು ಆಶ್ಚರ್ಯಕರವಾಗಿದೆ. ಈ ಪೀಠ ಮೂಲತಃ ಮಹಾವೀರನಿಗೆ ಸಂಬಂಧಿಸಿರಬೇಕು. ಬಹುಶಃ ಈ ದೇವಾಲಯ ಜೈನ ಬಸದಿಯಾಗಿದ್ದಿರಬಹುದೆಂದು ಊಹಿಸಬಹುದಾದಾಗಿದೆ. ಗರ್ಭಗೃಹ ಒಳಸೇರಿದಂತೆ ಸುತ್ತಲೂ ಗೋಡೆ ಇರುವುದರಿಂದ ಪ್ರದಕ್ಷಿಣಾಪಥ ನಿರ್ಮಾಣಗೊಂಡಂತಾಗಿದೆ. ದೇವಾಲಯದ ಹೊರಭಾಗದಲ್ಲಿ ಭಗ್ನಗೊಂಡ ಸೂರ್ಯ ಶಿಲ್ಪವಿದೆ. ಈ ಊರಿನ ಆಂಜನೇಯ ಗುಡಿ ಎದುರು ಮರದ ಕೆಳಗೆ ವೀರಗಲ್ಲು ಮತ್ತು ಆಂಜನೇಯ ಮತ್ತಿತರ ಶಿಲ್ಪಾವಶೇಷಗಳಿವೆ.[೨೭]

೨೧. ಊರು : ಬುಡರಸಿಂಗಿ ಸ್ಥಳ : ಊರಮಧ್ಯೆ

ಸ್ಮಾರಕ : ಆಂಜನೇಯ ದೇವಾಲಯ ಧರ್ಮ : ಶೈವ

ಕಾಲ : ಕ್ರಿ.ಶ. ೧೬ನೇ ಶತಮಾನ

ಹುಬ್ಬಳ್ಳಿಯಿಂದ ದಕ್ಷಿಣಕ್ಕೆ ೮ ಕಿ.ಮೀ ದೂರದಲ್ಲಿರುವ ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ದೇವಾಲಯದ ಒಳಭಾಗ ಗರ್ಭಗೃಹ ಅಂತರಾಳ ಮತ್ತು ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಆಂಜನೇಯ ಶಿಲ್ಪವಿದೆ. ಇಡಿ ಶಿಲ್ಪಕ್ಕೆ ಕೀರ್ತಿಮುಖದಿಂದ ಕೂಡಿದೆ ಕಮಾನಿನ ಅಲಂಕರಣವಿದೆ. ಅಂತರಾಳದ ದ್ವಾರವನ್ನು ಕಲ್ಯಾಣ ಚಾಲುಕ್ಯರ ಶೈಲಿಯ ದ್ವಾರಗಳನ್ನು ಅನುಸರಿಸಿ ರಚಿಸಲಾಗಿದೆ. ಬಾಗಿಲುವಾಡಗಳಲ್ಲಿ ಅರ್ಧಕಂಬಗಳ ರಚನೆಯನ್ನು ಮತ್ತು ಲಲಾಟಬಿಂಬದಲ್ಲಿ ಭಕ್ತಾಂಜನೇಯನ ಉಬ್ಬುಶಿಲ್ಪವನ್ನು ಕಾಣಬಹುದು. ಸಭಾಮಂಟಪಕ್ಕೆ ದಕ್ಷಿಣ, ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ದ್ವಾರಗಳಿದ್ದು ಗೋಡೆಯಲ್ಲಿ ನಾಗಬಂಧದ ಉಬ್ಬುಶಿಲ್ಪಗಳಿವೆ. ಮಧ್ಯದಲ್ಲಿರುವ ಭಾರಿಗಾತ್ರದ ನಾಲ್ಕು ಕಂಬಗಳಿದ್ದು ಚಾವಣಿಯನ್ನು ಹೊತ್ತು ನಿಂತಂತಿವೆ. ಕಲ್ಲು ಮತ್ತು ಗಾರೆಗಳಿಂದ ನಿರ್ಮಿಸಿರುವ ಕಂಬಗಳು ದುಂಡಾಗಿದ್ದು ಆ ಮೂಲಕ ಒಳಗೊಂಡಿದೆ. ಚಾವಣಿಯಲ್ಲಿ ಮರ, ಕಬ್ಬಿಣದ ತೊಲೆ ಹಾಗೂ ಹಳಿಗಳನ್ನು ಅಳವಡಿಸಿ ಮೇಲೆ ಗಾರೆಗಚ್ಚು ಮಾಡಿದ್ದಾರೆ. ಸುತ್ತಲಿನ ಗೋಡೆಗೆ ಹೊಂದಿಕೊಂಡಂತೆ ಅಲ್ಲಲ್ಲಿ ಗೋಡೆಗಂಬಗಳನ್ನು ನಿರ್ಮಿಸಿದ್ದಾರೆ.[೨೨]

೨೨. ಊರು : ಬೆಳಗಲಿ ಸ್ಥಳ : ಊರ ಹೊರಗೆ
ಸ್ಮಾರಕ : ಕಲ್ಮೇಶ್ವರ ದೇವಾಲಯ ಧರ್ಮ : ಶೈವ
ಕಾಲ : ಆಧುನಿಕ

ಹುಬ್ಬಳ್ಳಿಯಿಂದ ದಕ್ಷಿಣಕ್ಕೆ ೧೨ ಕಿ.ಮೀ ದೂರದಲ್ಲಿರುವ ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ದೇವಾಲಯದ ಒಳಭಾಗದಲ್ಲಿ ಪ್ರಾಚೀನ ಲಿಂಗದ ಬ್ರಹ್ಮಭಾಗದ ಮೇಲೆ ಇತ್ತೀಚೆಗೆ ಶಿವಲಿಂಗವನ್ನಿಟ್ಟಿದ್ದಾರೆ. ಕಲ್ಲು ಮತ್ತು ಮಣ್ಣುಗಳಿಂದ ನಿರ್ಮಿಸಿರುವ ಕೊಠಡಿಯ ರೀತಿಯ ದೇವಾಲಯವಾಗಿದ್ದು ಕೊಠಡಿಯ ದ್ವಾರವು ಚಿಕ್ಕದಾಗಿದೆ. ಈ ದೇವಾಲಯವನ್ನು ಸುಮಾರು ನೂರುವರ್ಷದ ಹಿಂದೆ ನಿರ್ಮಿಸಿರಬೇಕೆಂದು ಊಹಿಸಲಾಗಿದ್ದು ಮುಂದಿರುವ ಹೊಲದಲ್ಲಿ ಗಜಲಕ್ಷ್ಮಿ ಶಿಲ್ಪ ಬಿದ್ದಿದೆ. ಹೀಗಾಗಿ ಇಲ್ಲಿ ಹಳೆಯ ದೇವಾಲಯ ಇತ್ತೆಂದು ತಿಳಿಯಬಹುದು.[೨೩]

೨೩. ಊರು : ಬ್ಯಾಹಟ್ಟಿ ಸ್ಥಳ : ಜಾಡಿಗೇರಿ
ಸ್ಮಾರಕ : ಕಲ್ಮೇಶ್ವರ ದೇವಾಲಯ ಧರ್ಮ : ಶೈವ
ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ೧೦ ಕಿ.ಮೀ ದೂರದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದೇವಾಲಯದ ಒಳಭಾಗ ಗರ್ಭಗೃಹ ಅಂತರಾಳ ಮತ್ತು ನವರಂಗಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಪ್ರಾಚೀನ ಲಿಂಗ ಮತ್ತು ಇತ್ತೀಚಿನ ನಂದಿ ಶಿಲ್ಪವಿದೆ. ದ್ವಾರಗಳ ರಚನೆಯು ಸರಳವಾಗಿದೆ. ಅಂತರಾಳದಲ್ಲೂ ನಂದಿಶಿಲ್ಪವಿದ್ದು, ನವರಂಗದ ನಡುವಿನ ಕಂಬಗಳು ಚೌಕ ಮತ್ತು ಬಹುಮುಖಿ ರಚನೆಯ ಅಲಂಕರಣವನ್ನು ಹೊಂದಿದೆ. ವಿಶಾಲವಾದ ಹಜಾರದಲ್ಲಿ ಪ್ರಾಚೀನ ಲಿಂಗಗಳು ಮತ್ತು ನಂದಿಶಿಲ್ಪ ವೀರಗಲ್ಲುಗಳು ಮತ್ತು ಶಾಸನಗಳನ್ನು ಇಲ್ಲಿ ಗುರುತಿಸಬಹುದಾಗಿದೆ.[೨೪]

೨೪. ಊರು : ಬಂಢಿವಾಡ ಸ್ಥಳ : ಶಾಲೆಯ ಹತ್ತಿರ
ಸ್ಮಾರಕ : ಕಲ್ಲಪ್ಪನ ದೇವಾಲಯ ಧರ್ಮ : ಶೈವ
ಕಾಲ : ಆಧುನಿಕ

ಹುಬ್ಬಳ್ಳಿಯಿಂದ ದಕ್ಷಿಣಕ್ಕೆ ೧೨ ಕಿ.ಮೀ ದೂರದಲ್ಲಿರುವ ಈ ದೇವಾಲಯವು ಪೂರ್ವಾಭಿಮುವಾಗಿದ್ದು ದೇವಾಲಯವನ್ನು ಇತ್ತೀಚೆಗೆ ಸಿಮೆಂಟಿನಿಂದ ನಿರ್ಮಿಸಿದ್ದಾರೆ. ದೇವಾಲಯದ ಒಳಭಾಗ ಗರ್ಭಗೃಹ ಮತ್ತು ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಪ್ರಾಚೀನ ಲಿಂಗವಿದ್ದು ಸಭಾಮಂಟಪದಲ್ಲಿ ನಂದಿಶಿಲ್ಪವನ್ನು ಕಾಣುತ್ತೇವೆ.[೬೦]

೨೫. ಊರು : ಬಂಢಿವಾಡ — ಸ್ಥಳ : ಊರ ಮಧ್ಯೆ

ಸ್ಮಾರಕ : ಮಲ್ಲಿಕಾರ್ಜುನ ದೇವಾಲಯ — ಧರ್ಮ : ಶೈವ

ಕಾಲ : ಆಧುನಿಕ

ಹುಬ್ಬಳ್ಳಿಯಿಂದ ದಕ್ಷಿಣಕ್ಕೆ ೧೨ ಕಿ.ಮೀ ದೂರದಲ್ಲಿರುವ ಈ ದೇವಾಲಯವು ದಕ್ಷಿಣಾಭಿಮುವಾಗಿದ್ದು ದೇವಾಲಯದ ಒಳಭಾಗ ಗರ್ಭಗೃಹ ಮತ್ತು ಸಭಾಮಂಟಪ ಒಳಗೊಂಡಿದೆ. ಈ ದೇವಾಲಯದ ಕಟ್ಟಡವನ್ನು ಇತ್ತಿಚೆಗೆ ಸಿಮೆಂಟಿನಿಂದ ನಿರ್ಮಿಸಿದ್ದಾರೆ. ಗರ್ಭಗೃಹದಲ್ಲಿ ಪ್ರಾಚೀನ ಕಾಲದ ಲಿಂಗವಿದೆ. ಅದು ಎತ್ತರವಾದ ವೇದಿಕೆ ಮೇಲಿದೆ. ಹಿಂಭಾಗದ ಮೇದಿಕೆಯ ಮೇಲೆ ಸಾಲಾಗಿ ಇತ್ತೀಚಿನ ಗಣಪತಿ ಕಾಳಿ ಮತ್ತು ವೀರಭದ್ರರ ಶಿಲ್ಪಗಳು ಕಂಡುಬರುತ್ತವೆ. ಸಭಾಮಂಟಪದಲ್ಲಿ ಇತ್ತೀಚಿನ ಕಾಲದ ನಂದಿಯನ್ನು ಸಹ ನೋಡಬಹುದಾಗಿದೆ. ಈ ದೇವಾಲಯದ ಹತ್ತಿರ ಕಲ್ಯಾಣ ಚಾಲುಕ್ಯರ ಕಾಲದ ಶಾಸನವೊಂದಿದ್ದು ಶಾಸನವು ಹಾಳಾಗಿದೆ.[೬೦]

೨೬. ಊರು : ಮಂಟೂರು — ಸ್ಥಳ : ಗುಡಿ ಏಣಿ

ಸ್ಮಾರಕ : ವಲ್ಲಭೇಶ್ವರ ದೇವಾಲಯ — ಧರ್ಮ : ಶೈವ

ಕಾಲ : ಕ್ರಿ.ಶ. ೧೧ನೇ ಶತಮಾನ

ಹುಬ್ಬಳ್ಳಿಯಿಂದ ದಕ್ಷಿಣಕ್ಕೆ ೧೨ ಕಿ.ಮೀ ದೂರದಲ್ಲಿರುವ ಈ ದೇವಾಲಯವು ಪಶ್ಚಿಮಾಭಿಮುವಾಗಿದೆ. ಹಳೆಯ ದೇವಾಲಯ ಸಂಪೂರ್ಣ ನವೀಕರಣಗೊಂಡಿದೆ. ದೇವಾಲಯದ ಒಳಭಾಗ ಗರ್ಭಗೃಹ ಸಭಾಮಂಟಪ, ಮುಖಮಂಟಪ ಮತ್ತು ಪ್ರವೇಶ ಮಂಟಪ ಒಳಗೊಂಡಿದೆ. ಗರ್ಭಗೃಹದಲ್ಲಿ ಪ್ರಾಚೀನ ಲಿಂಗ ಹಾಗೂ ಉತ್ಸವಮೂರ್ತಿ ಇದ್ದು ಜಾತ್ರೆಯ ಸಮಯದಲ್ಲಿ ಈ ಮೂರ್ತಿಯನ್ನು ಮೆರವಣಿಗೆ ಒಯ್ಯುಲಾಗುವುದು. ಇವಲ್ಲದೆ ಪಲ್ಲಕ್ಕಿ, ಉಯ್ಯಾಲೆಮಣೆ, ಮರದ ಪೆಟ್ಟಿಗೆಗಳು ಮತ್ತು ನಗಾರಿ ಇತರೆ ವಸ್ತು ಅವಶೇಷಗಳು ಕಂಡುಬಂದಿವೆ. ಇವು ದೇವಾಲಯದಲ್ಲಿ ನಡೆಯುವ ಪೂಜೆ ಮತ್ತು ಆಚರಣೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಒಳಚಾವಣಿಯಲ್ಲಿ ಗಾರೆಗುಮ್ಮಟವನ್ನು ರಚಿಸಿದ್ದು, ದ್ವಾರಕ್ಕೆ ಹಿತ್ತಾಳೆ ತಗಡಿನ ಹೊದಿಕೆಯನ್ನು ಹಾಕಲಾಗಿದೆ. ಸಭಾಮಂಟಪದಲ್ಲಿ ಮರದ ಕಂಬಗಳಿವೆ. ಇಲ್ಲಿನ ಗೂಡುಗಳಲ್ಲಿ ನಾಗ, ವಿಷ್ಣು, ಮೊದಲಾದ ಶಿಲ್ಪಾವಶೇಷಗಳು ಇವೆ.[೬೦]

೨೭. ಊರು : ಮಲ್ಲಿಗವಾಡ — ಸ್ಥಳ : ಊರ ಮಧ್ಯೆ

ಸ್ಮಾರಕ : ಸೋಮೇಶ್ವರ ದೇವಾಲಯ — ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಹುಬ್ಬಳ್ಳಿಯಿಂದ ಪೂರ್ವಕ್ಕೆ ೩೧ ಕಿ.ಮೀ ದೂರದಲ್ಲಿರುವ ಈ ದೇವಾಲಯ ಪೂರ್ವಾಭಿಮುಖವಾಗಿದೆ. ಇದು ತ್ರಿಕೂಟ ದೇವಾಲಯವಾಗಿದ್ದು ಒಳಭಾಗದಲ್ಲಿ ಗರ್ಭಗೃಹ, ಅಂತರಾಳ ನವರಂಗವನ್ನು

ಒಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಉಳಿದಂತೆ ದಕ್ಷಿಣದ ಗರ್ಭಗೃಹದಲ್ಲಿ ಲಿಂಗದ ರುದ್ರಭಾಗವಿದ್ದು ಉತ್ತರದ ಗರ್ಭಗೃಹದಲ್ಲಿ ಯಾವುದೇ ಶಿಲ್ಪವಿಲ್ಲ ಗರ್ಭಗೃಹ ಮತ್ತು ಅಂತರಾಳ ದ್ವಾರಗಳು ಸರಳ ಅಲಂಕರಣದಿಂದ ಕೂಡಿದ್ದು ಗರ್ಭಗೃಹಗಳು ನವರಂಗಕ್ಕೆ ಹೊಂದಿಕೊಂಡಿವೆ. ನವರಂಗದಲ್ಲಿ ದೇವಕೋಷ್ಠಕಗಳಿದ್ದು ನಡುವಿನ ಕಂಬಗಳು ಚೌಕರಚನೆಯಾಗಿದ್ದು ನಡುವೆ ಪಟ್ಟಿಕಾ ಅಲಂಕರಣವಿದೆ. ಬೋದಿಗೆಗಳು ಸಹ ಅಲಂಕರಣದಿಂದ ಕೂಡಿದ್ದು ನವರಂಗದ ಪ್ರವೇಶದ್ವಾರದಲ್ಲಿ ಅರ್ಧಕಂಬಗಳ ರಚನೆಯನ್ನು ನೋಡಬಹುದಾಗಿದೆ. ದೇವಾಲಯದ ಹೊರಭಾಗದಲ್ಲಿ ಅಧಿಷ್ಠಾನವನ್ನು ಮುಚ್ಚಿ ಕಲ್ಲಿನ ವೇದಿಕೆಯನ್ನು ನಿರ್ಮಿಸಿಲಾಗಿದ್ದು, ಗೋಡೆ ಸಪಾಟಾಗಿದೆ. ಇದಕ್ಕೆ ಯಾವುದೇ ಅಲಂಕರಣವಿಲ್ಲ ಗೋಡೆಯ ತುದಿಯಲ್ಲಿ ಕಪೋತ ಮತ್ತು ಕೈಪಿಡಿಯ ರಚನೆ ಇದೆ. ಗರ್ಭಗೃಹದ ಮೇಲಿರುವ ಕದಂಬನಾಗರ ಶೈಲಿಯ ಶಿಖರವು ಸುಖನಾಸವನ್ನು ಹೊಂದಿದೆ. ಹಾಗೂ ಶಿಖರದ ತುದಿಯಲ್ಲಿ ಕಲ್ಲಿನ ಕಳಸವಿದೆ.

ದೇವಾಲಯದ ಪ್ರವೇಶದ ಜಗತಿಯ ಮೇಲೆ ಭಗ್ನಗೊಂಡ ಸಿಂಹಶಿಲ್ಪವಿದ್ದು ಹೊಯ್ಸಳ ಲಾಂಛನ ಶಿಲ್ಪಕ್ಕೆ ಸಂಬಂಧಿಸಿದೆ. ಗಜಲಕ್ಷ್ಮಿ ಹಾಗೂ ಗೋಸಾಸನದ ಶಿಲ್ಪಗಳು ಇಲ್ಲಿ ಕಂಡುಬಂದಿವೆ. ಇಲ್ಲಿ ಕ್ರಿ.ಶ. ೧೨ ನೇ ಶತಮಾನಕ್ಕೆ ಸೇರಿದ ಶಾಸನವಿದೆ.[೩೨]

೨೮. ಊರು : ವರೂರು — ಸ್ಥಳ : ಊರ ಹೊರಗೆ
ಸ್ಮಾರಕ : ಈಶ್ವರ ದೇವಾಲಯ — ಧರ್ಮ : ಶೈವ
ಕಾಲ : ಆಧುನಿಕ

ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಇತ್ತೀಚೆಗೆ ಕಟ್ಟಿರುವ ಒಂದೇ ಕೊಠಡಿಯಲ್ಲಿ ಪ್ರಾಚೀನ ಕಾಲದ ಶಿವಲಿಂಗವಿದೆ. ಹೊರಭಾಗದಲ್ಲಿ ಹಳೆಯ ದೇವಾಲಯಕ್ಕೆ ಸಂಬಂಧಿಸಿದ ನಂದಿ ಮತ್ತಿತರ ಭಗ್ನಶಿಲ್ಪಾವಶೇಷಗಳು ಕಂಡುಬರುತ್ತವೆ. ಇದರಿಂದ ಇಲ್ಲಿ ಹಳೆಯ ದೇವಾಲಯವಿದ್ದು ಅದು ನಶಿಸಿಹೋಗಿರುವ ಬಗ್ಗೆ ಸ್ಪಷ್ಟ ಸೂಚನೆಗಳು ದೊರೆಯುತ್ತವೆ.[೩೩]

೨೯. ಊರು : ವರೂರು — ಸ್ಥಳ : ಊರ ಮಧ್ಯೆ
ಸ್ಮಾರಕ : ಸಿದ್ಧರಾಮೇಶ್ವರ ದೇವಾಲಯ — ಧರ್ಮ : ಶೈವ
ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದೇವಾಲಯ ಭಗ್ನಸ್ಥಿತಿಯಲ್ಲಿರುವುದನ್ನು ಕಾಣುತ್ತೇವೆ. ಈ ದೇವಾಲಯದ ಒಳಭಾಗವು ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಅರ್ಧ ಅಡಿ ಎತ್ತರದ ಪೀಠವಿದ್ದು ಅದರ ಮೇಲೆ ಪಿರಮಿಡ್ಡಿನಾಕಾರದ ರಚನೆಯಿದೆ. ಬಹುಶಃ ಇದು ಗುರುಗಳೊಬ್ಬರ ಗದ್ದಿಗೆ ಇರುವ ಸಾಧ್ಯತೆ ಇದೆ. ಗರ್ಭಗೃಹ ಮತ್ತು ಅಂತರಾಳದ ದ್ವಾರದ ರಚನೆಯು ಸರಳವಾಗಿದೆ. ನವರಂಗದ ಸ್ತಂಭಗಳು ಚೌಕ ಮತ್ತು ಅಷ್ಟಮುಖದ ರಚನೆಯಿಂದ ಕೂಡಿವೆ. ಈ ದೇವಕೋಷ್ಠಕದಲ್ಲಿ ಗಣಪತಿ ಶಿಲ್ಪವಿದೆ. ಇನ್ನೊಂದರಲ್ಲಿ ದೇವಿಯ ರುಂಡಶಿಲ್ಪವಿದ್ದು ಬಾಯಲ್ಲಿ ಕೋರೆಹಲ್ಲುಗಳನ್ನು ಹೊಂದಿದೆ. ಉಳಿದಂತೆ ಯಾವುದೇ ಶಿಲ್ಪಾವಶೇಷಗಳು ಕಂಡಬರುವುದಿಲ್ಲ.[೩೪]

೩೦. ಊರು : ಶಿರುಗುಪ್ಪಿ ಸ್ಥಳ : ಅರಳಿಕಟ್ಟೆ

ಸ್ಮಾರಕ : ನಲುಡಿ ಹನುಮಪ್ಪ ದೇವಾಲಯ ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಈ ದೇವಾಲಯದ ಮುಂಭಾಗದ ಅರಳಿಕಟ್ಟೆಯಲ್ಲಿ ಪ್ರಾಚೀನ ಶಿಲ್ಪಾವಶೇಷಗಳಿವೆ. ಭೈರವಶಿಲ್ಪ, ಯೋನಿಪೀಠ, ನಂದಿ ನಾಗ ಇವು ಶಿವಾಲಯವೊಂದಕ್ಕೆ ಸಂಬಂಧಿಸಿವೆ. ಇಲ್ಲಿ ಭೈರವನ ಶಿಲ್ಪ ಆಕರ್ಷಕವಾಗುವುದಕ್ಕೆ ತ್ರಿಭಂಗಿಯಲ್ಲಿ ನಿಂತ ಈ ಶಿಲ್ಪದ ಕೈಗಳಲ್ಲಿ ಕೊಡಲಿ, ತ್ರಿಶೂಲ, ಖಡ್ಗ, ಡಮರು, ಪಾಶ, ಅಂಕುಶ ಹಿಡಿದಿದ್ದಾನೆ. ಇಕ್ಕೆಲಗಳಲ್ಲಿ ನಾಗರಾಜ, ಭೂತಪ್ರೇತಗಳು, ನಾಯಿ ಮತ್ತು ರುಂಡಶಿಲ್ಪಗಳಿವೆ. ಪೀಠದಲ್ಲಿ ನಂದಿ, ಶವ ಮತ್ತು ಪ್ರೇತಗಳ ಸೂಕ್ಷ್ಮ ಕೆತ್ತನೆಯನ್ನು ಕಾಣಬಹುದು. ಬಹುಶಃ ಭೈರವನು ಇಲ್ಲಿ ಪ್ರಧಾನವಾಗಿ ಪೂಜೆಗೊಳ್ಳುತ್ತಿದ್ದನೆಂದು ಗ್ರಹಿಸಬಹುದು.[೩೫]

೩೧. ಊರು : ಶೆರವಾಡ ಸ್ಥಳ : ಊರ ಮಧ್ಯೆ

ಸ್ಮಾರಕ : ಮೈಲಾರಲಿಂಗಪ್ಪನ ದೇವಾಲಯ ಧರ್ಮ : ಶೈವ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಈ ದೇವಾಲಯ ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ವಾಸ್ತವವಾಗಿ ಇದು ಚತುರ್ಮುಖ ಶಿವನ ಶಿಲ್ಪವಾಗಿದೆ. ಹಣೆಯಲ್ಲಿ ಮೂರನೇ ಕಣ್ಣಿದೆ. ಹೀಗಾಗಿ ಇಲ್ಲಿ ಪ್ರಾಚೀನ ದೇವಾಲಯವಿದ್ದ ಸೂಚನೆಗಳು ದೊರೆಯುತ್ತವೆ.[೩೬]

೩೨. ಊರು : ಸುಳ್ಳ ಸ್ಥಳ : ಊರಮಧ್ಯೆ

ಸ್ಮಾರಕ : ಕಲ್ಮೇಶ್ವರ ದೇವಾಲಯ ಧರ್ಮ : ಶೈವ

ಕಾಲ : ಆಧುನಿಕ

ಇತ್ತೀಚೆಗೆ ನವೀಕರಣಗೊಂಡಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ದೇವಾಲಯದ ಒಳಭಾಗ ಗರ್ಭಗೃಹ, ಅಂತರಾಳ, ನವರಂಗ ಮತ್ತು ಪ್ರವೇಶ ಮಂಟಪವನ್ನು ಹೊಂದಿದೆ. ಗರ್ಭಗೃಹದ ಒಳಭಾಗದಲ್ಲಿ ಪ್ರಾಚೀನ ಲಿಂಗವಿದ್ದು, ಪೂಜೆಗೊಳ್ಳುತ್ತಲಿದೆ. ಗರ್ಭಗೃಹದ್ವಾರವು ಕಮಾನಿನಾಕಾರದಲ್ಲಿದ್ದು ಬಾಗಿಲು ರಹಿತವಾಗಿದೆ. ಅಂತರಾಳದ ದ್ವಾರದಲ್ಲಿ ಮರದ ಬಾಗಿಲುವಾಡಗಳನ್ನು ಅಳವಡಿಸಿ ತಗಡನ್ನು ಹೊದಿಸಲಾಗಿದೆ. ನವರಂಗವು ಮಾಳಿಗೆ ರಚನೆಯಿಂದ ಕೂಡಿದ್ದು ಮರದಜಂತಿ, ತೊಲೆ ಮತ್ತು ಕಂಬಗಳನ್ನು ಬಳಸಲಾಗಿದೆ. ಸ್ತಂಭಗಳನ್ನು ಸೂಕ್ಷ್ಮಕೆತ್ತನೆಗಳಿಂದ ಅಲಂಕರಿಸಲಾಗಿದೆ. ಈ ದೇವಾಲಯ. ಮುಂಭಾಗದಲ್ಲಿ ಮಹಾದ್ವಾರ ಮಂಟಪವನ್ನು ಹೊಂದಿದ್ದು. ಇಲ್ಲಿ ಭಗ್ನಗೊಂಡಿರುವ ನಂದಿ, ಕಾರ್ತೀಕೇಯ ಉಮಾಮಹೇಶ್ವರ ಮತ್ತು ನಾಗಶಿಲ್ಪಗಳು ಕಂಡುಬರುತ್ತವೆ.[೩೭]

೪.೩. ವೈಷ್ಣವ ದೇವಾಲಯಗಳು

೧. ಊರು : ಕೋಳಿವಾಡ ಸ್ಥಳ : ಊರಮಧ್ಯೆ

ಸ್ಮಾರಕ : ವೀರನಾರಾಯಣ ದೇವಾಲಯ ಧರ್ಮ : ಶೈವ

ಕಾಲ : ಕ್ರಿ.ಶ. ೧೩-೧೪ನೇ ಶತಮಾನ

ಹುಬ್ಬಳ್ಳಿಯಿಂದ ಪೂರ್ವಕ್ಕೆ ೨೯ ಕಿ.ಮೀ ದೂರದಲ್ಲಿರುವ ಈ ದೇವಾಲಯವು ಪೂರ್ವಾಭಿಮುವಾಗಿದೆ. ದೇವಾಲಯದ ಒಳಭಾಗವು ಗರ್ಭಗೃಹ ಮತ್ತು ತೆರೆದ ಮಂಟಪ ಒಳಗೊಂಡಿದೆ. ಗರ್ಭಗೃಹದಲ್ಲಿ ವೀರನಾರಾಯಣನ ವಿಗ್ರಹವಿದ್ದು. ಕೈಗಳಲ್ಲಿ ಶಂಖ, ಚಕ್ರ, ಗದೆ ಮತ್ತು ಪದ್ಮಗಳಿವೆ. ಅಂತರಾಳದಲ್ಲಿ ಕ್ರಿ.ಶ. ೧೫೬೩ರ ಶಾಸನವಿದ್ದು, ಮಾಧವ ಜನಾರ್ಧನರ ಹೆಸರುಗಳಿವೆ. ಸೂರಪ್ಪಯ್ಯ ಎಂಬುವನು ಈ ದೇವಾಲಯದ ಸೇವೆಗೆ ತಿರುಮಲ ಭೋವನ ಮಗಳಾದ ಸೂರಿಯ ಮಾಣಿಕೆಯನ್ನು ದತ್ತಿನೀಡಿದನೆನ್ನಲಾಗಿದೆ. ಪ್ರವೇಶದ್ವಾರದಲ್ಲಿ ಜಾಲಾಂದರಗಳಿವೆ.[೩೮]

೪.೪. ಜೈನ ದೇವಾಲಯಗಳು

ವೈದಿಕ ಮತ್ತು ಬೌದ್ಧ ಧರ್ಮಗಳ ಸಮಕಾಲೀನ ಸಾಹಿತ್ಯಗಳಲ್ಲಿಯೂ ಈಧರ್ಮದ ಕುರಿತು ಉಲ್ಲೇಖಗಳಿವೆ.[೩೯] ವರ್ತಮಾನ ಕಾಲದ ಪ್ರಥಮ ತೀರ್ಥಂಕರ ವೃಷಭನಾಥನ ನಿರ್ಮಾಣದ ತರುವಾಯ ಆತನ ಹಿರಿಯ ಸುಪುತ್ರ ಭಾರತ ಚಕ್ರವರ್ತಿ ಕೈಲಾಸ ಪರ್ವತದಲ್ಲಿ ಒಂದು ಚೈತ್ಯ ಮತ್ತು ಆಯತನವನ್ನು ನಿರ್ಮಿಸಿದನೆಂದು ಜಿನಸೇನಾಯಾರ್ಯನ ಪೂರ್ವ ಪೂರಾಣದಲ್ಲಿ ಬರುವ ಪ್ರಸ್ತಾಪವೇ ಈ ಧರ್ಮದ ವಾಸ್ತು ನಿರ್ಮಾಣದ ಪ್ರಪ್ರಥಮ ನಿದರ್ಶನ[೪೦] ಈ ಧರ್ಮದವಾಸ್ತು ನಿರ್ಮಾಣಗಳು ಮೌರ್ಯ ಮನೆತನದಿಂದೀಚೆಗೆ ಕಂಡುಬರುತ್ತವೆ. ಆದರೆ ಅಶೋಕ ಚಕ್ರವರ್ತಿ ಮತ್ತು ಆತನ ಮೊಮ್ಮಗ ದಶರಥನು ಅಜೀವಿಕ ಪಂತದ ಮುನಿಗಳ ಆಶ್ರಯಕ್ಕಾಗಿ ಗುಹಾಲಯಗಳನ್ನು ಖಂಡರಿಸಿದ್ದಾನೆ.[೪೧] ಅದೇ ರೀತಿ ಕ್ರಿ.ಪೂ. ೧ನೇ ಶತಮಾನದಲ್ಲಿ ಕಳಿಂಗದ ಖಾರವೇಲನು ಉದಯಗಿರಿ ಮತ್ತು ಖಂಡಗಿರಿ ಬೆಟ್ಟದಲ್ಲಿ ಮುನಿಗಳಿಗಾಗಿ ಗುಹಾಲಯಗಳನ್ನು ಕಂಡರಿಸಿದ್ದಾನೆ. ತಮಿಳುನಾಡಿನಲ್ಲಿ ಮಧುರೈಯ ಪರಿಸರದಲ್ಲಿ ಜೈನ ಮುನಿಗಳ ಆಶ್ರಯಕ್ಕಾಗಿ ಕಂಡರಿಸಿರುವ ಗುಹಾಲಯಗಳಿವೆ. ಹೀಗೆ ಭಾರತದಾದ್ಯಂತ ಸುಮಾರು ೨೦೦ ಗುಹಾಲಯಗಳು ಕಂಡುಬರುತ್ತವೆ.[೪೨]

ಆದರೆ ಕನ್ನಡ ನಾಡಿಗೆ ಸೀಮಿತವಾದರೆ ಈ ಧರ್ಮದ ಪ್ರಾಚೀನತೆ ಕ್ರಿ.ಶ. ಸುಮಾರು ೪ನೇ ಶತಮಾನದಿಂದ ಗುರುತಿಸಬಹುದಾದರೂ[೪೩] ಇದರ ವಾಸ್ತು ನಿರ್ಮಾಣಗಳು ಕ್ರಿ.ಪೂ. ೪-೫ ನೆಯ ಶತಮಾನದಿಂದ ಕಂಡುಬರುತ್ತವೆ. ಕರ್ನಾಟಕದಲ್ಲಿ ಆಳ್ವಿಕೆಮಾಡಿದ ರಾಜಮನೆತನಗಳ ಆಶ್ರಯ ಪ್ರೋತ್ಸಾಹ ಹಾಗೂ ಈ ಧರ್ಮದ ಮುನಿ ಪರಂಪರೆ ಕವಿಗಳು ಮತ್ತು ಶ್ರಾವಕರ ಪ್ರಯತ್ನದಿಂದಾಗಿ ಜಿನಾಲಯಗಳು ಬಹುಸಂಖ್ಯೆಯಲ್ಲಿ ನಿರ್ಮಾಣವಾಗಿವೆ. ಪ್ರಸ್ತುತ ಈ ಅಧ್ಯಯನವು ಹುಬ್ಬಳ್ಳಿ ತಾಲೂಕಿಗೆ ಸಂಬಂಧಿಸಿದೆ. ಈ ಜೈನಬಸದಿಗಳು ಛಬ್ಬಿ, ಹಳೇಹುಬ್ಬಳ್ಳಿ, ಅದರಗುಂಚಿ, ಗ್ರಾಮಗಳಲ್ಲಿ ಗುರುತಿಸಬಹುದಾಗಿದೆ.

೧. ಊರು : ಛಬ್ಬಿ ಸ್ಥಳ : ಊರಮಧ್ಯೆ

ಸ್ಮಾರಕ : ಶಾಂತಿನಾಥ ಬಸದಿ ಧರ್ಮ : ಶೈವ

ಕಾಲ : ಕ್ರಿ.ಶ. ೧೨ನೇ ಶತಮಾನ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಹದಿನಾರು ಕಿ.ಮೀ. ಪುಣೆ ಬೆಂಗಳೂರು ಹೆದ್ದಾರಿಯಲ್ಲಿದೆ ದೇವಾಲಯವು ಪೂರ್ವಾಭಿಮುಖವಾಗಿದ್ದು, ದಿಗಂಬರ ಪಂಥಕ್ಕೆ ಸೇರಿದ ಈ ದೇವಾಲಯದ ಒಳಭಾಗವು ಗರ್ಭಗೃಹ

ಸಭಾಮಂಟಪ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಶಾಂತಿನಾಥನ ಮೂರ್ತಿ ಇದ್ದು ಅಕ್ಕ-ಪಕ್ಕದಲ್ಲಿ ಮೂರು ತೀರ್ಥಂಕರ ಶಿಲ್ಪಗಳು ಕಂಡುಬರುತ್ತವೆ.[೪೪]

೨.	ಊರು : ಹಳೇಹುಬ್ಬಳ್ಳಿ	ಸ್ಥಳ : ಆಸಾರಗಲ್ಲಿ
	ಸ್ಮಾರಕ : ಅನಂತನಾಥ ಬಸದಿ	ಧರ್ಮ : ಜೈನ
	ಕಾಲ : ಕ್ರಿ.ಶ. ೧೨ನೇ ಶತಮಾನ	

ಈ ದೇವಾಲಯವು ಪೂರ್ವಾಭಿಮುಖವಾಗಿದೆ ದೇವಾಲಯದ ಒಳಭಾಗ ಗರ್ಭಗೃಹ ಮತ್ತು ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಅನಂತನಾಥನ ಶಿಲ್ಪವಿದೆ ಸುಮಾರು ೧೦ ಅಡಿ ಎತ್ತರವಿದೆ. ಇದರ ದ್ವಾರವನ್ನು ಸಂಪೂರ್ಣವಾಗಿ ಮರದಿಂದ ರಚಿಸಿದ್ದು ಬಾಗಿಲುವಾಡಗಳಲ್ಲಿ ಅರ್ಧಕಂಬಗಳ ಅಲಂಕರಣವಿದೆ. ಲಲಾಟಬಿಂಬದಲ್ಲಿ ಜಿನಮೂರ್ತಿಯ ಉಬ್ಬುಶಿಲ್ಪವನ್ನು ಕಾಣಬಹುದು. ಹಾಗೆಯೇ ಸಭಾಮಂಟಪದ ಗೂಡಿನಲ್ಲಿ ಶಾಸನೋಕ್ತ ಬ್ರಹ್ಮದೇವನ ಶಿಲ್ಪವನ್ನು ಮತ್ತೊಂದು ಗೂಡಿನಲ್ಲಿ ಕೂಷ್ಮಾಂಡಿನಿ ದೇವಿಯ ಶಿಲ್ಪವನ್ನಿಡಲಾಗಿದೆ.[೪೫]

೪.೫. ಶಾಕ್ತಪಂಥ ದೇವಾಲಯ

ಇದು ಜನಸಾಮಾನ್ಯರಲ್ಲಿ ಬೇರು ಬಿಟ್ಟ ಪಂಥವಾಗಿದೆ.[೪೬] ಪ್ರಾಚೀನ ಕಾಲದಿಂದಲೂ ಮಾತೃದೇವತಾ ಆರಾಧನೆಯ ಫಲವಾಗಿ ಮೂಡಿ ಬಹುಮುಖವಾಗಿ ಪ್ರಗತಿ ಹೊಂದಿದೆ. ಪ್ರಾಚೀನ ಸಿಂಧೂ ನಾಗರೀಕತೆಯಲ್ಲಿ ಮಾತೃದೇವತಾ ಆರಾಧನೆಯ ಪ್ರಚಲಿತವಿದ್ದ ಬಗ್ಗೆ ಅನೇಕ ಕುರುಹುಗಳು ದೊರೆತಿವೆ. ಜನರ ಜೀವನಾಡಿಯಲ್ಲಿ ಬೆರೆತುಹೋದ ಮಾತೃದೇವತೆ ಆರಾಧನೆಯ ಪ್ರಭಾವ ಉಳಿದು ಬೆಳೆಯಿತು. ಈಕೆ ಜಗತ್ತನ್ನು ಸೃಷ್ಟಿಸಬೇಕೆಂಬ ಇಚ್ಛೆ ಮುನ್ನ ಇರಳು ಪ್ರಕೃತಿಯಲ್ಲಿ ತಾನೊಬ್ಬಳೇ ಅವ್ಯಕ್ತ ಸ್ವರೂಪದಲ್ಲಿದ್ದಳು. ತನ್ನ ಶರೀರದಿಂದಲೇ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸೃಷ್ಟಿಸಿದಳೆಂಬುದು ಈ ಪಂಥದ ಅಭಿಮತ. ಇದರಿಂದ ನೂರಾರು ಮಾತೃದೇವತಾ ಕಲ್ಪನೆಗೆ ದಾರಿಮಾಡಿಕೊಟ್ಟಿತು. ಸಾಂಖ್ಯರ ಪ್ರಕಾರ ಶಕ್ತಿಯು ಪುರುಷ (ಶಿವ) ನೊಡಗೂಡಿ ಸೃಷ್ಠಿಗೆ ಕಾರಣಳಾಗಿದ್ದಾಳೆ. ಇದರಿಂದ ಅವಳು ಶಿವನಿಗಿಂತ ಮಿಗಿಲಾದವಳಾಗಿದ್ದು ಅನ್ಯದೇವತೆಗಳ ಮಡದಿಯರೆಲ್ಲ ಶಕ್ತಿಯ ವಿವಿಧ ರೂಪಗಳಾಗಿವೆ.[೪೭]

ಶಾಕ್ತ ಪಂಥದ ತತ್ವಗಳು ಭಾರತೀಯ ಸಾಂಸ್ಕೃತಿಯ ಸಮಸ್ತ ರೂಪಗಳಲ್ಲಿಯೂ ಅಡಕವಾಗಿವೆ. ಬೌದ್ಧರಲ್ಲಿ ತಾರಾಭಗವತಿ, ಜೈನರಲ್ಲಿ ಪದ್ಮಾವತಿ, ಜ್ವಾಲಾಮಾಲಿನಿ, ವೈಷ್ಣವರಲ್ಲಿ ಲಕ್ಷ್ಮಿದೇವಾಲಯ, ಶೈವರಲ್ಲಿ ದುರ್ಗಿ, ಕಾಳಿ, ಎಲ್ಲಮ್ಮ ಮಹಿಷಾಸುರಮರ್ಧಿನಿ ದೇವಾಲಯಗಳು ರೂಪುಗೊಂಡವು.

ಪ್ರಸ್ತುತ ಈ ಅಧ್ಯಯನವು ಹುಬ್ಬಳ್ಳಿ ತಾಲೂಕಿಗೆ ಸಂಬಂಧಿಸಿದ್ದು ಇಲ್ಲಿನ ಶಾಕ್ತ ದೇವಾಲಯಗಳು ಛಬ್ಬಿ ಅಮರಗೊಳ ಹಳೇಹುಬ್ಬಳ್ಳಿ ಪ್ರದೇಶದಲ್ಲಿ ಕಂಡುಬರುತ್ತವೆ.

೧.	ಊರು : ಛಬ್ಬಿ	ಸ್ಥಳ : ಬಡಿಗೇರಿ ಓಣಿ
	ಸ್ಮಾರಕ : ಕಾಳಮ್ಮನ ದೇವಾಲಯ	ಧರ್ಮ : ಶಾಕ್ತ
	ಕಾಲ : ಕ್ರಿ.ಶ. ೧೫ನೇ ಶತಮಾನ	

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಸುಮಾರು ಹದಿನಾರು ಕಿ.ಮೀ. ದೂರದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದೆ. ದೇವಾಲಯದ ಒಳಭಾಗವು ಗರ್ಭಗೃಹ ಮತ್ತು ಸಭಾಮಂಟಪಗಳನ್ನು

ಒಳಗೊಂಡಿದೆ. ಗರ್ಭಗೃಹದಲ್ಲಿ ಪಾಣಿಪೀಠದ ಮೇಲೆ ಕಾಳಿಯ ಶಿಲ್ಪವಿದೆ. ಶಿಲ್ಪದ ಕೈಗಳಲ್ಲಿ ಪಾಶ ಅಂಕುಷ, ಖಡ್ಗ, ತ್ರಿಶೂಲ ಮತ್ತು ಬಟ್ಟಲುಗಳನ್ನು ಹಿಡಿದಿದೆ. ದೇವಿಯ ಇಕ್ಕೆಲಗಳಲ್ಲಿ ಪರಿವಾರ ದೇವತೆಗಳಿವೆ. ಗರ್ಭಗೃಹದ ದಕ್ಷಿಣ ಗೋಡೆಯ ಗೂಡಿನಲ್ಲಿ ಪ್ರಾಚೀನ ಉಮಾಮಹೇಶ್ವರ ಶಿಲ್ಪವಿದೆ. ಈ ದೇವಾಲಯದಲ್ಲಿ ಕ್ರಿ.ಶ. ಸು ೧೫ನೇ ಶತಮಾನದ ಶಾಸನವಿದ್ದು ಅಸ್ಪಷ್ಟವಾಗಿದೆ.[೪೪]

೨. ಊರು : ಅಮರಗೋಳ ಸ್ಥಳ : ಊರಮಧ್ಯ

ಸ್ಮಾರಕ : ಬನಶಂಕರಿ ದೇವಾಲಯ ಧರ್ಮ : ಶಾಕ್ತ

ಕಾಲ : ಕ್ರಿ.ಶ. ೧೨ನೇ ಶತಮಾನ

ಹುಬ್ಬಳ್ಳಿ-ದಾರವಾಡ ಮುಖ್ಯ ರಸ್ತೆಯಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಮರಳುಶಿಲೆಯಿಂದ ಕಟ್ಟಿರುವ ಈ ದೇವಾಲಯ ಒಂದು ದ್ವಿಕೂಟ ರಚನೆಯಿಂದ ಕೂಡಿದ್ದಾಗಿದೆ. ಪೂರ್ವ ಮತ್ತು ದಕ್ಷಿಣಕ್ಕೆ ಮುಖಮಾಡಿದ ಗರ್ಭಗೃಹಗಳನ್ನು ಹೊಂದಿದೆ. ಇವುಗಳಿಗೆ ಹೊಂದಿಕೊಂಡಂತೆ ನವರಿಂಗವಿದೆ. ಅರ್ಧಮುಖಮಂಟಪ ಮತ್ತು ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಪಾಣಿಪೀಠದ ಮೇಲೆ ಭಗ್ನಗೊಂಡಿರುವ ಭೈರವ ಶಿಲ್ಪವನ್ನಿಡಲಾಗಿದೆ. ಇಲ್ಲಿನ ಕ್ರಿ.ಶ. ೧೧೨೦ರ ಶಾಸನವು ಸೌದೊರೆ ಜಕ್ಕರಸ ಎಂಬುವನು ಹಲಸಿಗೆ ನಾಡಿನ ಉಣಕಲ್ಲ ಕಂಪಣಕ್ಕೆ ಸೇರಿದ ಅಂಬರಗೋಳದಲ್ಲಿ ಕೇಶವ ಮತ್ತು ಭೈರವ ದೇವರ ಪ್ರತಿಷ್ಠಾಪನೆಯನ್ನು ಮಾಡಿಸಿದನೆಂದು ತಿಳಿಸುತ್ತದೆ. (ಕಲಬುರ್ಗಿ ದಾ.ಜಿ.ಶಾ.ಸೂ.) ಗರ್ಭಗೃಹ ಬಾಗಿಲುವಾಡಗಳಲ್ಲಿ ಅರ್ಧಕಂಬಗಳ ಮತ್ತು ಸೂಕ್ಷ್ಮಕೆತ್ತನೆಗಳ ಅಲಂಕರಣವನ್ನು ಕಾಣಬಹುದು. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದ್ದು ಮೇಲಿನ ಶಿಲಾಫಲಕದಲ್ಲಿ ಐದು ಮಂಟಪಗಳ ಸೂಕ್ಷ್ಮ ಉಬ್ಬುರಚನೆಗಳಿವೆ. ಮಧ್ಯದ ಮಂಟಪದಲ್ಲಿ ಗಣಪತಿಯ ಉಬ್ಬುಶಿಲ್ಪವಿದೆ ದಕ್ಷಿಣಾಭಿಮುಖವಾಗಿರುವ ಗರ್ಭಗೃಹದ ಬಾಗಿಲುವಾಡಗಳು ಸರಳ ಅಲಂಕರಣೆಯಿಂದ ಒಳಗೊಂಡಿದೆ. ದ್ವಾರದ ಮೇಲಿನ ಫಲಕದಲ್ಲಿ ಶಿಖರಗಳ ಅಲಂಕರಣವಿರುವ ಮಂಟಪಗಳ ಉಬ್ಬುರಚನೆಗಳು ಇದರ ವಿಶೇಷತೆಯಾಗಿದೆ. ನವರಂಗವು ಪೂರ್ವ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರ ಮಂಟಪಗಳಿಂದ ಕೂಡಿದೆ. ನವರಂಗದ ಸ್ತಂಭಗಳ ಮೇಲೆ ವಿಷ್ಣು, ನಟರಾಜ, ಗಣಪತಿ, ಭೈರವ, ಭೈರವಿ, ಶಿವ, ವರಾಹ, ಉಗ್ರನರಸಿಂಹ ಬೇತಾಳ, ಚಂದ್ರ ಮೊದಲಾದ ದೇವತೆಗಳ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ದೇವಾಲಯದ ಹೊರಭಿತ್ತಿ ಅಧಿಷ್ಠಾನದಿಂದ ಕೂಡಿದ್ದು ಅರ್ಧಕಂಬ, ಮತ್ತು ದೇವಕೋಷ್ಠಗಳ ಅಲಂಕರಣದಿಂದ ನಕ್ಷತ್ರಾಕಾರದ ತಲವಿನ್ಯಾಸವನ್ನು ಹೊಂದಿದೆ. ಗರ್ಭಗೃಹದ ಮೇಲೆ ಒರಟುಕಲ್ಲುಗಳನ್ನು ಸೇರಿಸಿ ರಚಿಸಿದ ಗೋಳಾಕಾರದ ಶಿಖರವಿದೆ.[೪೫]

ಟಿಪ್ಪಣಿಗಳು

೧. ಅಪೂರ್ಣ.ಕೂ.ಸ ದೇವಾಲಯವಾಸ್ತು ಪರಿಚಯ ೧೯೯೯ ಪು. ೧

೨. ಬಾ.ರಾ.ಗೋಪಾಲ್ ಕರ್ನಾಟಕದ ಕಲೆಗಳು ೨೦೦೩ ಸಂಪುಟ-೪, ಪು. ೩೭

೩. ಅದೇ ಪು. ೩೩

೪. ಗೋಪಾಲ್‌ರಾವ್ ಎಚ್.ಎಸ್. ಕಲ್ಯಾಣ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೧೯೯೩, ಪು. ೩

೫. ರಾಮಚಂದ್ರರಾವ್ ಎಸ್.ಕೆ. ಗುಡಿ ಜನರ ಜೀವನಾಡಿ ೧೯೯೪, ಪು. ೧

೬. ಕಡಪಟ್ಟಿ ಎಂ.ಎನ್. ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ, ೨೦೦೫, ಪು. ೩೭

೭. ಡಾ. ಸಿ. ಮಹಾದೇವ ಕರ್ನಾಟಕ ದೇವಾಲಯ ಕೋಶ ಧಾರವಾಡ ಜಿಲ್ಲೆ ೨೦೦೭, ಪು. ೧೫೭

೮. ಅದೇ, ಪು. ೧೫೮

೯. ಅದೇ, ಪು. ೧೬೦

೧೦. ಅದೇ, ಪು. ೧೬೧

೧೧. ಅದೇ, ಪು. ೧೬೨

೧೨. ರು.ಮ.ಷಡಕ್ಷರಯ್ಯ ಬಿ. ಜಯಮ್ಮ, ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು ೨೦೦೭, ಪು. ೨೨

೧೩. ಡಾ. ಸಿ. ಮಹಾದೇವ, ಅದೇ, ಪು. ೧೬೪

೧೪. ಅದೇ, ಪು. ೧೬೫

೧೫. ಅದೇ, ಪು. ೧೬೫

೧೬. ಅದೇ, ಪು. ೧೬೬

೧೭. ಅದೇ, ಪು. ೧೬೯

೧೮. ರು.ಮ.ಷಡಕ್ಷರಯ್ಯ ಬಿ. ಜಯಮ್ಮ ಅದೇ, ಪು. ೨೭

೧೯. ಸಿ.ಮಹಾದೇವ ಅದೇ ಪು. ೧೭೧

೨೦. ಅದೇ, ಪು. ೧೭೧

೨೧. ರು.ಮಷಡಕ್ಷರಯ್ಯ, ಬಿ. ಜಯಮ್ಮ, ಪೂರ್ವೋಕ್ತ, ಪು. ೨೯

೨೨. ಸಿ.ಮಹಾದೇವ, ಪೂರ್ವೋಕ್ತ ಪು. ೧೭೫

೨೩. ಅದೇ ಪು. ೧೭೫

೨೪. ಅದೇ, ಪು. ೧೭೬

೨೫. ಅದೇ ಪು. ೧೭೭

೨೬. ಅದೇ, ಪು. ೧೭೭

೨೭. ಅದೇ, ಪು. ೧೭೮

೨೮. ಅದೇ, ಪು. ೧೮೦

೨೯. ಅದೇ, ಪು. ೧೮೧

೩೦. ಅದೇ, ಪು. ೧೮೧

೩೧. ಅದೇ, ಪು. ೧೮೨

೩೨. ಅದೇ, ಪು. ೧೮೨

೩೩. ರು.ಮ.ಷಡಕ್ಷರಯ್ಯ ಬಿ. ಜಯಮ್ಮ, ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು

ಶಿಲ್ಪಗಳು ಪು. ೨೨

೩೪. ಸಿ.ಮಹಾದೇವ ಕರ್ನಾಟಕ ದೇವಾಲಯ ಕೋಶ ಧಾರವಾಡ ಜಿಲ್ಲೆ ಪು. ೧೮೫

೩೫. ಅದೇ, ಪು. ೧೮೫

೩೬. ಅದೇ, ಪು. ೧೮೬

೩೭. ಅದೇ, ಪು. ೧೮೬

೩೮. ಅದೇ, ಪು. ೧೮೭

೩೯. ರು.ಮ.ಷಡಕ್ಷರಯ್ಯ ಬಿ. ಜಯಮ್ಮ ಪೂರ್ವೋಕ್ತ ಪು. ೩೧

೪೦. ಮಿರ್ಜಿ ಅಣ್ಣರಾಯ ಜೈನಧರ್ಮ, ೧೯೯೭, ಪು. ೧೩-೨೧

೪೧. ಮಿರ್ಜಿ ಅಣ್ಣರಾಯ (ಅನು) ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ ೧೯೮೧, ಪು. ೩೭೧

೪೨. ಶೆಟ್ಟಿ ಎಸ್.ಡಿ. ತುಳುನಾಡಿನ ಜೈನಧರ್ಮ, ಒಂದು ಸಾಂಸ್ಕೃತಿಕ ಅಧ್ಯಯನ ೨೦೦೨, ಪು. ೧೯-೨೨

೪೩. ವಾಸುದೇವ ಬಡಿಗೇರ ಮತ್ತು ಇತರರು ಕರ್ನಾಟಕ ದೇವಾಲಯ ಕೋಶ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯, ಪು. ೧೨೨

೪೪. ಸಿ.ಮಹಾದೇವ, ಪೂರ್ವೋಕ್ತ ಪು. ೧೭೨

೪೫. ಅದೇ, ಪು. ೧೮೮

೪೬. ಅನಂತರಾಮು.ಕೆ., ಕವಿಬ್ರಹ್ಮಶಿವೆ ಅಧ್ಯಯನ ೧೯೯೧ ಪು. ೧೯೯

೪೭. ಅದೇ ಪೂರ್ವೋಕ್ತ ಪು. ೧೯೮

೪೮. ಸಿ.ಮಹಾದೇವ, ಪೂರ್ವೋಕ್ತ ಪು. ೧೮೮

೪೯. ಗೋಪಾಲ್ ಆರ್. (ಸಂ) ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ೨೦೦೭, ಪು. ೪೦೪

ಅಧ್ಯಾಯ ೫

ಮೂರ್ತಿಶಿಲ್ಪಗಳು

೫.೧. ಪೀಠಿಕೆ

೫.೨. ಬೌದ್ಧ ಮೂರ್ತಿಶಿಲ್ಪಗಳು

೫.೩. ಶೈವ ಮೂರ್ತಿಶಿಲ್ಪಗಳು

೫.೪. ವೈಷ್ಣವ ಮೂರ್ತಿಶಿಲ್ಪಗಳು

೫.೫. ಜೈನ ಮೂರ್ತಿಶಿಲ್ಪಗಳು.

ಅಧ್ಯಾಯ ೫

ಮೂರ್ತಿಶಿಲ್ಪಗಳು

೫.೧ ಪೀಠಿಕೆ

ಭಾರತ ದೇಶದಲ್ಲಿರುವಷ್ಟು ದೇವಾಲಯಗಳು ಮೂರ್ತಿಶಿಲ್ಪಗಳು ಬೇರೆ ಯಾವ ದೇಶಗಳಲ್ಲೂ ಕಂಡುಬರುವುದಿಲ್ಲ. ಪ್ರತಿಯೊಂದು ಗ್ರಾಮ ಹಳ್ಳಿಗಳಲ್ಲಿ ದೇವಾಲಯಗಳು ಅಥವಾ ಗುಡಿಗಳು ಇದ್ದೇ ಇರುತ್ತವೆ. ಪ್ರತಿಯೊಂದು ಹಳ್ಳಿಯಲ್ಲಿ ಕನಿಷ್ಟ ಪಕ್ಷ ಪೂಜೆ ಇಲ್ಲದೆ ಹಾಳು ಬಿದ್ದ ಚಿಕ್ಕ ಗುಡಿಯಾದರೂ ಇದ್ದು ಅದರಲ್ಲಿ ಸುಂದರವಾದ ಮೂರ್ತಿಶಿಲ್ಪಗಳು ಇದ್ದೇ ಇರುತ್ತವೆ. ಹಾಗಾಗಿ ಭಾರತೀಯರ ಜೀವನದಲ್ಲಿ ದೇವಾಲಯಗಳು, ಮತ್ತು ಮೂರ್ತಿಶಿಲ್ಪಗಳು ಅಷ್ಟರ ಮಟ್ಟಿಗೆ ಬೆರೆತುಹೋಗಿವೆ.

ಶಿಲ್ಪಗಳ ಉಗಮ

ಭಾರತದಲ್ಲಿ ದೇವಾಲಯಗಳ ನಿರ್ಮಾಣ ಎಂದು ಆರಂಭವಾಯಿತೋ ಅಂದಿನಿಂದಲೂ ದೇವತಾಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ನಡೆದುಕೊಂಡು ಬಂದಿತೆಂದು ಹೇಳಬಹುದು. ಯಾವುದೇ ಪಂಥದ ದೇವಾಲಯವಿರಲಿ ಆ ದೇವಾಲಯಕ್ಕೊಂದು ದೇವತಾಮೂರ್ತಿ ಇದ್ದೇ ಇರುತ್ತದೆ. ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಕ್ಕೆ ಒಂದಕ್ಕೊಂದು ಅವಿನಾಭಾವ ಸಂಬಂಧವಿದೆ. ವಾಸ್ತುಶಿಲ್ಪಕ್ಕಿಂತ ಮೂರ್ತಿಶಿಲ್ಪಕ್ಕೆ ಪ್ರಾಚೀನ ಇತಿಹಾಸವಿದೆ. ಶಿಲ್ಪ ದೇವಾಲಯ ಎಂದರೆ ದೇವರಿಗಾಗಿ ಅಥವಾ ಮೂರ್ತಿಗಾಗಿ ಕಟ್ಟಲ್ಪಟ್ಟ ಮಂದಿರ ಎಂದರ್ಥ[1] ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಸ್ಥೂಲವಾಗಿ 'ಮೂರ್ತಿಶಾಸ್ತ್ರ' ಎಂದು ಕರೆಯಬಹುದು. ಶಾಸ್ತ್ರೀಯ ನಿರೂಪಣೆಯ ಪ್ರಕಾರ ಮೂರ್ತಿಯ ಒಂದು ರೂಪ ಒಂಭತ್ತು ಅಂಗಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ ನ್ಯಾಸ (ರೂಪ ಸಂಯೋಜನೆ) ಅಲಂಕಾರ ಮುದ್ರಾ (ಹಸ್ತಮುದ್ರೆಗಳು) ಆಯುಧ, ವಾಹನ, ಉಪದೇವ (ಪ್ರಧಾನ ದೇವತೆಯ ಜೊತೆ ತೋರಿಸಲ್ಪಡುವ ಇತರೆ ಕಡಿಮೆ ಮಹತ್ವದ ದೇವತೆಗಳು)[2] ಈ ಶಾಸ್ತ್ರೀಯ ಸಂಪ್ರದಾಯಕ್ಕನು ಗುಣವಾಗಿ ದೇವತಾ ಮೂರ್ತಿಗಳು ರೂಪಗೊಳ್ಳುತ್ತವೆ.

ಪ್ರಸ್ತುತ ಹುಬ್ಬಳ್ಳಿ ತಾಲೂಕಿನಾದ್ಯಂತ ಕಂಡುಬರುವ ಮೂರ್ತಿಶಿಲ್ಪಗಳು ವಿವಿಧ ಅರಸುಮನೆತನಗಳಿಗೆ ಸಂಬಂಧಿಸಿದೆ. ಈ ಪ್ರದೇಶದ ಅತೀ ಪ್ರಾಚೀನ ಶಿಲ್ಪವೆಂದರೆ ಉಣಕಲ್ಲಿನಲ್ಲಿ ಕಂಡುಬರುವ ಶಿವಲಿಂಗ

ಎಂದು ಹೇಳಬಹುದಾಗಿದೆ. ಬಾದಾಮಿ ಚಲುಕ್ಯರ ಮತ್ತು ರಾಷ್ಟ್ರಕೂಟರ ಕಾಲದ ಶಿಲ್ಪಗಳು ವಿರಳವಾಗಿದ್ದು ಆದರೆ ಕಲ್ಯಾಣಿಚಾಲುಕ್ಯರ ಆಳ್ವಿಕೆಗೆ ಸಂಬಂಧಿಸಿದ ಶಿಲ್ಪಗಳು ಹೆಚ್ಚು ಪ್ರಚಲಿತದಲ್ಲಿವೆ. ಇದಲ್ಲದೆ ಕಲಚೂರಿ ವಿಜಯನಗರ ಅರಸರ ಮಹಾಮಂಡಳೇಶ್ವರ ಗೋವೆಯ ಕದಂಬರ ಶಿಲ್ಪಮೂರ್ತಿಗಳು ಈ ಪ್ರದೇಶದಲ್ಲಿವೆ. ಇವುಗಳನ್ನು ಬೌದ್ದ ಶಿಲ್ಪ, ಶೈವ, ವೈಷ್ಣವ, ಜೈನ ಮೂರ್ತಿಶಿಲ್ಪಗಳಾಗಿ ವಿಭಾಗಿಸಬಹುದು.

೫.೨ ಬೌದ್ಧ ಮೂರ್ತಿ ಶಿಲ್ಪಗಳು

ಕರ್ನಾಟಕದಲ್ಲಿ ಬೌದ್ಧ ಧರ್ಮವು ಪ್ರಾಚೀನಕಾಲದಲ್ಲಿ ಬಹಳ ಮಹತ್ವ ಸ್ಥಾನ ಪಡೆದಿತ್ತು. ಈ ಧರ್ಮದಲ್ಲಿ ಹೀನಯಾನ, ಮಹಾಯಾನ ಮತ್ತು ವಜ್ರಯಾನ ಎಂಬ ಮೂರು ಪಂಥಗಳನ್ನು ಕಾಣುತ್ತೇವೆ. ಮಹಾಯಾನ ಬೆಳೆಯುತ್ತಾ ನಂತರ ಕಾಲಘಟ್ಟದಲ್ಲಿ ಅಧಃಪತನವನ್ನು ಕಾಣಲು ಪ್ರಾರಂಭಿಸಿತು. ಬೌದ್ಧ ಭಿಕ್ಷುಗಳ ಸಂಘ ನಿಯಮಗಳಲ್ಲಿ ಶೈಥಿಲ್ಯ ತಲೆದೋರಿತು. ಅವರು ಸುಖೋಪಾಸಕರಾದರು ತಾಂತ್ರಿಕ ಪದ್ದತಿಗಳನ್ನು ಗುಟ್ಟಾಗಿ ರೂಢಿಸಿಕೊಂಡರು. ಹೀಗಾಗಿ ಈ ಪಂಥ ಕೇವಲ ಒಂದು ತಾಂತ್ರಿಕ ಧರ್ಮವಾಗಿ ಪರಿಣಮಿಸಿತು. ಮಹಾಯಾನವು ಅಳಿವಿನಂಚಿನಲ್ಲಿರುವಾಗ ವಜ್ರಯಾನ ಅಥವಾ ತಾಂತ್ರಿಕ ಬೌದ್ಧಧರ್ಮ ಎಂಬ ಶಾಖೆಯು ಬೆಳವಣಿಗೆಯಾಗಿ ಗುರುತಿಸಿಕೊಳ್ಳಲು ಪ್ರಾರಂಭಿಸಿತು.

ವಜ್ರಯಾನದಲ್ಲಿ ಹೆಣ್ಣಿಗೆ ಪ್ರಾತಿನಿದ್ಯ ಆದ್ದರಿಂದ ಧ್ಯಾನಿ ಬುದ್ದನಿಗೆ ಶಕ್ತಿ ದೇವತೆಗಳನ್ನು ಕಲ್ಪಿಸಿದರು. ಇವರಲ್ಲಿ ಆರ್ಯ ಅಥವಾ ತಾರಾ ಎಂಬ ಶಕ್ತಿ ದೇವತೆ ಪ್ರಮುಖಳು. ಈ ತಾರಾಭಿಗವತಿಯ ಶಿಲ್ಪಗಳು ಕರ್ನಾಟಕದ ಬೆಳ್ಳಿಗಾವೆ ಮತ್ತು ಕೋಳಿವಾಡ ಸ್ಥಳಗಳಲ್ಲಿ ಕಂಡುಬಂದಿವೆ. ಹಾಗೆಯೇ ಡಂಬಳದ ಶಾಸನದಲ್ಲಿ ತಾರಾದೇವಿಯ ಪ್ರಾರ್ಥನೆಯಿದ್ದುದು ತಿಳಿದುಬರುತ್ತದೆ.[೩]

ಪ್ರಸ್ತುತ ಅಧ್ಯಯನ ಪ್ರದೇಶವಾದ ಕೋಳಿವಾಡದಲ್ಲಿ ತಾರಾಭಗವತಿ ಶಿಲ್ಪವಿದೆ.

ಶಿಲ್ಪ : ತಾರಾಭಗವತಿ

ಸ್ಥಳ : ಕೋಳಿವಾಡ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಈ ಶಿಲ್ಪ ಪದ್ಮ ಪೀಠದ ಮೇಲಿದ್ದು ದೇವಿಯು ಲಲಿತಾಸನದಲ್ಲಿ ಕುಳಿತಿದ್ದಾಳೆ. ರುಂಡ ಕೈಗಳು ಭಗ್ನಗೊಂಡಿವೆ. ಕೊರಳಿನಲ್ಲಿ ಹಾರ, ಸರ, ಯಜ್ಞೋಪವೀತ, ಕಾಲ್ಗಡಗ, ಇನ್ನೂ ಮುಂತಾದ ಆಭರಣಗಳನ್ನು ಧರಿಸಿದ್ದಾಳೆ. ಹಾಗೆಯೇ ಇವಳ ಪಾದಪೀಠದಲ್ಲಿ ಶಾಸನದ. ಪ್ರಸ್ತುತ ಈ ಮೂರ್ತಿಶಿಲ್ಪ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿದೆ.[೪]

೨. ಶಿಲ್ಪ : ಬೌದ್ದ ಆಯಕ ಸ್ಥಂಭ

ಸ್ಥಳ : ಕೋಳಿವಾಡ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಬಸ್‌ನಿಲ್ದಾಣದ ಬಳಿ ಒಂದು ಬೌದ್ಧ ಆಯಕ ಸ್ತಂಭವಿದ್ದು ಇಲ್ಲಿನ ಮಧ್ಯಯುಗೀನ ಕಾಲದ ಬೌದ್ಧ ವಿಹಾರಕ್ಕೆ ಈ ಸ್ತಂಭ ಸೇರಿದ್ದಾಗಿದೆ. ಈ ಸ್ತಂಭದ ನಾಲ್ಕು ಮುಖಗಳಲ್ಲಿ ಆನೆ, ಕುದುರೆ, ಬುದ್ಧ ಮುಂತಾದ ಚಿತ್ರಗಳಿರುವುದರಿಂದ ಇದು ಬೌದ್ಧ ವಿಹಾರ ಸ್ತಂಭವೆಂದು ತಿಳಿದುಬರುತ್ತದೆ. ಇದಲ್ಲದೆ ಈ ವಿಹಾರಕಟ್ಟಡಗಳ ಇನ್ನಿತರ ಪುರಾವೆಗಳು ಈ ನೆಲದಲ್ಲಿ ಹೂತಿರುವ ಸಾಧ್ಯತೆಯಿದೆ.[೫]

೫.೩ ಶೈವಮೂರ್ತಿ ಶಿಲ್ಪಗಳು

ಶೈವ ಶಿಲ್ಪಗಳಲ್ಲಿ ಪ್ರಮುಖವಾಗಿ ಶಿವಲಿಂಗ, ಭೈರವ, ವೀರಭದ್ರ, ಕಾರ್ತಿಕೇಯ, ಶಿಲ್ಪಗಳು ಕಂಡುಬರುತ್ತವೆ. ವೈಷ್ಣವ ಶಿಲ್ಪಗಳಲ್ಲಿ ವಿಷ್ಣು, ಕೇಶವ, ಮಧುಸೂಧನ, ಅನಂತಶಯನ, ನರಸಿಂಹ, ಗೋಪಾಲಕೃಷ್ಣ, ಹನುಮಂತ ದತ್ತಾತ್ರಯನ ಶಿಲ್ಪ ಹೆಚ್ಚಿವೆ. ಇನ್ನು ಜೈನಶಿಲ್ಪಗಳಲ್ಲಿ ಆದಿನಾಥ, ಸುವಂತಿನಾಥ, ಸುಪಾಶ್ವನಾಥ, ಚಂದ್ರನಾಥ, ಶಾಂತಿನಾಥ, ಪಾರ್ಶ್ವನಾಥತೀರ್ಥಂಕರ ಶಿಲ್ಪಗಳನ್ನ ಕಾಣಬಹುದು. ಬೌದ್ಧ ಶಿಲ್ಪಗಳಲ್ಲಿ ತಾರಾಭಗವತಿ ಯಕ್ಷ ಶಿಲ್ಪಗಳನ್ನು ಗಮನಿಸಬಹುದು.

ಶಿವಲಿಂಗಗಳು

ಹೆಚ್ಚಿನ ಮಟ್ಟಿಗೆ ಶಿವನನ್ನು ಲಿಂಗರೂಪದಲ್ಲಿಯೇ ಹೆಚ್ಚಾಗಿ ಪೂಜಿಸಲಾಗುತ್ತದೆ. ಪ್ರಾಚೀನ ಲಿಂಗ ರೂಪದ ಸ್ತಂಭಗಳಿದ್ದು ಅವುಗಳಿಗೆ ಯಾವುದೇ ಪೀಠ. ಪಾಣಿಪಟ್ಟಿಲು ಇರುವುದಿಲ್ಲ. ನಂತರ ಕಾಲದಲ್ಲಿ ಲಿಂಗಗಳಿಗೆ ಪೀಠ, ಪಾಣಿಪಟ್ಟಿಲು ಮತ್ತು ಜಲಹರಿಗಳನ್ನು ಸೇರಿಸಲು ಪ್ರಾರಂಭವಾಯಿತು.

ಪ್ರಾಚೀನ ಲಿಂಗರೂಪದ ಸ್ತಂಭಗಳಿದ್ದು ಅವುಗಳಿಗೆ ಯಾವುದೇ ಪೀಠ ಪಾಣಿಪಟ್ಟಿಲು ಇರುವುದಿಲ್ಲ ನಂತರ ಕಾಲದಲ್ಲಿ ಲಿಂಗಗಳಿಗೆ ಪೀಠ ಪಾಣಿಪಟ್ಟಿಲು ಮತ್ತು ಜಲಹರಿಗಳನ್ನು ಸೇರಿಸಲು ಪ್ರಾರಂಭವಾಯಿತು.

ಶಿವಲಿಂಗಗಳು ಕಂಬಗಳಂತೇ ಇದ್ದು ಅವುಗಳಲ್ಲಿ ಬ್ರಹ್ಮ, ವಿಷ್ಣು, ಮತ್ತು ರುದ್ರಭಾಗಗಳಿರುತ್ತವೆ. ವಿಷ್ಣು ಮತ್ತು ರುದ್ರಭಾಗಗಳು ಸಮಭಾಗಳಾಗಿದ್ದು, ಲಿಂಗದ ಬ್ರಹ್ಮಭಾಗದಲ್ಲಿ ನಾಲ್ಕು ಮುಖ, ವಿಷ್ಣುಭಾಗದಲ್ಲಿ ಎಂಟು ಭಾಗ ಮತ್ತು ರುದ್ರಭಾಗವು ವೃತ್ತಾಕಾರವಾಗಿರುತ್ತದೆ. ರುದ್ರಭಾಗವೇ ಪೂಜಾಭಾಗವಾಗಿದೆ. ಈ ಪೂಜಾಭಾಗದಲ್ಲಿ ಕೆಲವೊಮ್ಮೆ ಬ್ರಹ್ಮಸೂತ್ರವನ್ನು ಅಳವಡಿಸಲಾಗಿರುತ್ತದೆ. ೩ ಲಿಂಗದ ಮೇಲ್ಭಾಗ ಅರ್ಧಚಂದ್ರಾಕೃತಿಯಲ್ಲಿರುತ್ತದೆ. ಈ ರೀತಿಯ ಶಿವಲಿಂಗಗಳು ಮಲ್ಲಿಗವಾಡ, ನೂಲ್ವಿ, ಬಾಡ, ಗ್ರಾಮಗಳಲ್ಲಿ ಇವೆ. ಇವೆಲ್ಲವೂ ಒಂದೇ ಶೈಲಿಯಲ್ಲಿರುವುದು ವಿಶೇಷತೆಯಾಗಿದೆ. ಇನ್ನು ಕೆಲವು ಶಿವಲಿಂಗದ ಪೀಠಭಾಗ ತೀರ್ಥದ್ವಾರವನ್ನು ಹೊಂದಿರುತ್ತದೆ. ಈ ಶಿವಲಿಂಗಗಳಿಗೆ ಜಲಹರಿಗಳು ಇರುವುದಿಲ್ಲ. ಲಿಂಗದ ಬಹ್ಮಭಾಗ ಪೀಠದಲ್ಲಿ ಸೇರಿಕೊಂಡಿರುತ್ತವೆ. ಕೆಲವು ಶಿವಲಿಂಗದ ಮೇಲೆ ಬ್ರಹ್ಮಸೂತ್ರ ಇರುವುದಿಲ್ಲ ಆದರೆ ಬ್ರಹ್ಮಸೂತ್ರವಿರುವ ಶಿವಲಿಂಗಗಳು ಅಮರಗೋಳ ಕುರಡಿಕೇರಿ ಇನ್ನು ಮುಂತಾದ ಸ್ಥಳಗಳಲ್ಲಿವೆ.

ಮುಖಲಿಂಗಗಳು

ಪ್ರಸ್ತುತ ಅಧ್ಯಯನದಲ್ಲಿ ಶಿರುಗುಪ್ಪಿಯ ಒಂದು ಚಿಕ್ಕ ಗುಡಿಯಲ್ಲಿ ಪಂಚಮುಖವುಳ್ಳ ಒಂದು ಶಿವಲಿಂಗವಿದೆ. ಇದೇ ರೀತಿ ಉಣಕಲ್ಲಿನ ಚಂದ್ರಮೌಳೇಶ್ವರ ದೇವಾಲಯದಲ್ಲಿ ಚತುಮುರ್ಖಲಿಂಗವಿದ್ದು,

ಇಲ್ಲಿ ಚೌಕಾಕಾರದ ಪೀಠ ಪೀಠಕ್ಕೆ ವೃತ್ತಾಕಾರದ ಜಲಹರಿ ಇದೆ. ನಾಳದಲ್ಲಿ ನಾಲ್ಕು ದಿಕ್ಕಿಗೆ ಶಿವನ ಮುಖಭಾಗವನ್ನು ಕಂಡರಿಸಲಾಗಿದೆ. ಮೇಲ್ಭಾಗದಲ್ಲಿ ಶಿವಲಿಂಗದ ಕಿರುಭಾಗವಿದೆ. ಶಿರಗುಪ್ಪಿ ಮತ್ತು ಉಣಕಲ್ಲಿನ ಚಂದ್ರಮೌಳೇಶ್ವರದಲ್ಲಿರುವ ಈ ಮುಖಲಿಂಗಗಳು ಬಹು ಅಪರೂಪವಾಗಿದ್ದು ಈ ಪ್ರದೇಶದ ವಿಶೇಷತೆಯಾಗಿದೆ.

ನಂದಿಶಿಲ್ಪಗಳು

ಶೈವ ಧರ್ಮದಲ್ಲಿ ಶಿವನಿಗೆ ಪ್ರಾತಿನಿದ್ಯ ಕಲ್ಪಿಸಿದಂತೆ ಅಷ್ಟೇ ಮಹತ್ವವನ್ನು ಶಿವನ ವಾಹನವಾದ ನಂದಿಗೂ ನೀಡಲಾಗಿದೆ. ಕೆಲವೆಡೆ ಶಿವನ ಹೊರತಾಗಿ ನಂದಿಯನ್ನು ಪ್ರತ್ಯೇಖವಾಗಿ ಪೂಜಿಸುವುದಕ್ಕೆ ಉದಾಹರಣೆ ಇವೆ. ಪ್ರತಿ ಶೈವಧರ್ಮದೇವಾಲಯಗಳಲ್ಲಿ ಗರ್ಭಗ್ರಹದಲ್ಲಿರುವ ಶಿವಲಿಂಗಕ್ಕೆ ಅಭಿಮುಖವಾಗಿ ನಂದಿಯನ್ನು ಅಂತರಾಳದಲ್ಲಿ ಅಥವಾ ಸಭಾಮಂಟಪದಲ್ಲಿ ಪ್ರತಿಷ್ಠಾಪಿಸಲಾಗುತ್ತಿದೆ. ಇವುಗಳನ್ನು ಕೆಲವೊಮ್ಮೆ ಗರ್ಭಗೃಹದಲ್ಲಿ ಪ್ರಧಾನ ದೇವರಾಗಿಯೂ ಕಾಣುತ್ತೇವೆ.

ಭೈರವ

ಭೈರವನೆಂದರೆ ಭಯಾನಕ ಭೂತ ಪ್ರೇತಗಳ ಉಚ್ಚಾಟನೆಗೆಂದು ಭೈರವನನ್ನು ಇಂದಿಗೂ ಪೂಜಿಸಲಾಗುತ್ತಿದೆ. ಭೈರವ ಒಂದು ಕೈಯಲ್ಲಿ ಕಪಾಲಿಯನ್ನು ಹಿಡಿದು ದಂಡಪಾಣಿಯಾಗಿ ಹಾವನ್ನು ಯಜ್ಞೋಪವಿತವಾಗಿ ಧರಿಸಿರುವ ಉದಾಹರಣೆಗಳು ಇಲ್ಲಿವೆ. ಸಾಹಿತ್ಯದಲ್ಲಿ ಮತ್ತು ವಿಷ್ಣುಧರ್ಮೋತ್ತರ ಪುರಾಣದಲ್ಲಿ ಭೈರವನ ಉಲ್ಲೇಖವಿದೆ. ಮೂರ್ತಿಶಿಲ್ಪದ ವೈಶಿಷ್ಟತೆಯ ದೃಷ್ಟಿಯಿಂದ ಇದು ಉಬ್ಬಿದ ಹೊಟ್ಟೆ ವರ್ತುಲಾಕಾರದ ಹಳದಿಕಣ್ಣು, ರುಂಡಮಾಲೆ, ಸರ್ಪವನ್ನು ಹಿಡಿದಿರುತ್ತಾನೆ. ಬಹಳ ವೈಶಿಷ್ಟ್ಯತೆಯಿಂದ ಕೂಡಿದ್ದು. ಪ್ರಸ್ತುತ ಅಧ್ಯಯನ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಾದ ನೂಲ್ವಿ, ಸುಳ್ಳ, ಬ್ಯಾಹಟ್ಟಿ, ಅಮರಗೋಳ, ಛಬ್ಬಿ, ಇತ್ತೀಚೆಗೆ ಮಂಟೂರು ಗ್ರಾಮದಲ್ಲಿ ಗುರ್ತಿಸಬಹುದಾಗಿದೆ.

೧. ಹೆಸರು - ಭೈರವ
ಸ್ಥಳ - ಶಿರಗುಪ್ಪಿ
ಜಿಲ್ಲೆ - ಧಾರವಾಡ
ಕಾಲ - ಕ್ರಿ.ಶ. ೧೨ನೇ ಶತಮಾನ
ವಸ್ತು - ಕಪ್ಪುಶಿಲೆ

ಭೈರವನು ತ್ರಿಭಂಗಿಯಲ್ಲಿ ನಗ್ನನಾಗಿ ನಿಂತಿದ್ದು, ಅಷ್ಟಭುಜಗಳನ್ನು ಹೊಂದಿರುವ ಈತನ ಕೈಗಳಲ್ಲಿ, ಖಡ್ಗ, ಕೊಡಲಿ, ತ್ರಿಶೂಲ, ಡಮರು, ಕಪಾಲದೊಂದಿಗೆ ರುಂಡವನ್ನು ಹಿಡಿದಿದ್ದಾನೆ. ತಲೆಯಲ್ಲಿ ಕೂದಲೆಲ್ಲಾ ಗಂಟು ಗಂಟಾಗಿ ಉದ್ದವಾಗಿ ಹರಡಿವೆ. ಕೊರಳಲ್ಲಿ ಉದ್ದನೆಯ ರುಂಡಮಾಲೆ ಇದೆ. ಅಷ್ಟೇ ಅಲ್ಲದೇ ಹುಬ್ಬಳ್ಳಿಯ ಬೆಂಗೇರಿಯಲ್ಲಿ ಎಸ್.ವ್ಹಿ. ಪಾಡಿಗಾರ ಅವರು ಪತ್ತೆ ಹಚ್ಚಿದ ಭೈರವನ ಶಿಲ್ಪ ತುಂಬಾ ಅಪರೂಪದ್ದಾಗಿದೆ. ಇಲ್ಲಿ ಭೈರವ ನಗ್ನವಾಗಿ ಪೀಠದ ಮೇಲೆ ಆನೇಕನಾಗಿರುವಂತೆ ತೋರಿಸಲಾಗಿದೆ. ಈತನ ಅಲಂಕರಣ ವಿಶೇಷ ಗಮನ ಸೆಳೆಯುತ್ತದೆ. ಈ ರೀತಿ ಕುಳಿತ ಭೈರವನ ಶಿಲ್ಪ ಅಪರೂಪವಾಗಿದ್ದು, ಇದರ ಕಾಲಮಾನ ಕ್ರಿ.ಶ. ೧೨ನೇ ಶತಮಾನವೆಂದು ಈ ಶಿಲ್ಪ ಪುರಾತತ್ವ ಮತ್ತು

ಪ್ರಾಚ್ಯವಸ್ತು ಸಂಗ್ರಹಾಲಯ ಧಾರವಾಡದಲ್ಲಿದೆ ಕೆಲವು ಶಿಲ್ಪಗಳಲ್ಲಿ ಭೈರವನಿಗೆ ತುರುಚಿನ ಅಲಂಕರಣವಿರುತ್ತದೆ. ಈ ಮೂರ್ತಿ ಶಿಲ್ಪಕ್ಕೆ ನಾಗಕುಟಿಲಗಳಿವೆ. ಸೊಂಟಕ್ಕೆ ಗೆಜ್ಜೆಸರ, ಹಾಗೆ ಲತಾಸುರಳಿಳ ಅಲಂಕರಣವಿದೆ. ಹಾಗೆ ಎಡಗೈಯಲ್ಲಿ ಸ್ತಂಭವನ್ನು ಹಿಡಿದಿರುವ ಶಿಲ್ಪವನ್ನು ಬೆಟದೂರು ನವಿಲೂರಿನಲ್ಲಿ ನಾವು ಗುರ್ತಿಸಬಹುದಾಗಿದೆ. ಉಪವೀತ, ಕಂಠಿಹಾರ, ಉದರಬಂಧ, ನಾಗಬಂಧ, ಕಂಕಣ, ಪಾದರಸ ಮುಂತಾದ ಅಭರಣಗಳನ್ನಧರಿಸಿದ್ದಾರೆ. ಭೈರವನ ಬಲಬದಿಯಲ್ಲಿ ನಾಗರಾಜನ ಚಿತ್ರವಿರುವುದು ವಿಶೇಷವಾಗಿದೆ. ಅದರ ತಲೆಯ ಮೇಲೆ ಏಳು ಹೆಡೆಯ ಸರ್ಪತನ್ನ ಹೆಡೆ ಬಿಚ್ಚಿದೆ ಇವನ ಕಾಲುಗಳು ಸರ್ಪರೂಪದಲ್ಲಿದ್ದು ದೇಹ ಮನುಷ ರೂಪದಲ್ಲಿದೆ. ತಲೆಯ ಭಾಗ ಎರಡು ರೂಪದಲ್ಲಿ ಚಿತ್ರಿಸಿರುವುದು ವಿಶೇಷವೆನಿಸಿದೆ. ಭೈರವನ ಎಡಬದಿಗೆ ನೃತ್ಯ ಸ್ತ್ರೀ ಅದರ ಬದಿಗೆ ನಾಯಿ ಭೈರವನ ಹಿಡಿದಿರುವ ರುಂಡದಿಂದ ಬೀಳುತ್ತಿರುವ ರಕ್ತವನ್ನು ನಾಯಿಯೊಂದು ಹಾರಿ ನೆಕ್ಕುತ್ತಿರುವಂತೆ ಇದೆ. ಶಿಲ್ಪದ ಪೀಠದಲ್ಲಿ ನಂದಿ, ನರಿ, ಭೂತ, ಪ್ರೇತಗಳಿವೆ. ಈತನ ಲಾಂಛನ ಚೇಳು. ಇದನ್ನು ರೂಪಮಂಡನ ಉಲ್ಲೇಖಿಸುತ್ತದೆ.[೬]

ವೀರಭದ್ರ

ಶಿವನ ಒಂದು ರೂಪವೇ ವೀರಭದ್ರನಾಗಿದೆ. ದಕ್ಷನು ಯಜ್ಞವನ್ನು ಮಾಡಲು ನಿರ್ಧರಿಸಿ ತನ್ನ ಮಗಳಾದ ದಾಕ್ಷಾಯಣಿ ಮತ್ತು ಅಳಿಯ ಶಿವನನ್ನು ಮಾತ್ರ ಕರೆಯದೆ ಉಳಿದವರೆನ್ನೆಲ್ಲರನ್ನು ಕರೆದನು. ಅದರೂ ದಾಕ್ಷಾಯಣಿ ಯಜ್ಞಮಂಟಪಕ್ಕೆ ಹೋದಳು. ಅಲ್ಲಿ ಅವಳ ತಂದೆ ಅವಳನ್ನು ಅಪಮಾನಗೊಳಿಸಿದ್ದಕ್ಕಾಗಿ ಆಕೆ ಯಜ್ಞಕುಂಡದಲ್ಲಿ ಬಿದ್ದು ಪ್ರಾಣಬಿಟ್ಟಳು. ಇದರಿಂದ ಸಿಟ್ಟಿಗೆದ್ದ ಶಿವನು ತನ್ನ ಜಡೆಯನ್ನು ನೆಲಕ್ಕಪ್ಪಳಿಸಲು ವೀರಭದ್ರನು ಹುಟ್ಟಿಕೊಂಡನು. ಹಾಗೆಯೇ ದಕ್ಷನ ತಲೆಯನ್ನು ಕಡೆದು ಅವನ ಮಾನವನ್ನು ಧ್ವಂಸಮಾಡಿದನೆಂದು ಕೂರ್ಮ ಪುರಾಣ[೭] ತಿಳಿಸುತ್ತದೆ.

ಹೀಗೆ ಶಿವನಿಂದ ಉದ್ಭವಗೊಂಡ ವೀರಭದ್ರ ಸಾವಿರ ತಲೆಗಳು ಸಾವಿರ ಕಣ್ಣುಗಳನ್ನು ಬಲಿಷ್ಟ ಬುಜಗಳನ್ನು ಸಾವಿರ ಕೈಗಳನ್ನು ಹಾಗೆಯೆ ಬೆಂಕಿಯಂತೆ ಪ್ರಜ್ವಲಿಸುತ್ತಿದ್ದನು. ಇವನ ಕೈಗಳಲ್ಲಿ ಶಂಖ, ಚಕ್ರ ಮತ್ತು ಬಿಲ್ಲುಗಳನ್ನು ಹಿಡಿದುಕೊಂಡಿರುತ್ತಾನೆ.

ಶೃತವನಿಧಿಯ ಪ್ರಕಾರ ನಾಲ್ಕು ಭುಜಗಳಿದ್ದು ಕೈಯಲ್ಲಿ ಬಿಲ್ಲು ಗದಾ, ಖಡ್ಗ, ಕೊರಳಲ್ಲಿ ರುಂಡಮಾಲೆ ಕಾಲಲ್ಲಿ ಪಾದರಾಕ್ಷಿಗಳನ್ನು ಧರಿಸಿರುತ್ತಾನೆ. ಈತನ ಎಡಬದಿಯಲ್ಲಿ ಭದ್ರಕಾಳಿ ಬಲಬದಿಯಲ್ಲಿ ಟಗರಿನ ತಲೆ ಹೊಂದಿದ ದಕ್ಷನಿರುತ್ತಾನೆ. ಕೈಗಳು ಅಂಜಲಿ ಮುದ್ರೆಯಲ್ಲಿರುತ್ತವೆ. ಕರಣಾಗಮನದಲ್ಲಿ ಉಲ್ಲೇಖಿಸುವಂತೆ ಇವನು ಚತುರ್ಭುಜಧಾರಿಯಾಗಿದ್ದು ಮೂರು ಕಣ್ಣುಳ್ಳ ಜಟಾಮುಕುಟ ಧಾರಿಯಾಗಿದ್ದು ಕೊರಳಲ್ಲಿ ಹಾರ ರುಂಡಮಾಲೆ ಹಾವಿನಿಂದ ಮಾಡಿದ ಯಜ್ಞೋಪವೀತ, ನಾಗಬಂಧ ಧರಿಸಿರುತ್ತಾನೆ. ಕಾಲಿನಲ್ಲಿ ಪಾದರಾಕ್ಷಿ ಧರಿಸಿದ್ದು ಈತನ ಖಡ್ಗ ಕೆಂಪು, ಮುಖಚರ್ಯ ಭಯಾನಕವಾಗಿರುತ್ತದೆ. ಕೈಗಳಲ್ಲಿ ಖಡ್ಗ ಖೇಟಕ ಧನಸ್ಸು ಮತ್ತು ಬಾಣಗಳಿರುತ್ತವೆ.

ಪ್ರಸ್ತುತ ಅದ್ಯಯನದಲ್ಲಿ ಅಮರಗೋಳ, ವರೂರು, ಸುಳ್ಳ, ಅದರಗುಂಚಿ, ಶಿರೂರು, ಬೆಳವಟಗಿ, ಇನ್ನೂ ಮುಂತಾದ ಸ್ಥಳಗಳಲ್ಲಿ ಈ ರೀತಿಯ ಶಿಲ್ಪಗಳು ಕಂಡುಬಂದಿದ್ದು. ಪ್ರಸ್ತುತ ವೀರಭದ್ರನ

ಶಿಲ್ಪಗಳು ಸ್ಥಾನಿಕ ಅಥವಾ ಆಸೀನ ಭಂಗಿಯಲ್ಲಿರುತ್ತವೆ. ಇವು ಸುಮಾರು ಕ್ರಿ.ಶ. ೧೨ನೇ ಶತಮಾನದಲ್ಲಿ ಕಂಡುಬಂದಿವೆಯಾದರೂ ಹೆಚ್ಚಿನ ಮಟ್ಟಿಗೆ ಕ್ರಿ.ಶ. ೧೫-೧೬ನೇ ಶತಮಾನಕ್ಕೆ ಸೇರಿದ ಶಿಲ್ಪಗಳೇ ಹೆಚ್ಚಾಗಿವೆ.

೧. ಮೂರ್ತಿ ಹೆಸರು - ವೀರಭದ್ರ

ಸ್ಥಳ - ಅಮರಗೋಳ

ಜಿಲ್ಲೆ - ಧಾರವಾಡ

ಕಾಲ - ಕ್ರಿ.ಶ. ೧೬ನೇ ಶತಮಾನ

ವಸ್ತು - ಕಪ್ಪುಶಿಲೆ

ಶಿಲ್ಪವು ಕಲ್ಮೇಶ್ವರದೇವಾಲಯದ ಬಳಿ ಇದ್ದು ಇದೊಂದು ಭಗ್ನ ಶಿಲ್ಪವಾಗಿದೆ. ವೀರಭದ್ರನ ತೊಡೆಯ ಭಾಗದವರೆಗೆ ಶಿಲ್ಪ ಭಗ್ನಗೊಂಡಿದ್ದು. ತ್ರಿಭಂಗಿಯಲ್ಲಿ ನಿಂತಿರುವ ವೀರಭದ್ರ ಚತುರ್ಭುಜಧಾರಿ ಯಾಗಿದ್ದಾನೆ. ತನ್ನ ಕೈಗಳಲ್ಲಿ ಕತ್ತಿ, ಬಿಲ್ಲು, ಬಾಣ, ಗುರಾಣಿ ಆಯುಧಗಳನ್ನು ಹಿಡಿದಿದ್ದಾನೆ. ಸೊಂಟದಲ್ಲಿ ಕಟಬಂಧಇದೆ. ಕಿರೀಟ, ಪದಕ, ಯಜ್ಞೋಪವೀತ ಧರಿಸಿದ್ದಾನೆ.[೮]

೨. ಶಿಲ್ಪ : ವೀರಭದ್ರ

ಸ್ಥಳ : ನೂಲ್ವಿ

ಜಿಲ್ಲೆ : ಧಾರವಾಡ

ಕಾಲಮಾನ : ಕ್ರಿ.ಶ. ೧೧ನೇ ಶತಮಾನ

ವಸ್ತು : ಕಪ್ಪುಶಿಲೆ

ವೀರಭದ್ರನ ವಿಗ್ರಹವು ಊರಿನ ವೀರಣ್ಣನ ಗುಡಿಯ ಗರ್ಭಗೃಹದಲ್ಲಿದೆ. ವೀರಭದ್ರನ ವಿಗ್ರಹವನ್ನು ಸಿಂಹಗಳುಳ್ಳ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಚತುರ್ಭುಜಧಾರಿಯಾದ ವೀರಭದ್ರನ ಕೈಗಳಲ್ಲಿ ಕತ್ತಿ, ಬಾಣ, ಗುರಾಣಿಗಳನ್ನು ಹಿಡಿದಿದ್ದಾನೆ. ಈ ಮೂರ್ತಿಶಿಲ್ಪ ವಿವಿಧ ವಸ್ತ್ರಾಭರಣಗಳನ್ನು ಧರಿಸಿದ್ದು ಪೀಠದಲ್ಲಿ ಸಿಂಹಗಳಿಂದ ಕೂಡಿದ್ದು ಇದೊಂದು ಜಿನಪೀಠವೆನ್ನಬಹುದಾಗಿದೆ.[೯]

೩. ಶಿಲ್ಪ : ವೀರಭದ್ರ

ಸ್ಥಳ : ವರೂರು

ಜಿಲ್ಲೆ : ಧಾರವಾಡ

ಕಾಲಮಾನ : ಕ್ರಿ.ಶ. ೧೬ನೇ ಶತಮಾನ

ವಸ್ತು : ಕಪ್ಪುಶಿಲೆ

ವೀರಭದ್ರನು ಚತುರ್ಭುಜಧಾರಿಯಾಗಿ ತ್ರಿಭಂಗಿಯಲ್ಲಿ ನಿಂತಿದ್ದಾನೆ. ಮೊದಲನೇ ಕೈಯಲ್ಲಿ ಹಾವೊಂದನ್ನ ಹಿಡಿದಿದ್ದಾನೆ. ನಂತರ ಕೈಗಳಲ್ಲಿ ಬಾಣ ಬಿಲ್ಲುಗಳನ್ನು ಹಿಡಿದಿದ್ದಾನೆ. ನಾಲ್ಕು ಕೈ ಭಗ್ನಗೊಂಡಿದೆ. ಕಿರೀಟ ಹಾರ, ಸರ, ಕೇಯೂರ, ಯಜ್ಞೋಪವೀತ, ಕಂಕಣ, ಕಿಂಕಣಿ, ನಾಗಬಂಧ ಮುಂತಾದ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ.[೧೦]

ಗಣಪತಿ

ಗಣಪತಿಯು ಗಜಮುಖನಾದ ಇತಿಹಾಸ ಅಪೂರ್ವವಾಗಿದ್ದು ಎಲ್ಲರಿಗೂ ತಿಳಿದೇ ಇದೆ. ಗಣೇಶನ ಹುಟ್ಟಿನ ಬಗ್ಗೆ ಅನೇಕ ದಂತ ಕಥೆಗಳಿವೆ. ಇವನು ಶಿವಪಾರ್ವತಿಯರ ಮಗನಾಗಿದ್ದು, ಪುರಾಣಗಳಲ್ಲಿ, ಆಗಮಶಾಸ್ತ್ರಗಳಲ್ಲಿ, ಬ್ರಾಹ್ಮಣ ಸೂತ್ರಗಳಲ್ಲಿ, ಧರ್ಮಶಾಸ್ತ್ರಗಳಲ್ಲಿ, ಈ ಮಹಾಪುರುಷನ ಮಹಿಮೆಯನ್ನು ತಿಳಿಸುವಲ್ಲಿ ಇವು ಆಕರ ಗ್ರಂಥಗಳಾಗಿವೆ. ವೈದಿಕ ಸಂಪ್ರದಾಯದ ಹಲವು ದೇವತೆಗಳಂತೆ ಹಿಂದೂಗಳ ಅಧಿದೇವಗಣದಲ್ಲಿ ಗಣೇಶನೂ ಒಬ್ಬನಾಗಿದ್ದಾನೆ. ರುದ್ರನ ಪುತ್ರ ವಿನಾಯಕನಾಗಿ ಮೆರೆದು ಬುದ್ಧಿಶೀಲ ಬೃಹಸ್ಪತಿಯಾಗಿದ್ದನು. ವೈದಿಕ ದೇವತೆಗಳೇ ಪುರಾಣಕಾಲದ ಗಜಮುಖ, ವಿನಾಯಕ ಎಂಬುದು ವಿದ್ವಾಂಸರ ಅಭಿಮತವಾಗಿದೆ.[೧೧] ಗಣೇಶನನ್ನು ಪ್ರಾಚೀನ ಕಾಲದಿಂದಲೂ ಇಲ್ಲಿಯವರೆಗೂ ಎಲ್ಲಾ ಮತದವರೂ ಆರಾಧಿಸುತ್ತಾ ಬಂದಿರುವದನ್ನು ನಾವು ಗುರ್ತಿಸಬಹುದಾಗಿದೆ.

ಹೆಚ್ಚಾಗಿ ಗಣೇಶನ ಸ್ಥಾನಿಕ ಶಿಲ್ಪಗಳು ಸಮಭಂಗಿ, ದ್ವಿಭಂಗಿ, ತ್ರಿಭಂಗಿಗಳಲ್ಲಿ ಇರುತ್ತವೆ. ಈತನಿಗೆ ತಲೆ ಆನೆಯ ತಲೆ, ಮೊರದಂತಹ ಕಿವಿಗಳಿರುತ್ತವೆ. ಸೊಂಡಿಲು ಎಡಗಡೆ ಅಥವಾ ಬಲಗಡೆ ತಿರುಗಿರುತ್ತದೆ. ಹೆಚ್ಚಿನ ಮಟ್ಟಿಗೆ ಉದಾ: ಮೋರೆಗಣಪತಿ ಮೂರ್ತಿಗಳಾಗಿವೆ. ಈತನಿಗೆ ನಾಲ್ಕು, ಎಂಟು, ಹನ್ನೆರಡು ಅಥವಾ ಹದಿನಾರು ಕೈಗಳು ಇರುತ್ತವೆ. ಈತನ ಕೈಯಲ್ಲಿ ಮೋದಕ ಅಂಕುಶ, ಪಾಶ, ಪರಶು, ಬಿಲ್ಲು, ದಂತ, ವಲಯ, ನಾಟ್ಯಮುದ್ರೆ, ಗದಾ, ಸರ್ಪ, ಪುಷ್ಪ ಪ್ರಮುಖವಾಗಿವೆ. ಸೊಂಟಕ್ಕೆ ಹುಲಿಯ ಚರ್ಮವಿದ್ದು. ಇವು ಗಣಪತಿಯ ಮೂರ್ತಿಶಿಲ್ಪದ ವೈಶಿಷ್ಟತೆಗಳಾಗಿವೆ.[೧೨]

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕಟ್ನೂರು, ದೇವರ ಗುಡಿಹಾಳ ವರೂರು, ಹುಬ್ಬಳ್ಳಿ ಬುಡರಸಿಂಗಿ ಗ್ರಾಮಗಳಲ್ಲಿ ಗಣಪತಿ ಮೂರ್ತಿಶಿಲ್ಪಗಳು ಕಂಡುಬರುತ್ತವೆ.

೧. ಹೆಸರು : ಗಣಪತಿ

ಸ್ಥಳ : ಹುಬ್ಬಳ್ಳಿ, ಧಾರವಾಡ

ಕಾಲ : ಕ್ರಿ.ಶ. ೧೨ ನೇ ಶತಮಾನ

ವಸ್ತು : ಕಪ್ಪುಶಿಲೆ

ಇದು ಭವಾನಿಶಂಕರ ದೇವಾಲಯದಲ್ಲಿ ಇದ್ದು ಗಣಪತಿಯ ಶಿಲ್ಪವು ಬೇರೆಡೆಯಿಂದ ಇಲ್ಲಿ ಸ್ಥಳಾಂತರಗೊಂಡು ಇಲ್ಲಿಡಲಾಗಿದೆ. ಪೀಠದ ಮೇಲೆ ಸೂರ್ಯನ ಬಿಂಬವಿದೆ. ಈತ ಸುಖಾಸನದಲ್ಲಿ ಕುಳಿತಿದ್ದು ಚತುರ್ಭುಜಧಾರಿಯಾಗಿರುವ ಈತನ ಕೈಯಲ್ಲಿ ದಂತ, ಪರಶು, ಅಂಕುಶ ಮೋದಕಗಳನ್ನು ತನ್ನ ಕೈಯಲ್ಲಿ ಹಿಡಿದಿದ್ದಾನೆ. ಸೊಂಡಿಲಿನಿಂದ ಮೋದಾಕವನ್ನು ತೆಗೆದುಕೊಳ್ಳುತ್ತಿರುವಂತೆ ಚಿತ್ರಿಸಲಾಗಿದೆ. ಸೊಂಡಿಲಿನ ಬಲಗಡೆ ಏಕದಂತವಿದೆ. ಈ ಮೂರ್ತಿಶಿಲ್ಪಕ್ಕೆ ಕಿರೀಟ, ಯಜ್ಞೋಪವೀತಹಾರ ಉದರಬಂಧ, ಭುಜಬಂಧ, ಕಂಕಣ, ಕಡಗ, ಅಗಲವಾದ ಕಿವಿ, ಮುತ್ತಿನ ಅಲಂಕರಣವಿದೆ.[೧೩]

೨. ಹೆಸರು : ಗಣಪತಿ

ಸ್ಥಳ : ಬುಡರಸಿಂಗಿ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಬೃಹದಾಕಾರದಲ್ಲಿರುವ ಈ ಗಣಪತಿಯು ಸುಖಾಸನದಲ್ಲಿದೆ. ಚತುರ್ಭುಜಧಾರಿಯಾಗಿರುವ ಗಣಪತಿಯ ಕೆಳ ಬಲಗೈ ಭಗ್ನಗೊಂಡಿದ್ದು. ಉಳಿದ ಕೈಗಳಲ್ಲಿ ಪರಶು, ಅಂಕುಶ, ಮೋದಕಗಳನ್ನು ಹಿಡಿದಿದ್ದಾನೆ. ಸೊಂಡಿಲಲ್ಲಿ ಮೋದಕ ಹಿಡಿಯಲ್ಪಟ್ಟಿದ್ದು ಬಲಭಾಗಕ್ಕೆ ಏಕದಂತ ಕಂಡುಬರುವುದು. ಅಗಲವಾದ ಕಿವಿಗಳನ್ನು ಹೊಂದಿರುವ ಈತ ಚಿಕ್ಕ ಕಿರೀಟಹೊಂದಿದ್ದಾನೆ. ಶಿಲ್ಪದ ಉದರ ಹಾಗೂ ಕಾಲುಗಳ ಭಾಗ ಭಗ್ನಗೊಂಡಿದ್ದು ಕೊರಳಲ್ಲಿ ಹಾರ ಧರಿಸಿಲ್ಪಟ್ಟಿದೆ.[೧೫]

ಕಾರ್ತಿಕೇಯ

ಶಿವನ ಪರಿವಾರದಲ್ಲಿ ಕಾರ್ತಿಕೇಯನಿಗೆ ಅಗ್ರಸ್ಥಾನ ದಕ್ಷಿಣ ಭಾರತದಲ್ಲಿ ಕಾರ್ತಿಕೇಯ ಮುರುಗ, ಷಣ್ಮುಖ, ಮಹಾಸೇನ, ಕುಮಾರ, ಬಾಲಸ್ವಾಮಿ, ವೇಲನ್, ದಂಡಪಾಣಿ, ವಲ್ಲೀನಾಯಕ ದೇವಸೇನಾಪತಿ, ಸೇನಾನಿ, ಶಿವಗುರು, ದೇಶಿಕ ಎಂದು ವಿವಿಧ ಹೆಸರುಗಳಿಂದ ಕರೆಯುತ್ತಾರೆ.[೧೬] ಈತನ ಹುಟ್ಟಿನ ಬಗ್ಗೆ ರಾಮಾಯಣದ ಬಾಲಕಾಂಡ, ಮತ್ತು ಮಹಾಭಾರತದ ವನಪರ್ವದಲ್ಲಿ ಉಲ್ಲೆಖವಿದೆ. ಕ್ರಿ.ಪೂ ೧-೨ನೇ ಶತಮಾನದಲ್ಲಿ ತಮಿಳುನಾಡಿನ ಕವಿ ನಕ್ಕೀರದೇವ ನಾಯನಾರ್ ಅವರು. ತಿರುಮುರುಗರುಪ್ಪಡೆ ಎಂಬ ಗ್ರಂಥದಲ್ಲಿ ಮುರುಗನ ಆರಾಧನೆಯನ್ನು ಬಣ್ಣಿಸಿದ್ದಾರೆ. ಹಾಗೆಯೇ ಶಿಲಪದ್ದಿಗಾರಂ ಗ್ರಂಥದಲ್ಲಿಯೂ ಆರು ಮಾನವ ಮುರುಗನ ಪ್ರಸ್ತಾಪವಿದೆ.[೧೭]

ಕಾರ್ತಿಕೇಯ ಶಿಲ್ಪಗಳ ಪ್ರತಿಮಾಲಕ್ಷಣಗಳಿಗೆ ಸಂಬಂಧಿಸಿದಂತೆ ಈತನಿಗೆ ಆರು ತಲೆಗಳಿದ್ದಾಗ ಹನ್ನೆರಡು ಕೈಗಳಿರುತ್ತವೆ. ಹಾಗೆಯೇ ಚತುರ್ಭುಜ ಶಿಲ್ಪಗಳಲ್ಲಿ ಕ್ರಮವಾಗಿ ಘಂಟೆ, ವೈಜಯಂತಿ, ಪತಾಕೆಗಳಿರುತ್ತವೆ. ದ್ವಿಭುಜ ಶಿಲ್ಪಗಳಲ್ಲಿ ಎಡಗೈಯಲ್ಲಿ ವಜ್ರಾಯುಧ ಬಲಗೈಯಲ್ಲಿ ಶಕ್ತಾಯುಧ ಇರುತ್ತವೆ. ಸ್ಥಾನಿಕ ಭಂಗಿಯಲ್ಲಿ ಒಂಟಿಯಾಗಿ ಚತುರ್ಭುಜಗಳಿದ್ದ ಸಂದರ್ಭದಲ್ಲಿ ಅದು ರಾಜಸಿಕ ಶಿಲ್ಪವೆಂದೂ ಆಸೀನ ಭಂಗಿಯಲ್ಲಿದ್ದು ದ್ವಿಭುಜಗಳಿದ್ದ ಸಂದರ್ಭದಲ್ಲಿ ಅದು ಸಾತ್ವಿಕ ಶಿಲ್ಪವೆಂದೂ ಮಯೂರರೂಢನಾಗಿ ಆರು ಎಂಟು ಅಥವಾ ಹನ್ನೆರಡು ಭುಜಗಳಿದ್ದ ಸಂದರ್ಬದಲ್ಲಿ ಅದು ತಾಮಸಶಿಲ್ಪವೆಂದೂ ಕರೆಯಲಾಗುತ್ತದೆ.[೧೮] ಇವನು ತನ್ನ ವಾಹನವಾದ ನವಿಲಿನ ಮೇಲಿರುತ್ತಾನೆ. ಪ್ರಸ್ತುತ ಈ ಅಧ್ಯಯನ ಪ್ರದೇಶಗಳಲ್ಲಿ ಸುಳ್ಳ ದೇವರಗುಡಿ ಹಾಳ ಗ್ರಾಮಗಳಲ್ಲಿ ಈ ಶಿಲ್ಪಗಳನ್ನು ವೈಶಿಷ್ಟ್ಯತೆಗಳನ್ನು ನೋಡಬಹುದಾಗಿದೆ.

ಸೂರ್ಯ

ಪ್ರಪಂಚದ ಪ್ರಾಚೀನ ವಿವಿಧ ಧಾರ್ಮಿಕ ಪಂಥಗಳಲ್ಲಿ ಸೂರ್ಯ ಪಂಥವೂ ಒಂದಾಗಿದೆ. ಇವನ ಬಗ್ಗೆ ವೇದ, ಪುರಾಣಗಳಲ್ಲಿ, ಉಲ್ಲೆಖವಿರುವುದನ್ನು ಗುರುತಿಸಬಹುದಾಗಿದೆ. ಋಗ್ವೇದದ ಒಂದನೇ ಮಂಡಲದಲ್ಲಿ ಅಗ್ನಿ ಮತ್ತು ಸೂರ್ಯನಿಗೆ ಬಹು ಸಾಮಿಪ್ಯವನ್ನು ಕಲ್ಪಿಸಲಾಗಿದೆ. ಐದನೇ ಮಂಡಲದಲ್ಲಿ ಸೂರ್ಯನ ರಥ, ಪೀಠದಲ್ಲಿ ಏಳು ಕುದುರೆಗಳು ಹಾಗೂ ಹತ್ತನೆಯ ಮಂಡಲದಲ್ಲಿ ಅವನ ವಿವಾಹದ ಕುರಿತ ಉಲ್ಲೆಖಗಳಿವೆ.[೧೯]

ಮತ್ಸ್ಯಪುರಾಣದಲ್ಲಿ ದಂಡ ಮತ್ತು ಪಿಂಗಳರೊಂದಿಗೆ ಕೈಯಲ್ಲಿ ಲೇಖನಿ ಹಿಡಿದ ಧಾತೃಗಳೊಂದಿಗೆ ರಥದಲ್ಲಿ ಆಸೀನನಾಗುವಂತೆ ಸೂರ್ಯ ಶಿಲ್ಪವನ್ನು ರಚಿಸಬೇಕೆಂದು ಹೇಳಲಾಗಿದೆ. ಸೂರ್ಯನ ಕೈಗಳಲ್ಲಿ ಕಮಲಗಳಿರಬೇಕು, ಹಾಗೆಯೇ ಸೂರ್ಯನನ್ನು ಪ್ರತ್ಯೇಕವಾಗಿ ಚಿತ್ರಿಸುವಾಗ ನಾಲ್ಕು ಕೈಗಳಿರುವಂತೆಯೂ ನವಗ್ರಹಗಳೊಂದಿಗೆ ಇರುವಾಗ ಎರಡು ಕೈಗಳಿರುವಂತೆ ಚಿತ್ರಿಸಬೇಕೆಂದು ಸೂಚಿಸಲಾಗಿದೆ.[೧೮] ಉಷ್ಣ ಬೆಳಕು ನೀಡುವ ದೇವರು ಸೂರ್ಯನಾಗಿದ್ದು. ಈತನ ಸುತ್ತಲೂ ಎಲ್ಲಾ ಗ್ರಹಗಳು ಸುತ್ತುತ್ತವೆ. ಈತನನ್ನು ಆದಿತ್ಯನೆಂತಲೂ ಶಾಸನಗಳಲ್ಲಿ ಹೇಳಲಾಗಿದೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಯರಗುಪ್ಪಿನಲ್ಲಿ ಇಂತಹ ಮೂರ್ತಿ ಶಿಲ್ಪವಿದೆ.

೧. ಶಿಲ್ಪ : ಸೂರ್ಯ

ಸ್ಥಳ : ಯರಗುಪಿ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೧ನೇ ಶತಮಾನ

ವಸ್ತು : ಕಪ್ಪುಶಿಲೆ

ಸೂರ್ಯ ಸಮಭಂಗಿಯಲ್ಲಿ ನಿಂತಿದ್ದಾನೆ. ದ್ವಿಭುಜಧಾರಿಯಾದ ಇವನ ಕೈಗಳಲ್ಲಿ ಕಮಲದ ಹೂಗಳಿವೆ. ಉಷಾ ಮತ್ತು ಪ್ರತ್ಯಷಯರು ಎಡಬಲದಲ್ಲಿ ನಿಂತಿದ್ದಾರೆ. ಪೀಠದಲ್ಲಿ ಸಪ್ತ ಅಶ್ವಗಳಿವೆ. ಪ್ರಭಾವಳಿಯಲ್ಲಿ ಎಂಟು ಗ್ರಹಗಳಿದ್ದು ಈತನನ್ನು ಸೇರಿ ಒಟ್ಟು ಒಂಭತ್ತು ಗ್ರಹಗಳನ್ನು ನಾವು ಗುರುತಿಸಬಹುದಾಗಿದೆ.[೧೯]

ಬ್ರಹ್ಮ

ಬ್ರಹ್ಮನು ಕಮಲದಿಂದ ಜನಿಸದವನೆಂಬ ಐತಿಹ್ಯ ಇದೆ. ಇವನನ್ನು ಆರಾಧಿಸಲು ಅಜ್ಮೀರ್ ಒಂದನ್ನು ಹೊರತು ಪಡಿಸಿ ಯಾವುದೇ ದೇವಾಲಯ ನಿರ್ಮಾಣಗೊಂಡಿಲ್ಲ. ರೂಪಮಂಡನಾ ತಿಳಿಸುವಂತೆ ಶಾಂತವಾದ ಬ್ರಹ್ಮನ ನಾಲ್ಕು ಮುಖಗಳು ನಾಲ್ಕು ವೇದಗಳ ಸಂಕೇತವಾಗಿದೆ. ಅಲ್ಲದೇ ನಾಲ್ಕು ಯುಗಗಳಂತೆ ನಾಲ್ಕು ವರ್ಗಗಳಿವೆ. ಬ್ರಹ್ಮ ಐದು ತಲೆಗಳನ್ನು ಹೊಂದಿದ್ದು ಒಂದು ಶಿವನಿಂದ ಕತ್ತರಿಸಲ್ಪಟ್ಟಿದೆ.[೨೦] ಉಳಿದಂತೆ ನಾಲ್ಕು ಮುಖಗಳು ಮಾತ್ರ ಕಂಡುಬರುತ್ತವೆ. ಚತುರ್ಭುಜಧಾರಿಯಾದ ಬ್ರಹ್ಮನ ಕೈಗಳಲ್ಲಿ ಅಭಯ ಮುದ್ರೆಯಲ್ಲಿದ್ದು ಉಳಿದ ಕೈಗಳಲ್ಲಿ ಅಂಕುಷ, ಅಕ್ಷಮಾಲ, ಕಮಂಡಲ ಹಿಡಿದಿರುತ್ತಾನೆ. ಈತನ ಶಿಲ್ಪಗಳು ಕುಳಿತ ಅಥವಾ ನಿಂತಭಂಗಿಯಲ್ಲಿರುತ್ತವೆ. ಕುಳಿತಾಗ ಹಂಸದ ಮೇಲೆ ಅಥವಾ ಪದ್ಮಾಸನದಲ್ಲಿ ತೋರಿಸಲಾಗಿರುತ್ತದೆ. ನಿಂತಾಗ ಪದ್ಮಪೀಠದ ಮೇಲೆ ನಿಂತಂತೆ ತೋರಿಸಲಾಗುವುದು. ಈ ವೈಶಿಷ್ಟ್ಯತೆಯ ಬ್ರಹ್ಮನ ಶಿಲ್ಪವನ್ನು ಪ್ರಸ್ತುತ ಅಧ್ಯಯನದಲ್ಲಿ ಮುಖ್ಯವಾಗಿ ಸುಳ್ಳ ಗ್ರಾಮದಲ್ಲಿ ಗಮನಿಸಬಹುದಾಗಿದೆ.

ಶಾಕ್ತ ಶಿಲ್ಪಗಳು

ಪ್ರಾಚೀನ ಕಾಲದಿಂದಲೂ ಮಾತೃದೇವತೆಯ ಪೂಜೆ ನಡೆದುಕೊಂಡು ಬಂದಿದೆ. ಶಾಕ್ತರು ಈ ಮಾತೃ ಮತ್ತು ಸ್ತ್ರೀದೇವತೆಯನ್ನು ಪೂಜಿಸುತ್ತಾ ಬಂದಿದ್ದು. ಇವುಗಳನ್ನು ಶಾಕ್ತ ಶಿಲ್ಪಗಳೆಂದು ಕರೆಯಲಾಗಿದೆ.

ಈ ಒಂದು ಶಿಲ್ಪ ವರ್ಗಗಳಲ್ಲಿ ಬನಶಂಕರಿ ಕಾಳಿಕಾ, ಸರಸ್ವತಿ, ಮಹಿಷಾಸುರಮರ್ಧಿನಿ, ಸರಸ್ವತಿ ಗಜಲಕ್ಷ್ಮಿ, ಉಮಾಮಹೇಶ್ವರ ಮೂರ್ತಿಶಿಲ್ಪಗಳಿವೆ.

೧. ಶಿಲ್ಪ : ಬನಶಂಕರಿ

ಸ್ಥಳ : ಅಮರಗೋಳ

ಜಿಲ್ಲೆ : ಧಾರವಾಡ

ಕಾಲ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಬನಶಂಕರಿಯು ಪೀಠದ ಮೇಲೆ ರಾಜಲಲಿತಾಸನದಲ್ಲಿ ಆಸೀನಳಾಗಿದ್ದಾಳೆ. ಇವಳು ಚತುರ್ಭುಜ ಧಾರಿಳಾಗಿದ್ದು ಕೈಯಲ್ಲಿ ಕತ್ತಿ, ಡಮರು, ತ್ರಿಶೂಲ, ಕಪಾಲಿ, ಆಯುಧಗಳನ್ನು ಹಿಡಿದಿದ್ದಾಳೆ. ಹಾಗೆಯೇ ಕಿರೀಟಮಕುಟ, ಪತ್ರಕುಂಡಲ, ಕಠ, ಹಾರ, ಉಪವೀತ ಭುಜಬಂಧ ಇತರೆ ಆಭರಣಗಳನ್ನು ಧರಿಸಿದ್ದಾಳೆ. ಧರಿಸಿರುವ ಉಪವೀತವು ಉದ್ದವಾಗಿದ್ದು ಅದು ಪೀಠದವರೆಗೂ ಬಂದಿದೆ. ದೇವಿಯ ಇಕ್ಕೆಲಗಳಲ್ಲಿ ಸಹದೇವತೆಯರಿರುವರು. ಶಿಲ್ಪದ ಸುತ್ತಲೂ ಸ್ಥಂಭ ಮಕರ ತೋರಣವಿದ್ದು ಈಗ ಭಗ್ನಗೊಂಡಿದೆ.[೨೦]

ಸಪ್ತಮಾತೃಕೆಯರು

ಸಪ್ತಮಾತೃಕೆಯರ ಉಲ್ಲೇಖವು ವರಾಹ ಪುರಾಣದಲ್ಲಿ ಮತ್ತು ಆಗಮಗಳಲ್ಲಿ ಇದ್ದು ಈ ಸಪ್ತಮಾತ್ಕೆಯರು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟವರಾಗಿದ್ದಾರೆ. ಹಾಗೆಯೇ ಇವರನ್ನು ತಾಯಿ ದೇವರೆಂದು ಪೂಜಿಸಲಾಗುತ್ತಿದೆ. ಹೀಗೆ ಯೋಗೇಶ್ವರಿ ದೇವಿಯನ್ನು ಸೇರಿಸಿ ದೇವತೆಗಳ ಸಂಖ್ಯ ಎಂಟು, ಎಂದು ಉಲ್ಲೆಖಿಸಿದ್ದು ಆದರೆ ಆಗಮಗಳಲ್ಲಿ ಏಳು ಎಂದು ಉಲ್ಲೇಖವಿದೆ.

ವರಾಹ ಪುರಾಣದಲ್ಲಿ ಹೇಳಿದಂತೆ ಈ ಎಂಟು ಮಾತೃಕೆಯರು ನೈತಿಕವಾಗಿ ಎಂಟು ಮಾನಸಿಕ ಗುಣಗಳನ್ನು ಹೊಂದಿದ್ದಾರೆ. ಅವುಗಳೆಂದರೆ ಯೋಗೇಶ್ವರಿಯ ಕಾಮ, ಮಾಹೇಶ್ವರಿಯ ಕ್ರೋಧ, ವೈಷ್ಣವಿಯ ಲೋಭ ಬ್ರಾಹ್ಮಿಣಿಯ, ಮದ ಕೌಮಾರಿ ಮೋಹ ಇಂದ್ರಾಣಿ, ಮಾತ್ಸರ್ಯ ಚಾಮುಂಡಾ ಪ್ರಶನ್ಯ ವರಾಹಿನ ಅಸೂಯ ಹೀಗೆ ಇವುಗಳ ಬಗ್ಗೆ ವರ್ಣನೆಯಿದೆ.[೨೨]

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕೋಳಿವಾಡ ಹಳೇಹುಬ್ಬಳ್ಳಿ ಬೆಳಗಲಿ, ಗಬ್ಬೂರು, ಇತರೆ ಸ್ಥಳಗಳಲ್ಲಿ ಸಪ್ತಮಾತೃಕೆಯರ ಬಗ್ಗೆ ಉಲ್ಲೇಖವಿದೆ. ಈ ಸಪ್ತಮಾತೃಕೆಯರನ್ನು ಒಂದೇ ಪಟ್ಟಿಕೆಯಲ್ಲಿ ಕಂಡರಿಸಲಾಗಿದ್ದು, ಈ ಪಟ್ಟಿಕೆಯ ಬಲಬದಿಯಲ್ಲಿ ವೀರಭದ್ರನನ್ನು ಎಡಬದಿಯಲ್ಲಿ ಗಣೇಶನ ಶಿಲ್ಪಗಳಿರುತ್ತವೆ. ಜಟಾಮುಕುಟಧಾರಿಯಾದ ವೀರಭದ್ರ ಚತುರ್ಭುಜಧಾರಿಯಾಗಿರುತ್ತಾನೆ. ಕೈಯಲ್ಲಿ ಶೂಲ, ಗದಾ, ಹಿಡಿದಿರುತ್ತಾನೆ. ವೀಣಾಪಾಣಿಯೂ ಆಗಿರುತ್ತಾನೆ. ಈತನ ವಾಹನ ನಂದಿ, ಗಣೇಶನು ಪದ್ಮಪೀಠದ ಮೇಲೆ ಕುಳಿತಿರುತ್ತಾನೆ. ಕೆಲವೊಮ್ಮೆ ಈ ಏಳು ಜನ ಮಾತೃಕೆಯರನ್ನು ಒಂದೊಂದಾಗಿಯೇ ಜಡಿಯಾಗಿ ಚಿತ್ರಿಸಿರುವುದೂ ಉಂಟು. ಹೆಚ್ಚಿನ ಮಟ್ಟಿಗೆ ಈ ಮಾತೃಕೆಯರು ಚತುರ್ಭುಜಧಾರಿಗಳಾಗಿರುತ್ತಾರೆ. ಇವರುಗಳು ಪೀಠದಲ್ಲಿದಲ್ಲಿ ಅವರವರ ವಾಹನಗಳನ್ನು ಕಂಡರಿಸಿರುತ್ತಾರೆ.[೨೩]

೧. ಶಿಲ್ಪ : ಸಪ್ತಮಾತೃಕೆ ಶಿಲ್ಪ

ಸ್ಥಳ : ಹಳೇಹುಬ್ಬಳ್ಳಿ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಒಂದೇ ಪಟ್ಟಿಕೆಯಲ್ಲಿ ಸಪ್ತಮಾತೃಕೆಯರನ್ನು ಸಾಲಾಗಿ ಕಂಡರಿಸಿದ್ದಾರೆ. ಇಲ್ಲಿಯೂ ವೀರಭದ್ರನ ಮತ್ತು ಗಣೇಶನ ಶಿಲ್ಪವಿದೆ. ಆಯಾದೇವತೆಯರ ಕೆಳಭಾಗದಲ್ಲಿ ಕುಳಿತ ಅವರ ವಾಹನಗಳನ್ನು ತೋರಿಸಲಾಗಿದೆ. ಈ ಸಪ್ತಮಾತೃಕೆಯರು ಚತುರ್ಭುಜಧಾರಿಗಳಾಗಿದ್ದು ಆಯುಧಗಳನ್ನು ಹೊಂದಿದ್ದಾರೆ. ಕಿರೀಟ, ಪತ್ರಕುಂಡಲ, ಹಾರ, ಫಲ, ಕಂಠಿ, ಉಪವೀತ, ಕಂಕಣ, ಕಿಂಕಿಣಿ ಇನ್ನು ಮುಂತಾದ ಆಭರಣಗಳಿಂದ ಅಲಂಕೃತಗೊಂಡಿದ್ದಾರೆ.[೨೪]

೧. ಶಿಲ್ಪ : ಸಪ್ತಮಾತೃಕೆ ಶಿಲ್ಪ

ಸ್ಥಳ : ಬೆಳಗಲಿ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಈ ಸಪ್ತಮಾತೃಕೆಯರ ಪಟ್ಟಿಕೆಯಲ್ಲಿ ಬ್ರಾಹ್ಮಿಯ ಬಲಭಾಗದಲ್ಲಿ ವೀಣಾಪಾಣಿ ವೀರಭದ್ರನನ್ನು ಚಾಮುಂಡಾಳ ಎಡಭಾಗದಲ್ಲಿ ಗಣೇಶನನ್ನು ತೋರಿಸಲಾಗಿದೆ. ಇವರೆಲ್ಲರೂ ಪೀಠದ ಮೇಲೆ ಸವ್ಯಲಲಿತಾಸನದಲ್ಲಿ ಕುಳಿತಿದ್ದಾರೆ. ದ್ವಿಭುಜಧಾರಿಗಳಾಗಿರುವ ಇವರು ಆಭರಣಗಳಿಂದ ಅಲಂಕೃತಗೊಂಡಿದ್ದಾರೆ. ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದಾರೆ. ಅವರ ಕಾಲಿನ ಬದಿಯಲ್ಲಿ ವಾಹನಗಳನ್ನು ತೋರಿಸಿದ್ದಾರೆ.[೨೫]

೩. ಶಿಲ್ಪ : ಸಪ್ತಮಾತೃಕೆ

ಸ್ಥಳ : ಗಬ್ಬೂರ

ಜಿಲ್ಲೆ : ಧಾರವಾಡ

ಕಾಲ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಈ ಶಿಲ್ಪ ಪಟ್ಟಿಕೆಯಲ್ಲಿ ಬ್ರಹ್ಮ, ಮಹೇಶ್ವರಿ, ವೈಷ್ಣವಿ, ಮಾಹಿ, ಇಂದ್ರಾಣಿ, ಚಾಮುಂಡಾ ಶಿಲ್ಪಗಳನ್ನು ತೋರಿಸಲಾಗಿದೆ. ಬ್ರಾಹ್ಮಿಯ ಬಲಕ್ಕೆ ವೀಣಾಪಾಣಿ, ವೀರಭದ್ರ, ಚಾಮುಂಡಾಳ ಎಡಕ್ಕೆ ಗಣೇಶನ ಚಿತ್ರಗಳಿವೆ. ಇವರೆಲ್ಲರೂ ತಮ್ಮ ವಾಹನದ ಮೇಲೆ ಬಲಗಾಲಿಟ್ಟು ಸೌಮ್ಯಲಲಿತಾಸನದಲ್ಲಿ ಕುಳಿತಿದ್ದಾರೆ. ಗಣೇಶ ಮಾತ್ರ ಸುಖಾಸನದಲ್ಲಿದ್ದಾನೆ. ಚತುರ್ಭುಜಧಾರಿಗಳಾಗಿರುವ ಇವರು ಕೈಗಳಲ್ಲಿ ಆಯುಧಗಳನ್ನಿಡಿದಿದ್ದಾರೆ. ಇವರ ಕಿರೀಟಗಳು ಉದ್ದವಾಗಿ ಕಂಡುಬರುತ್ತವೆ. ಮತ್ತು ಆಭರಣಗಳಿಂದ ಸಿಂಗರಿಸಿಕೊಂಡಿದ್ದು. ವಾಹನಗಳ ಮೇಲೆ ಕಾಲನ್ನು ಇಟ್ಟಿರುವುದು ಈ ಶಿಲ್ಪ ಪಟ್ಟಿಕೆಯ ವಿಶೇಷತೆಯಾಗಿದೆ.[೨೬]

೪. ಶಿಲ್ಪ : ಸಪ್ತಮಾತೃಕೆ ಶಿಲ್ಪ

ಸ್ಥಳ : ಇಂಗಳಹಳ್ಳಿ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೮ನೇ ಶತಮಾನ

ವಸ್ತು : ಕಪ್ಪುಶಿಲೆ

ಇಲ್ಲಿ ಇಬ್ಬರು ದೇವತೆಗಳ ಮಂಡು ಶಿಲ್ಪಗಳಿವೆ. ಒಬ್ಬಳು ಮಗುವನ್ನು ತೊಡೆಯ ಮೇಲೆ ಕೂಡಿಸಿಕೊಂಡು ಕುಳಿತಿದ್ದಾಳೆ. ಈಕೆ ಮತ್ತು ಇನ್ನೊಬ್ಬ ದೇವತೆಯು ತಮ್ಮ ಕಾಲುಗಳನ್ನು ಪ್ರಲಂಭಾಸನದಲ್ಲಿಟ್ಟು ಕುಳಿತಿರುವುದು ವಿಶೇಷವೆನಿಸಿದೆ. ಇಬ್ಬರ ದೇಹಾಂಗ ಮತ್ತು ವಸ್ತ್ರಾಭರಣಗಳು ಒಂದೇ ಶೈಲಿಯಲ್ಲಿವೆ.[೨೭]

ಮಹಿಷಾಸುರ ಮರ್ಧಿನಿ

ಶಿಲ್ಪರತ್ನದ ಪ್ರಕಾರ ಮಹಿಷಾಸುರ ಮರ್ಧಿನಿಯು ದಶಭುಜಧಾರಿಯಾಗಿದ್ದಾಳೆ. ಮತ್ತು ೩ ಕಣ್ಣುಗಳನ್ನು ಹೊಂದಿದ್ದಾಳೆ. ಅವು ನೀಲೋತ್ಪಲದಂತಿವೆ. ಇವಳ ಜಟಾಮುಕುಟದಲ್ಲಿರುವ ಚಂದ್ರನಂತೆ ಗೋಚರಿಸುತ್ತಾಳೆ. ಆಕಾಶ ಹೂವಿನ ಬಣ್ಣ ಹೊಂದಿದ್ದಾಳೆ. ತ್ರಿಭಂಗಿಯಲ್ಲಿರುವ ಇವಳು ಎಡಗಾಲನ್ನು ಕೋಣನ ತಲೆ ಮೇಲೆ ಬಲಗಾಲನ್ನು ಹಿಂದೆ ಇರುವ ಸಿಂಹದ ಮೇಲಿಟ್ಟಿರುತ್ತಾಳೆ. ತನ್ನ ಕೈಗಳಲ್ಲಿ ತ್ರಿಶೂಲ ಖಡ್ಗ, ಶಕ್ತ್ಯಾಯುಧ ಚಕ್ರ, ಬಿಲ್ಲು, ಪಾಶ, ಅಂಕುಶ, ಖೇಟಕ, ಪರಶು ಮತ್ತು ಘಂಟಾಗಳನ್ನು ಹಿಡಿದಿರುತ್ತಾಳೆ.[೨೮]

ವಿಷ್ಣುಧರ್ಮೋತ್ತರ ಪುರಾಣ ಹೇಳುವಂತೆ ಮಹಿಷಮರ್ಧಿನಿಯ ಹೆಸರು ಚಂಡಿಕಾ. ಅವಳ ಬಣ್ಣ ಬಂಗಾರದ ಬಣ್ಣವಾಗಿದೆ. ನೋಡಲು ಯೌವ್ವನಾವಸ್ಥೆಯಲ್ಲಿದ್ದು ಸಿಟ್ಟಿನ ಮುಖಚರ್ಯೆ ಹೊಂದಿದ್ದಾಳೆ. ಮಹಿಷನರೂಪ ತಾಳಿ ಬಂದು ರಾಕ್ಷಸನನ್ನು ಮರ್ಧನ ಮಾಡಿದ ನಂತರ ಮಹಿಷಾಸುರಮರ್ಧಿನಿ ಎಂದು ಕರೆಸಿಕೊಂಡಿದ್ದಾಳೆ.

ಒಂದು ಐತಿಹ್ಯದ ಪ್ರಕಾರ ಸ್ತ್ರೀಯನ್ನು ಬಿಟ್ಟು ದೇವ ಗಂಧರ್ವರಾದಿಯಾಗಿ ಯಾರಿಂದಲೂ ಸಾವು ಬರಬಾರದೆಂಬ ವರವನ್ನು ಮಹಿಷನು ಪಡೆದಿದ್ದನು. ಮೂರು ಲೋಕಗಳನ್ನು ವಶಪಡಿಸಿಕೊಂಡು ದೇವತೆಗಳನ್ನು ಆತಂಕಕ್ಕೀಡು ಮಾಡಿದನು. ಇದರಿಂದ ಅವಮಾನಿತರಾದ ದೇವತೆಗಳು ತಮ್ಮ ಶಕ್ತಿ ಹೀನ ವೀರ್ಯತನಕ್ಕೆ ನಾಚಿಕೆ ಪಟ್ಟು ಅದನ್ನು ಹೊರಹಾಕಿದರು. ಅದು ಒಂದು ಗೂಡಿ ಸುಂದರ ಹೆಣ್ಣಿನ ರೂಪ ತಳೆಯಿತು. ಅವಳು ಶಿವನಿಂದ ತ್ರಿಶೂಲ, ವಿಷ್ಣುವಿನಿಂದ ಚಕ್ರ, ಯಮನಿಂದ ಕೆದರಿದ ಜಟರಾಶಿ, ಇತರರಿಂದ ಸೂಕ್ತಯುಧಗಳನ್ನು ಪಡೆದಳು. ಹಿಮವಂತನು ಅವಳಿಗೆ ದೇಹವನ್ನು ವಾಹನವಾಗಿ ಕೊಟ್ಟನು. ದುಷ್ಟ ಮಹಿಷಾಸುರನನ್ನು ತನ್ನ ಮಾಯಾಜಾಲದಲ್ಲಿ ಬಂಧಿಸಿ ಸಂಹರಿಸಿದಳು.[೨೯]

ಸರಸ್ವತಿ

ವೈದಿಕ ಸಾಹಿತ್ಯದಲ್ಲಿ ಸರಸ್ವತಿಗೆ ವಾಗ್ದೇವಿ ಭಾರತಿ, ಮೇಧಾದೇವಿ ಇನ್ನೂ ಮುಂತಾದ ಹೆಸರುಗಳಿವೆ. ಇವೆಲ್ಲವೂ ವಿದ್ಯಾದೇವತೆಯ ಹೆಸರುಗಳೇ ಆಗಿವೆ. ಇವಳು ಶ್ವೇತವರ್ಣದಿಂದ ಕೂಡಿದ್ದು ಶಿವನ ಶಕ್ತಿಯ

ರೂಪದಲ್ಲಿಯೂ ವಿಷ್ಣುವಿನ ಶಕ್ತಿಯ ರೂಪದಲ್ಲಿಯೂ ನೋಡಲಾಗುತ್ತದೆ. ಲಕ್ಷ್ಮಿ, ಸರಸ್ವತಿ, ಪಾರ್ವತಿ ಈ ಮೂವರನ್ನು ಒಬ್ಬಳೇ ದೇವತೆ ಎಂದು ಗುರುತಿಸಲಾಗುತ್ತದೆ.

ಬ್ರಹ್ಮಶಕ್ತಿಯಾಗಿರುವ ಸರಸ್ವತಿಯು ನಂಬಿಕೆಯಿದ್ದರೂ, ವ್ಯವಹಾರದಲ್ಲಿ ಸ್ವತಂತ್ರ ದೇವತೆಯೇ ಆಗಿದ್ದಾಳೆ. ಸಾಮಾನ್ಯವಾಗಿ ಸರಸ್ವತಿಯು ಪದ್ಮಪೀಠದ ಮೇಲೆ ಇರುವಂತೆ ಚಿತ್ರಿಸಲಾಗುತ್ತದೆ. ಹಾಗೆಯೇ ಬೌದ್ಧರು ಜೈನರು, ಶಾಕ್ತರು ಇವಳನ್ನು ಪೂಜಿಸುತ್ತಾರೆ. ಇವಳ ಕೈಯಲ್ಲಿ ವ್ಯಾಖ್ಯಾನಮುದ್ರೆ ಅಕ್ಷಮಾಲ ಪದ್ಮ ಮತ್ತು ಪುಸ್ತಕಗಳಿರುತ್ತವೆ. ದ್ವಿಭುಜಗಳಾಗಿದ್ದರೆ. ಪುಸ್ತಕ ಲೇಖನಿಗಳನ್ನು ಹಿಡಿದಿರುತ್ತಾಳೆ. ಸರಸ್ವತಿ ಕೆಲವೊಮ್ಮೆ ವೀಣಾಪಾಣಿಯೂ ಆಗಿರುತ್ತಾಳೆ. ಇವಳ ವಾಹನ ಹಂಸ[೩೦]

೧. ಶಿಲ್ಪ : ಸರಸ್ವತಿ
ಸ್ಥಳ : ಹಳೇಹುಬ್ಬಳ್ಳಿ
ಜಿಲ್ಲೆ : ಧಾರವಾಡ
ಕಾಲ : ೧೨ನೇ ಶತಮಾನ
ವಸ್ತು : ಕಪ್ಪುಶಿಲೆ

ಸರಸ್ವತಿಯು ಪದ್ಮಾಸನದಲ್ಲಿದ್ದು ಚತುರ್ಭುಜಧಾರಿಯಾದ ಸರಸ್ವತಿಯು ಮೊದಲನೆಯ ಮತ್ತು ನಾಲ್ಕನೆಯ ಕೈಗಳು ಭಗ್ನಗೊಂಡಿವೆ. ಉಳಿದೆರಡು ಕೈಗಳಲ್ಲಿ ಪಾಶ ಮತ್ತು ಪದ್ಮಗಳಿರುತ್ತವೆ. ಕಿರೀಟ ಮುಕುಟ, ಕಂಠ, ಹಾರ, ಸರ, ಯಜ್ಞೋಪವೀತ, ಕೇಯೂರ, ಕಂಕಣ, ಕಿಂಕಿಣಿ, ಕುಂಡಲ ಮುಂತಾದ ಅಭರಣಗಳಿಂದ ಅಲಂಕೃತಗೊಡಿದ್ದಾಳೆ. ಶಿಲ್ಪದ ಸುತ್ತೂಲೂ ಮಕರ ತೋರಣವಿದೆ. ಶಿಲ್ಪವು ಪ್ರಮಾಣ ಬದ್ಧವಾಗಿ ನಿರೂಪಿತವಾಗಿದೆ.

ಗಜಲಕ್ಷ್ಮಿ

ಗಜಲಕ್ಷ್ಮಿ ವೈಷ್ಣವಿ ಮಾತ್ರವಾಗಿರದೇ ಗ್ರಾಮದೇತೆಯಾಗಿಯೂ ಪೂಜಿಸಲ್ಪಡುತ್ತಾಳೆ. ಗಜಲಕ್ಷ್ಮಿಯನ್ನು 'ಬಾದುಬ್ಬೆ' ಎಂದು ಕರೆಯುವ ವಾಡಿಕೆ ಇದೆ. ಇವಳ ಕುರಿತು ವೈದಿಕ ಸಾಹಿತ್ಯ ಹಾಗೂ ವಿಷ್ಣು ಧರ್ಮೋತ್ತರ ಪುರಾಣ ಋಗ್ವೇದದ ಶ್ರೀಸೂಕ್ತ ಮತ್ತು ಮತ್ಸ್ಯ ಪುರಾಣಗಳೂ ಉಲ್ಲೇಖಿಸುತ್ತವೆ. ಈಕೆಯನ್ನು ಶಿಲ್ಪದಲ್ಲಿ ತೋರಿಸುವ ಪರಂಪರೆ ಕ್ರಿ.ಪೂ. ೨-೩ ಶತಮಾನದಲ್ಲಿ ಬೌದ್ಧ ವ್ಯಾಪಾರಗಳಿಂದ ಪ್ರಾರಂಭವಾಯಿತು. ಈ ರೀತಿಯ ಶಿಲ್ಪಗಳು ಬಾದಾಮಿ ಚಾಲುಕ್ಯರ ಬಾದಾಮಿ ೧ ಮತ್ತು ೨ ನೇಯ ಲಯನಗಳ ಕಂಬಗಳ ಮೇಲೆ ಮತ್ತು ಪಟ್ಟದಕಲ್ಲಿನಲ್ಲಿ ಪಾಪನಾಥ ದೇವಾಲಯದಲ್ಲಿ ಕಂಡುಬರುತ್ತವೆ.[೩೧]

ಹೆಚ್ಚಿನ ಮಟ್ಟಿಗೆ ಈ ಶಿಲ್ಪಗಳು ಪದ್ಮಪೀಠದ ಮೇಲೆ ಪದ್ಮಾಸನದಲ್ಲಿ ಆಸೀನಳಾಗಿರುತ್ತಾಳೆ. ಕೈಗಳಲ್ಲಿ ಶಂಖ ಮತ್ತು ಪದ್ಮಗಳಿರುತ್ತವೆ. ಇಕ್ಕೆಲಗಳಲ್ಲಿ ೨ ಆನೆಗಳು, ಸೊಂಡಿಲುಗಳಲ್ಲಿ, ಕುಂಭಗಳನ್ನು ಹಿಡಿದುಕೊಂಡು ಅಭಿಷೇಕ ಮಾಡುತ್ತಿರುವಂತೆ ತೋರಿಸಲಾಗುತ್ತದೆ. ಈ ಎರಡೂ ಆನೆಗಳೂ ಮತ್ತು ಕೈಗಳಲ್ಲಿರುವ ಶಂಖ, ಪದ್ಮಗಳು ಶಂಖ ಮತ್ತು ಪದ್ಮನಿಧಿಗಳನ್ನು ಸೂಚಿಸುತ್ತವೆ. ಇದರಿಂದ ಲಕ್ಷ್ಮಿಗೂ ಅಧಿಪತಿಯಾದ ಕುಬೇರನಿಗೂ ಇರುವ ಸಂಬಂಧ ಧ್ವನಿತವಾಗುತ್ತದೆ. ಕೆಲವೊಂದು ಗಜಲಕ್ಷ್ಮಿ ಶಿಲ್ಪಗಳಲ್ಲಿ ಈಕೆಯ ಪಾರ್ಶ್ವಗಳಲ್ಲಿ ಸಾಮಾನ್ಯವಾಗಿ ಶಂಖನಿಧಿ ಪದ್ಮನಿಧಿ ಹಾಗೂ ಗಂಧರ್ವರ ಶಿಲ್ಪಗಳನ್ನು ತೋರಿಸಲಾಗಿರುತ್ತವೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕೋಳಿವಾಡ, ಮಲ್ಲಿಗವಾಡ ಛಬ್ಬಿ, ಬೆಳಗಲಿ, ವರೂರು ಇನ್ನೂ ಮುಂತಾದ ಸ್ಥಳಗಳಲ್ಲಿ ಗುರ್ತಿಸಲಾಗಿದೆ.

೧. ಶಿಲ್ಪ : ಗಜಲಕ್ಷ್ಮಿ
ಸ್ಥಳ : ಛಬ್ಬಿ
ಜಿಲ್ಲೆ : ಧಾರವಾಡ
ಕಾಲ : ಕ್ರಿ.ಶ. ೧೧ನೇ ಶತಮಾನ

ಗಜಲಕ್ಷ್ಮಿಯು ಪದ್ಮಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾಳೆ. ಪದ್ಮಪೀಠ ಎರಡು ಹಂತಗಳಲ್ಲಿದೆ. ದ್ವಿಭುಜದಾರಿಯಾದ ಲಕ್ಷ್ಮಿ ಕಮಲದ ಮೊಗ್ಗನ್ನು ಕೈಗಳಲ್ಲಿ ಹಿಡಿದಿದ್ದಾಳೆ. ಇವಳ ಇಕ್ಕೆಲಗಳಲ್ಲಿ ಇಬ್ಬರು ಚಾಮರಧಾರಿಯರಿದ್ದಾರೆ. ಇವರು ಒಂದು ಕೈಯಲ್ಲಿ ಚಾಮರವನ್ನ ಮತ್ತೊಂದು ಕೈಯನ್ನು ಸೊಂಟದ ಮೇಲಿಟ್ಟುಕೊಂಡಿದ್ದಾಳೆ. ಇವರ ಬದಿಗಳಲ್ಲಿ ಎರಡು ಗಜಗಳಿದ್ದು ಅವು ನೀರನ್ನು ಕುಂಬದಲ್ಲಿ ತುಂಬಿಸಿರುವಂತೆ ಕಂಡರಿಸಲಾಗಿದೆ. ಚಾಮರಧಾರಿಯರ ಮೇಲ್ಭಾಗದಲ್ಲಿ ಮಾತ್ರ ಎರಡು ಗಜಗಳ ಮುಖಭಾಗವನ್ನು ಮಾತ್ರ ತೋರಿಸಿದ್ದಾರೆ. ಈ ಗಜಗಳೇ ಲಕ್ಷ್ಮಿಗೆ ಜಲಾಭಿಷೇಕ ಮಾಡುತ್ತಿರುವುದು ಈ ಗಜಗಳ ಮೇಲ್ಭಾಗದಲ್ಲಿ ವಾದ್ಯಗಾರರಿದ್ದಾರೆ. ಅಂದರೆ ಲಕ್ಷ್ಮಿಗೆ ಅಭಿಷೇಕ ಮಾಡುತ್ತಿರುವಾಗ ವಾದ್ಯ ಮೇಳಗಳನ್ನು ಮೊಳಗಿಸಲಾಗಿದೆ. ಶಿಲ್ಪಕ್ಕೆ ಸರಳ ಮಕರ ತೋರಣವಿದೆ.[೨]

೨. ಶಿಲ್ಪ : ಗಜಲಕ್ಷ್ಮಿ
ಸ್ಥಳ : ಬೆಳಗಲಿ
ಜಿಲ್ಲೆ : ಧಾರವಾಡ
ಕಾಲ : ೧೨ನೇ ಶತಮಾನ
ವಸ್ತು : ಕಪ್ಪುಶಿಲೆ

ಈ ಪಟ್ಟಿಕೆಯಲ್ಲಿ ಗಜ ಲಕ್ಷ್ಮಿಯು ಪದ್ಮಾಸನದಲ್ಲಿ ಪದ್ಮಪೀಠದ ಮೇಲೆ ಕುಳಿತಿದ್ದಾಳೆ. ತನ್ನ ಎರಡೂ ಕೈಗಳಲ್ಲಿ ಪದ್ಮವನ್ನಹಿಡಿದಿದ್ದಾಳೆ. ಪದ್ಮಪೀಠದ ಮೇಲೆಯೇ ನಿಂತಿರುವ ಗಜಗಳೆರಡು ಕುಂಬದಿಂದ ಲಕ್ಷ್ಮಿಗೆ ಅಭಿಷೇಕ ಮಾಡುತ್ತಿವೆ. ಗಜಗಳ ಮುಂದಿನ ಒಂದೊಂದು ಕಾಲುಗಳು ಸ್ವಲ್ಪ ಮೇಲೆದ್ದಿವೆ. ಈ ಗಜಗಳ ಹಿಂಭಾಗದಲ್ಲಿ ಎರಡೂ ಬದಿ ಸೊಂಡಿಲು ಹಾಗೂ ಸೊಂಡಿಲಿನಲ್ಲಿ ಹಿಡಿದ ಕಂಬಗಳನ್ನು ತೋರಿಸಲಾಗಿದೆ. ಇಲ್ಲಿ ಕೇವಲ ಸೊಂಡಿಲುದಂತ ಭಾಗಗಳಷ್ಟೇ ಕಂಡುಬರುತ್ತವೆ. ಹಾಗೆಯೇ ಗಜಗಳು ಮತ್ತು ಲಕ್ಷ್ಮೀ ಆಭಣಗಳಿಂದ ಅಲಂಕೃತಗೊಂಡಿದ್ದಾಳೆ.

೩. ಶಿಲ್ಪ : ಗಜಲಕ್ಷ್ಮಿ
ಸ್ಥಳ : ಕೋಳಿವಾಡ
ಜಿಲ್ಲೆ : ಧಾರವಾಡ
ಕಾಲ : ಕ್ರಿ.ಶ. ೧೨-೧೩ನೇ ಶತಮಾನ
ವಸ್ತು : ಕಪ್ಪುಶಿಲೆ

ಈ ಶಿಲ್ಪದ ಪಟ್ಟಿಕೆಯಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಗಜಲಕ್ಷ್ಮಿ ಚಿತ್ರಣ ಎರಡನೆಯ ಭಾಗದಲ್ಲಿ ಇಬ್ಬರ ನಿಂತ ಪುರುಷರ ಚಿತ್ರವಿದೆ. ಗಜಲಕ್ಷ್ಮಿಯು ಪರ್ಯಂಕಾಸನದಲ್ಲಿ ಕುಳಿತಿದ್ದಾಳೆ. ಎರಡು ಕೈಗಳಲ್ಲಿ ಪದ್ಮದ ಮಾಗ್ಗುಗಳನ್ನು ಹಿಡಿದಿದ್ದಾಳೆ. ಇವಳ ಬದಿಯಲ್ಲಿ ಎರಡು ಆನೆಗಳು ಕಂಬಗಳನ್ನು ಎತ್ತಿಹಿಡಿದಿದ್ದು, ಈ ಎರಡು ಆನೆಗಳ ಮೇಲ್ಭಾಗದಲ್ಲಿ ಮತ್ತೆರಡು ಆನೆಗಳಿದ್ದು ಅವು ಗಜಲಕ್ಷ್ಮಿಗೆ ಜಾಲಭಿಷೇಕ ಮಾಡುತ್ತಿವೆ. ಈ ಚಿತ್ರಣದಲ್ಲಿ ಆನೆಗಳು ನೀರನ್ನು ತುಂಬಿ ಲಕ್ಷ್ಮಿಗೆ ಜಲಾಭಿಷೇಕ ಮಾಡುತ್ತಿವೆ. ಎಂಬ ಅರ್ಥಬರುವಂತೆ ಚಿತ್ರಿಸಲಾಗಿದೆ. ಲಕ್ಷ್ಮಿಯು ಕಿರೀಟ ಪತ್ರಕುಂಡಲ, ಕಂಕಣ ಆಭರಣಗಳನ್ನು ಧರಿಸಿದ್ದಾಳೆ. ಪಕ್ಕದ ಚಿತ್ರದಲ್ಲಿ ಪುರುಷ ವ್ಯಕ್ತಿಗಳಿರುವುದನ್ನು ಗುರುತಿಸಬಹುದಾಗಿದೆ.[೩೩]

೪. ಶಿಲ್ಪ : ಗಜಲಕ್ಷ್ಮಿ

ಸ್ಥಳ : ಮಲ್ಲಿಗವಾಡ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ ೧೩ನೇ ಶತಮಾನ

ವಸ್ತು : ಕಪ್ಪುಶಿಲೆ

ಸೋಮೇಶ್ವರ ದೇವಾಲಯದ ಮುಂಭಾಗದಲ್ಲಿ ಈ ಶಿಲ್ಪವಿದ್ದು ಚಿಕ್ಕಗಾತ್ರದ ಲಕ್ಷ್ಮಿಯನ್ನು ದೊಡ್ಡ ಗಾತ್ರದ ಗಜಗಳನ್ನು ತೋರಿಸಲಾಗಿದೆ. ಲಕ್ಷ್ಮಿಯು ಪದ್ಮಾಸನದಲ್ಲಿ ತನ್ನ ಎರಡು ಕೈಗಳಲ್ಲಿ ಕಮಲಗಳನ್ನು ಹಿಡಿದು ಕುಳಿತಿದ್ದಾಳೆ. ಇವಳ ಇಕ್ಕೆಲಗಳಲ್ಲಿ ದೊಡ್ಡಗಾತ್ರದ ಗಜಗಳು ಕುಂಬಗಳಿಂದ ಲಕ್ಷ್ಮಿಗೆ ಅಭಿಷೇಕ ಮಾಡುತ್ತಿವೆ. ಗಜಗಳ ಮುಂದಿನ ಒಂದೊಂದು ಕಾಲುಗಳು ಸ್ವಲ್ಪ ಮೇಲೆದ್ದಿವೆ. ಈ ಗಜಗಳ ಹಿಂಭಾಗದಲ್ಲಿ ಎರಡೂ ಬದಿ ಸೊಂಡಿಲು ಹಾಗೂ ಸೊಂಡಿಲಿನಲ್ಲಿ ಹಿಡಿದ ಕುಂಬಗಳನ್ನು ತೋರಿಸಲಾಗಿದೆ. ಗಜಗಳು ಮತ್ತು ಲಕ್ಷ್ಮಿ ಆಭರಣಗಳಿಂದ ಅಲಂಕೃತಗೊಂಡಿದ್ದಾಳೆ.

ಉಮಾಮಹೇಶ್ವರ

ಶಿವನೊಂದಿಗೆ ಪಾರ್ವತಿಯ ಶಿಲ್ಪಗಳನ್ನು ತೋರಿಸುವುದು ಉಂಟು. ಈ ರೀತಿಯ ಶಿಲ್ಪಗಳನ್ನು ಉಮಾಮಹೇಶ್ವರ ಎಂದು ಕರೆಯಲಾಗುವುದು. ಇವುಗಳು ಆಸೀನ ಅಥವಾ ಸ್ಥಾನಿಕ ಭಂಗಿಯಲ್ಲಿರುತ್ತವೆ. ಸ್ಥಾನಿಕದಲ್ಲಿ ತ್ರಿಭಂಗಿಯಲ್ಲಿರುತ್ತವೆ. ಈ ರೀತಿಯ ಶಿಲ್ಪಗಳನ್ನು ಹುಬ್ಬಳ್ಳಿ, ಸುಳ್ಳ, ಛಬ್ಬಿ, ಕುರಡಿಕೇರಿ ಇತ್ಯಾದಿ ಗ್ರಾಮಗಳಲ್ಲಿ ಗುರುತಿಸಲಾಗಿದೆ.

೧. ಶಿಲ್ಪ : ಉಮಾಮಹೇಶ್ವರ

ಸ್ಥಳ : ಹುಬ್ಬಳ್ಳಿ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಈಶಿಲ್ಪವು ತ್ರಿಭಂಗಿಯಲ್ಲಿದ್ದು ಉಮಾ ಮತ್ತು ಮಹೇಶ್ವರರಿದ್ದಾರೆ. ಮಹೇಶ್ವರನು ಚತುರ್ಭುಜಧಾರಿಯಾಗಿದ್ದು ಉಮಾ ದ್ವಿಭುಜಧಾರಿಯಾಗಿದ್ದಾಳೆ. ಮಹೇಶ್ವರ ತನ್ನ ಕೈಯಲ್ಲಿ ಅಭಯ, ತ್ರಿಶೂಲ, ಡಮರು ಮತ್ತು ನಾಲ್ಕನೇ ಕೈಯಿಂದ ಉಮಾಳನ್ನು ಹಿಡಿದಿದ್ದಾನೆ. ಉಮಾಳು ತನ್ನ ಒಂದು ಕೈಯಿಂದ ಮಹೇಶ್ವರರನ್ನು ಹಿಡಿದಿದ್ದಾಳೆ. ಇವರು ವಸ್ತ್ರಾಭರಣ ಭೂಷಿತರಾಗಿದ್ದಾರೆ. ಇವರ ಬದಿಗಳಲ್ಲಿ ಕುಬ್ಜರನ್ನು ತೋರಿಸಲಾಗಿದೆ. ಶಿಲ್ಪದ ಸುತ್ತಲೂ ಮಕರತೋರಣವಿದೆ.

೨. ಶಿಲ್ಪ : ಉಮಾಮಹೇಶ್ವರ
ಸ್ಥಳ : ಸುಳ್ಳ
ಜಿಲ್ಲೆ : ಧಾರವಾಡ
ಕಾಲ : ಕ್ರಿ.ಶ. ೧೨ನೇ ಶತಮಾನ
ವಸ್ತು : ಕಪ್ಪುಶಿಲೆ

ಈ ಶಿಲ್ಪ ಪಟ್ಟಿಕೆಯಲ್ಲಿಯೂ ತ್ರಿಭಂಗಿಯಲ್ಲಿರುವ ಉಮಾಮಹೇಶ್ವರರಿದ್ದಾರೆ. ಮಹೇಶ್ವರ ಚತುರ್ಭುಜಧಾರಿಯಾಗಿದ್ದು ಉಮಾಮಹೇಶ್ವರ ತನ್ನ ಮೊದಲಿನ ಕೈಯಲ್ಲಿ ಅಭಿನಯದೊಂದಿಗೆ ಅಕ್ಷಯ ಪಾತ್ರೆಯನ್ನು ಹಿಡಿದಿದ್ದಾನೆ. ಎರಡನೇ ಕೈಯಲ್ಲಿ ತ್ರಿಶೂಲ ಮೂರನೇ ಕೈಯಲ್ಲಿ ಡಮರು, ನಾಲ್ಕನೇ ಕೈಯನ್ನು ಉಮೆಯಭುಜದ ಮೇಲೆ ಹಾಕಿದ್ದಾನೆ. ಉಮೆಯು ತನ್ನ ಒಂದು ಕೈಯನ್ನು ಸೊಂಟದ ಮೇಲೆ ಹಿಡಿದಿದ್ದಾಳೆ. ಮಹೇಶ್ವರ ಜಟಾಮುಕುಟನಾಗಿದ್ದು ನಾಗಬಂಧ, ಯಜ್ಞೋಪವೀತ, ಕಟವಸ್ತ್ರ, ಕೇಯೂರ, ಕಂಕಣ, ಕಿಂಕಿಣಿ, ಪಾದರಸಗಳನ್ನು ಧರಿಸಿದ್ದಾನೆ. ಉಮೆಯು ವಿವಿಧ ಆಭರಣಗಳಿಂದ ಅಲಂಕೃತಗೊಂಡಿದ್ದಾಳೆ. ಮಹೇಶ್ವರನ ಬದಿಯಲ್ಲಿ ಕೆಳಗೆ ನಂದಿ, ಮೇಲೆ ಗಣೇಶ, ಅದರ ಮೇಲೆ ಸರಸ್ವತಿಯ ಕಿರು ಶಿಲ್ಪಗಳಿವೆ.[೬೪]

೪. ಶಿಲ್ಪ : ಉಮಾಮಹೇಶ್ವರ
ಸ್ಥಳ : ಛಬ್ಬಿ
ಜಿಲ್ಲೆ : ಧಾರವಾಡ
ಕಾಲ : ೧೩-೧೪ನೇ ಶತಮಾನ
ವಸ್ತು : ಕಪ್ಪುಶಿಲೆ

ಇದೊಂದು ಮಂಡು ಶಿಲ್ಪವಾಗಿದೆ. ಈ ಶಿಲ್ಪ ಪಟ್ಟಿಕೆಯಲ್ಲಿ ಶಿವಪಾರ್ವತಿಯ ತ್ರಿಭಂಗಿಯಲ್ಲಿ ನಿಂತಿದ್ದಾರೆ. ಇಲ್ಲಿಯೂ ಶಿವ ಚತುರ್ಭುಜಧಾರಿಯಾಗಿ ಪಾರ್ವತಿ ದ್ವಿಭುಜಧಾರಿಯಾಗಿ ಇದ್ದಾಳೆ. ಪಾರ್ವತಿಯು ತನ್ನ ಬಲಗಾಲವನ್ನು ಹಿಂದಕ್ಕೆ ಮಡಚಿ ತ್ರಿಭಂಗಿಯಲ್ಲಿ ನಿಂತಿದ್ದಾಳೆ. ಆಯುಧಗಳು ಲಕ್ಷಣಗಳು ಆಭರಣಗಳು, ಸಾಮಾನ್ಯವಾಗಿಯೇ ಇದೆ. ಶಿವನ ಬಲಬದಿಯಲ್ಲಿ ಗಣೇಶನ ಕಿರು ಚಿತ್ರಣವಿದೆ. ಶಿಲ್ಪದ ಸುತ್ತಲೂ ಸ್ತಂಭಪಟ್ಟಿಕೆಯ ಮಕರ ತೋರಣವಿದೆ.

೫. ಶಿಲ್ಪ : ಉಮಾಮಹೇಶ್ವರ
ಸ್ಥಳ : ಛಬ್ಬಿ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಉಮಾಮಹೇಶ್ವರರು ಆಸೀನಭಂಗಿಯಲ್ಲಿದ್ದಾರೆ. ಮಹೇಶ್ವರನು ಸುಖಾಸನದಲ್ಲಿ ಕುಳಿತಿದ್ದಾನೆ. ಆತನ ಎಡತೊಡೆಯ ಮೇಲೆ ಪಾರ್ವತಿಯು ಕುಳಿತಿದ್ದಾಳೆ. ಮಹೇಶ್ವರನ ಮೊದಲ ಕೈ ಭಗ್ನಗೊಂಡಿದೆ. ನಂತರ ಕೈಗಳಲ್ಲಿ ತ್ರಿಶೂಲ, ಡಮರು ಹಿಡಿದಿದ್ದು ನಾಲ್ಕನೇ ಕೈಯಿಂದ ಉಮೆಯನ್ನು ಹಿಡಿದಿದ್ದಾನೆ. ಉಮೆಯು ತನ್ನ ಒಂದು ಕೈಯಿಂದ ಮಹೇಶ್ವರನನ್ನು ಮತ್ತೊಂದು ಕೈಯಲ್ಲಿ ಪದ್ಮವನ್ನು ಹಿಡಿದಿದ್ದಾಳೆ. ಶಿಲ್ಪ ಪಟ್ಟಿಕೆಯ ಸುತ್ತಲೂ ಸ್ತಂಭ ಪಟ್ಟಿಕೆಯ ಮಕರ ತೋರವಿದೆ. ಕೆಳಗೆ ಪೀಠದಲ್ಲಿ ಶಿವಪಾರ್ವತಿಯರ ವಾಹನಗಳನ್ನು ಚಿತ್ರಿಸಲಾಗಿದೆ.

೫.೪ ವೈಷ್ಣವ ಮೂರ್ತಿ ಶಿಲ್ಪಗಳು

ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣು ವೈಷ್ಣವ ಧರ್ಮದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದ್ದಾನೆ. ವಿಷ್ಣು ಅನೇಕ ಅವತಾರಗಳನ್ನು ಎತ್ತಿದ ಬಗ್ಗೆ ಅನೇಕ ಪುರಾಣಗಳಲ್ಲಿ ಕಂಡುಬರುತ್ತವೆ. ಶತಪಥ ಬ್ರಾಹ್ಮಣದಲ್ಲಿ ಇವನು ದಶಾವತಾರಗಳನ್ನು ಹೊಂದಿದ್ದಾನೆಂದು ಉಲ್ಲೇಖವಿದೆ.[೨೫] ಆದರೆ ವಿಷ್ಣುವಿನ ೨೪ ರೂಪಗಳನ್ನು ಕುರಿತು ರೂಪಮಂಡನ ಕೃತಿಯಲ್ಲಿ ಸೂಚಿಸಲಾದ ಹೆಸರುಗಳು ಮತ್ತು ಆಯುಧಗಳ ವಿವರಗಳನ್ನು ಪ್ರಸ್ತಾಪಿಸಲಾಗಿದೆ.[೨೬] ಹಿಗೆಯೇ ಬೇರೆ ಬೇರೆ ಕೃತಿಗಳು ಬೇರೆ ಬೇರೆ ಅವತಾರಗಳನ್ನು ಹೇಳುತ್ತವೆ. ಆದರೆ ಸಾಮಾನ್ಯವಾಗಿ ಕಂಡುಬರುವ ದಶಾವತಾರಗಳನ್ನು ಮಾತ್ರ ಇಲ್ಲಿ ಉಲ್ಲೆಖಿಸಲಾಗಿದೆ.

೧. ಮತ್ಯಅವತಾರ
೨. ಕೂರ್ಮಅವತಾರ
೩. ವರಹಾ ಅವತಾರ
೪. ನರಸಿಂಹ ಅವತಾರ
೫. ವಾಮನ ಅವತಾರ
೬. ಪರಶುರಾಮ ಅವತಾರ
೭. ರಾಮ ಅವತಾರ
೮. ಕೃಷ್ಣ ಅವತಾರ
೯. ಬುದ್ಧ ಅವತಾರ
೧೦. ಕಲ್ಕಿ ಅವತಾರ

ಮೂರ್ತಿಶಿಲ್ಪ ವೈಶಿಷ್ಟ್ಯಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಹೆಚ್ಚಿನ ವಿಷ್ಣುವಿನ ಶಿಲ್ಪಗಳು ಸಮಭಂಗಿಯಲ್ಲಿರುತ್ತವೆ. ಚತುರ್ಭುಜಗಳನ್ನು ಹೊಂದಿದ ಕೈಗಳಲ್ಲಿ ಶಂಖ, ಚಕ್ರ, ಪದ್ಮ ಮತ್ತು ಗದೆ ಆಯುಧಗಳಿರುತ್ತವೆ. ಆಯುಧಗಳು ಸ್ಥಾನಪಲ್ಲಟವಾದಂತೆ ಅವುಗಳ ಆಧಾರದಿಂದ ವಿಷ್ಣುವಿನ ೨೪ ಮೂರ್ತಿಗಳನ್ನು ಹೆಸರು ಬದಲಾಗುತ್ತದೆ. ಈ ಶಿಲ್ಪಗಳಿಗೆ ಕಿರೀಟಮುಕುಟ, ಉದ್ದನೆಯ ವೈಜಯಂತಿಮಾಲ. ಹಾರ, ಕಂಠಿ ಸರ ಉದರಬಂಧ, ಕೇಯೂರ, ಕಂಕಣ, ಕಿಂಕಣಿ, ಪಾದಸರ ಮುಂತಾದ ಆಭರಣಗಳಿರುತ್ತವೆ. ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿ, ವಾಹನವಾದ ಗರುಡನನ್ನು ಚಿತ್ರಿಸಿರುತ್ತಾರೆ.[೨೭]

ಪ್ರಸ್ತುತ ಹುಬ್ಬಳ್ಳಿ ಪ್ರದೇಶಕ್ಕೆ ಸಂಬಂಧಿಸಿದಂತೆ ಅಮರಗೋಳ, ಕೋಳಿವಾಡ, ನೂಲ್ವಿ, ಮಂಟೂರು, ಬ್ಯಾಹಟ್ಟಿ, ಸ್ಥಳಗಲ್ಲಿ ಈ ವಿಷ್ಣುವಿನ ಶಿಲ್ಪಗಳನ್ನು ಕಾಣಬಹುದಾಗಿದೆ.

೧. ಶಿಲ್ಪ - ವಿಷ್ಣು

ಸ್ಥಳ - ಬ್ಯಾಹಟ್ಟಿ

ಜಿಲ್ಲೆ - ಧಾರವಾಡ

ಕಾಲ - ಕ್ರಿ.ಶ. ೧೨ ನೇ ಶತಮಾನ

ವಸ್ತು - ಕಪ್ಪುಶಿಲೆ

ವಿಷ್ಣುಶಿಲ್ಪವು ಸಿಂಹಪೀಠದ ಮೇಲೆ ನಿಂತಿದ್ದು, ಪೀಠದಲ್ಲಿ ಗರುಡನಚಿನ್ನೆ ಇದೆ. ಸಮಭಂಗಿಯಲ್ಲಿರುವ ವಿಷ್ಣುವಿನ ಕೈಗಳಲ್ಲಿ ಪದ್ಮ ಶಂಖ, ಚಕ್ರ ಮತ್ತು ಗಧಾ ಹಿಡಿದು ವಸ್ತ್ರಾಭರಣಗಳಿಂದ ಅಲಂಕೃತಗೊಂಡಿದ್ದಾನೆ. ಪೀಠ ಮತ್ತು ಶಿಲ್ಪಕ್ಕೆ ಇಲ್ಲಿ ಸಾಮ್ಯವಿಲ್ಲ. ಏಕೆಂದರೆ ಪೀಠದ ಮೇಲೆ ಗರುಡ ಚಿನ್ಹೆಯ ಕೆತ್ತನೆ ಪ್ರಮಾಣ ಬದ್ಧವಾಗಿದ್ದು ಶಿಲ್ಪದ ಕೆತ್ತನೆಯಲ್ಲಿ ಪ್ರಮಾಣ ಬದ್ದತೆ ಕಂಡುಬರುವುದಿಲ್ಲ. ಈ ಸಿಂಹ ಪೀಠವನ್ನು ಪ್ರಾಯಶಃ ಜೈನ ಶಿಲ್ಪಕ್ಕೆ ಬಳಸಿದ್ದಿರಬಹುದು. ಏಕೆಂದರೆ ಜೈನ ಪೀಠಗಳಲ್ಲಿ ಸಿಂಹಪೀಠ ಸಾಮಾನ್ಯವಾದುದಾಗಿದೆ.[೩೮]

೨. ಶಿಲ್ಪ : ನಾರಾಯಣ

ಸ್ಥಳ : ಹುಬ್ಬಳ್ಳಿ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ ನೇ ಶತಮಾನ

ವಸ್ತು : ಕಪ್ಪುಶಿಲೆ

ಹುಬ್ಬಳ್ಳಿಯ ಭವಾನಿಶಂಕರ ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ಪೀಠದ ಮೇಲೆ ಈ ನಾರಾಯಣ ಶಿಲ್ಪವಿದೆ. ನಾರಾಯಣ ಚತುರ್ಭುಜಧಾರಿಯಾಗಿ ಸ್ಥಾನಿಕ ಭಂಗಿಯಲ್ಲಿದ್ದಾನೆ. ತನ್ನ ಕೈಗಳಲ್ಲಿ ಶಂಖ, ಪದ್ಮ, ಗಧೆಯನ್ನು ಹಿಡಿದಿದ್ದಾನೆ. ನಾಲ್ಕನೆಯ ಕೈ ಭಗ್ನಗೊಂಡಿದೆ ಬಹುಷಃ ಇಲ್ಲಿ ಅಭಯ ಹಸ್ತ ಅಥವಾ ಚಕ್ರ ಹಿಡಿದಿರಬಹುದು. ಶಿಲ್ಪದ ಸುತ್ತಲೂ ಮಕರತೋರಣ ಪ್ರಭಾವಳಿಯಿದ್ದು ಅದರಲ್ಲಿ ವಿಷ್ಣುವಿನ ದಶಾವತಾರಗಳನ್ನು ಚಿತ್ರಿಸಲಾಗಿದೆ. ಉದ್ದನೆಯ ಕಿರೀಟ ಮುಕುಟ ಧರಿಸಿದ್ದಾನೆ. ನಾರಾಯಣನ ಇಕ್ಕೆಲಗಳಲ್ಲಿ ಶ್ರೀದೇವಿ ಭೂ ದೇವಿಯರಿದ್ದಾರೆ. ಬಲಗಡೆ ಕುಳಿತ ಗರುಡನಿದ್ದಾನೆ. ಇದು ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆಯಾಗಿದೆ.[೩೯]

೩. ಶಿಲ್ಪ : ದತ್ತಾತ್ರೇಯ

ಸ್ಥಳ : ಕೋಳಿವಾಡ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಕೋಳಿವಾಡ ಗ್ರಾಮದ ಮಧ್ಯದಲ್ಲಿರುವ ದತ್ತಾತ್ರೆಯನು ಮೂರು ತಲೆಗಳನ್ನು ಅಷ್ಟಭುಜಗಳನ್ನು ಹೊಂದಿದ್ದಾನೆ. ಕೈಗಳಲ್ಲಿ ಗದಾ, ತ್ರಿಶೂಲ, ಅಕ್ಷಮಾಲ, ಡಮರು ಮತ್ತು ಚಕ್ರಗಳನ್ನು ಹಿಡಿದಿದ್ದಾನೆ. ಈತನನ್ನು ಬ್ರಹ್ಮ, ವಿಷ್ಣು ಮಹೇಶ್ವರ ರೂಪದಲ್ಲಿರುವ ತ್ರಿಮೂರ್ತಿ ಎಂದು ಕರೆಯಲಾಗುತ್ತದೆ. ಈ

ಮೂರ್ತಿ ಶಿಲ್ಪದ ಕಾಲಿನ ಬಳಿ ಹಂಸ, ನಂದಿ ಮತ್ತು ಗರುಡ ಚಿತ್ರಗಳಿವೆ. ದತ್ತಾತ್ರೇಯನು ಮೂರು ಮುಖಗಳನ್ನು ಆರು ಕೈಗಳನ್ನು ಹೊಂದಿದ್ದಾನೆ. ಈತನ ಹಿಂಭಾಗದಲ್ಲಿ ನಿಂತ ನಂದಿಯಿದೆ.

ಹನುಮಂತ

ಭಾರತದಲ್ಲಿ ಹನುಮಂತನಗುಡಿ ಇಲ್ಲಿ ಗ್ರಾಮವಿಲ್ಲ, ಪಟ್ಟಣವಿಲ್ಲ ಎಂದೇ ಹೇಳಬಹುದು. ಇಂತಹ ಸರ್ವಜನ ಪೂಜಾಭಾಜನನಾದ ಹನುಮಾನ ರಾಮಾಯಣದ ಮಹಾವೀರರಲ್ಲಿ ಒಬ್ಬ ಆಗ ಮಗಳಲ್ಲಿ ಹನುಮಂತನನ್ನು ರುದ್ರಾಂಶ ಸಂಭೂತನೆಂದೂ ಸೂರ್ಯಪುತ್ರನೆಂದೂ, ವಾಯುಪುತ್ರನೆಂದೂ ರಾಮಭಕ್ತನೆಂದೂ, ಮುಖ್ಯ ಪ್ರಾಣನೆಂದೂ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಜಾನಪದದಲ್ಲಿ ಹನುಮಂತನನ್ನು ದುಷ್ಟಶಕ್ತಿಗಳನ್ನು ಶತ್ರುಗಳನ್ನು ನಾಶಮಾಡುವವನೆಂದು ರೋಗ ಪೀಡೆಗಳನ್ನು ಪರಿಹರಿಸುವನೆಂದು ಭಯಭೀತಿಯನ್ನು ಹೋಗಲಾಡಿಸುವನೆಂದು ಬಯಕೆಗಳನ್ನು ತೀರಿಸುವುದು ಇವೆಲ್ಲಾ ಈತನ ನೆರವಿನಿಂದಲೇ ನಡೆಯಬೇಕೆಂದು ಪ್ರತಿಯೊಂದು ಗ್ರಾಮದಲ್ಲಿ ಈತನನ್ನು ಆರಾಧಿಸುತ್ತಾರೆ. ಪ್ರಾಚೀನ ಕಾಲದಲ್ಲಿ ಅರಸರು ತಮ್ಮ ಸೈನಿಕರಲ್ಲಿ ರಾಜಭಕ್ತಿ ಮತ್ತು ಸಾಹಸ ಕಾರ್ಯಶಕ್ತಿಯನ್ನು ಮೂಡಿಸಲೆಂದು ಕೋಟೆ, ಪಟ್ಟಣಗಳ ದ್ವಾರದಲ್ಲಿ ಹನುಮಂತನ ಶಿಲ್ಪಗಳನ್ನು ಪ್ರತಿಷ್ಠಾಪಿಸುತ್ತಿದ್ದರು.[೪೧]

ದಕ್ಷಿಣ ಭಾರತದ ಅನೇಕ ರಾಜಮನೆತನಗಳು ಆತನ ಚಿತ್ರಗಳನ್ನು ತಮ್ಮ ನಾಣ್ಯ, ಧ್ವಜ, ಹಾಗೂ ಲಾಂಛನದಲ್ಲಿ ಮುದ್ರಿಸುತ್ತಿದ್ದರು. ಹೊಯ್ಸಳರ ಮನೆತನದ ಕಾಲಾವಧಿಯ ಉತ್ತರಾರ್ಧದಿಂದ ಶ್ರೀರಾಮ ದೇವಾಲಯದ ಮುಂದೆ ಅಂಜಲಿ ಮುದ್ರಾಸಕ್ತ ಹನುಮಂತನ ಶಿಲ್ಪವನ್ನು ಪ್ರತಿಷ್ಠಾಪಿಸುವ ಪರಂಪರೆ ಬೆಳೆದುಬಂದಿತು.[೪೨]

ಸಾಮಾನ್ಯವಾಗಿ ಸ್ಥಾನಿಕ ಹನುಮಂತನ ಶಿಲ್ಪಗಳ ಕೈಯಲ್ಲಿ ಖಡ್ಗ, ತ್ರಿಶೂಲ, ಶಂಖ, ಚಕ್ರ, ಅಂಕುಶ, ಪರ್ವತ, ಗದೆ, ಮುಷ್ಠಿ ಆಯುಧಗಳನ್ನು ತೋರಿಸಲಾಗುತ್ತದೆ. ಕೆಲವು ಹನುಮಂತನ ಶಿಲ್ಪಗಳ ಕೈಯಲ್ಲಿ ಶಂಖ, ಚಕ್ರ, ಫಲಗಳಿವೆ.[೪೩] ಅಧಿಕ ಸಂಖ್ಯೆಯಲ್ಲಿ ಬಯಲಾಂಜನೆಯ ಗುಡಿಗಳಂತೂ ಅಸಂಖ್ಯಾತವಾಗಿದ್ದು, ಸಾಮಾನ್ಯವಾಗಿ ಈ ದೇವಾಲಯಗಳು ದಕ್ಷಿಣಾಭಿಮುಖವಾಗಿರುತ್ತವೆ. ಮೂರ್ತಿಯ ಮುಖ ಪೂರ್ವದಿಕ್ಕಿಗಿರುವುದೇ ಹೆಚ್ಚು ಪೂರ್ವಭಿಮುಖವಾಗಿರುವ ಗುಡಿಗಳಲ್ಲಿ ಮುಖ ಉತ್ತರಕ್ಕಿರುತ್ತದೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಉಣಕಲ್ಲು, ಶಿರಗುಪ್ಪಿ, ಬುಡರಸಿಂಗಿ, ಬ್ಯಾಹಟ್ಟಿ, ಅದರಗುಂಚಿ ಹುಬ್ಬಳ್ಳಿ ಇನ್ನೂ ಮುಂತಾದ ಗ್ರಾಮಗಳಲ್ಲಿ ಗುರುತಿಸಬಹುದಾಗಿದೆ.

೫.೫ ಜೈನಮೂರ್ತಿ ಶಿಲ್ಪಗಳು

ಭಾರತದ ಮೂರ್ತಿಶಿಲ್ಪಗಳಲ್ಲಿ ಜೈನ ಶಿಲ್ಪಗಳ ತಯಾರಿಕೆಯು ಪ್ರಾಚೀನಕಾಲದಿಂದಲೂ ನಿರಂತರವಾಗಿ ಬೆಳೆದು ಬಂದಿದೆ ಎಂಬುದಕ್ಕೆ ಸಾಹಿತ್ಯಿಕ ಹಾಗೂ ಶಾಸನ ಆಧಾರಗಳು ಹೇರಳವಾಗಿ ಸಿಗುತ್ತವೆ. ಜೈನ ತೀರ್ಥಂಕರರು ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯಕ್ಕೆ ಹೆಚ್ಚು ಮಹತ್ವ ನೀಡಿದರು. ಹೀಗಾಗಿ ಆತ್ಮದ ಪರಿಶುದ್ಧತೆಯನ್ನು ಹೊರತರುವುದು ಹಾಗೂ ಆತ್ಮದ ಉನ್ನತಿಗಾಗಿ ವ್ಯವಹಾರಿಕ ಮತ್ತು ಸುಮಧುರವಾದ ಹಿನ್ನೆಲೆಯನ್ನು ಏರ್ಪಡಿಸುವುದು. ಜೈನ ಸಾಹಿತ್ಯ ಕಲೆಯ ಮತ್ತು ಮೂರ್ತಿಶಿಲ್ಪದ ಪ್ರಧಾನ ಉದ್ದೇಶ.[೪೪]

ಜೈನಾಗಮಗಳ ಪ್ರಕಾರ ವಜ್ರಾಸನ ವೀರಾಸನ, ಕುಕ್ಕುಟಾಸನ ಮೊದಲಾದ ಆಸನಗಳಿಂದ ಪರ್ಯಂಕಾಸನ ಅಥವಾ ಪದ್ಮಾಸನ ಮತ್ತು ಖಡ್ಗಾಸನ ಅಥವಾ ಕಾಯೋತ್ಸರ್ಗ ಎಂಬ ಆಸನಗಳು ಧ್ಯಾನವನ್ನು ಕೈಗೊಂಡು ಮೋಕ್ಷವನ್ನು ಸಾಧಿಸಲು ತುಂಬಾ ಉಪಯುಕ್ತವಾಗಿದೆ.[೪೫]

ಪ್ರಾಚೀನ ತೀರ್ಥಂಕರ ವಿಗ್ರಹಗಳು ಮೇಲ್ನೋಟಕ್ಕೆ ವ್ಯತ್ಯಾಸಗಳಿಲ್ಲದೆ ಒಂದೇ ರೀತಿಯ ಮೂರ್ತಿಗಳಂತೆ ಕಾಣುತ್ತದೆ. ಆದರೆ ೨೪ ತೀರ್ಥಂಕರರಲ್ಲಿ ಆದಿನಾಥನನ್ನ ಆತನ ಭುಜದವರೆಗೂ ಇಳಿಬಿದ್ದ ಕೇಶವಿಂದ ಮತ್ತು ಸುಪಾಶ್ವನಾಥ ಪಾಶ್ವನಾಥರನ್ನ ಅವರು ಹೊಂದಿರುವ ಪಂಚ ಮತ್ತು ಸಪ್ತ ನಾಗರ ಪಾತ್ರಗಗಳಿಂದ ತಟ್ಟನೆ ಗುರುತಿಸಬಹುದು. ಉಳಿದ ಇಪ್ಪತ್ತೊಂದು ತೀರ್ಥಂಕರರು ಒಂದೇ ರೀತಿಯಲ್ಲಿ ಗೋಚರಿಸುತ್ತಾರೆ. ಒಬ್ಬ ತೀರ್ಥಂಕರನಿಗೂ ಮತೊಬ್ಬ ತೀರ್ಥಂಕರನಿಗೂ ಕೆಲವು ಅಂಶಗಳಲ್ಲಿ ವ್ಯತ್ಯಾಸವಿದೆ. ಅವುಗಳಲ್ಲಿ ಮುಖ್ಯವಾಗಿ ಲಾಂಛನ, ಎತ್ತರ, ಬಣ್ಣ ಮತ್ತು ಯಕ್ಷ-ಯಕ್ಷಿಣಿಯರು, ಪ್ರತಿ ತೀರ್ಥಂಕರನಿಗೂ ಮೂರ್ತಿಯ ಬಲಭಾಗದಲ್ಲಿ ಯಕ್ಷನೂ ಎಡಭಾಗದಲ್ಲಿ ಯಕ್ಷಿಣಿಯು ಇರುತ್ತಾಳೆ.

ಜಿನ ಪ್ರತಿಮೆಯು ಶಾಂತರೂಪವೂ ಪ್ರಸನ್ನ ಗಂಭೀರವೂ ಮಧ್ಯಸ್ಥವೂ ಆಗಿದ್ದು ಕೇವಲ ಜ್ಞಾನ ಸಮಯದ ಸಮಸ್ತ ಭಾಗಗಳಿಂದ ಮುಕ್ತನಾಗುವ ಶರೀರವುಳ್ಳದ್ದು ಆಗಿದೆ. ಕೆಲವೊಮ್ಮೆ ತೀರ್ಥಂಕರ ಯಾವ ಗಿಡದ ಕೆಳಗೆ ದೀಕ್ಷೆಗೊಂಡನೋ ಜ್ಞಾನ ಹೊಂದಿನೋ ಆ ಗಿಡಗಳನ್ನು ಶಿಲ್ಪಗಳಲ್ಲಿ ತೋರಿಸಲಾಗುತ್ತದೆ. ತೀರ್ಥಂಕರರು ಧರ್ಮೋಪದೇಶ ಮಾಡುವ ಸಭೆಗೆ ಸಮವಸರಣವೆಂದು ಹೆಸರು. ಈ ಸಮವಸರಣ ಮಂಟಪಕ್ಕೆ ನಾಲ್ಕು ಕಡೆಗಳಿಂದ ನಾಲ್ಕು ಪ್ರವೇಶದ್ವಾರಗಳಿರುತ್ತವೆ. ಇವು ಒಂದೇ ರೀತಿಯಲ್ಲಿರುತ್ತವೆ. ಇವು ಮಾನಸ್ಥಂಭಗಳಾಗಿರುತ್ತವೆ.

ಜಿನ ಪ್ರತಿಮೆಯು ಮುಕ್ಕೊಡೆ, ಅಶೋಕವೃಕ್ಷ, ಚಾಮರ, ಸಿಂಹಪೀಠ, ಪ್ರಭಾಮಂಡಲ, ದಿವ್ಯಧ್ವನಿ, ಪುಷ್ಪದೃಷ್ಟಿ ಮತ್ತು ದುಂದುಬಿಗಳೆಂಬ ಅಷ್ಟ ಪ್ರತಿಹಾರ್ಯಗಳನ್ನ ಹೊಂದಿರುತ್ತದೆ ಪಾದಪೀಠದ ಕೆಳಗೆ ಲಾಂಛನಗಳಿರುತ್ತವೆ. ಎಡ ಬಲಗಳಲ್ಲಿ ಯಕ್ಷ ಯಕ್ಷಿಣಿಯರಿರುತ್ತಾರೆ. ಇವರನ್ನು ತೀರ್ಥಂಕರ ರಕ್ಷಕರೆಂದೂ ಹೇಳುತ್ತಾರೆ. ತ್ರಿಲೋಕದೊಡೆಯ ಎಂಬುದನ್ನು ಸೂಚಿಸುತ್ತದೆ.

ಹಾಗೆಯೇ ತೀರ್ಥಂಕರರ ಶಿಲ್ಪದ ಇಕ್ಕೆಲಗಳಲ್ಲಿ ಚಾಮರಧಾರಿ ಅಥವಾ ಚಾಮರಧಾರಿಣಿಯರ ಶಿಲ್ಪಗಳಿರುತ್ತವೆ. ಇವರು ತಮ್ಮ ಕೈಯಲ್ಲಿ ಚಾಮರಗಳನ್ನು ಹಿಡಿದು ನಿಂತಿರುತ್ತಾರೆ. ಕೆಲವೊಮ್ಮೆ ಚಾಮರಗಳನ್ನು ಮಾತ್ರ ತೋರಿಸಲಾಗಿರುತ್ತದೆ. ಜೈನ ಶಿಲ್ಪಗಳಿಗೆ ಸಂಬಂಧಿಸಿದಂತೆ ತೀರ್ಥಂಕರರು ಅವರ ಬಣ್ಣ ಲಾಂಛನ ಹುಟ್ಟಿದ ಸ್ಥಳ, ತಂದೆ ತಾಯಿ, ಪರಿನಿರ್ವಾಣ ಹೊಂದಿದ ಸ್ಥಳ ಇನ್ನು ಮುಂತಾದ ವಿಷಯದ ಬಗ್ಗೆ ತಿಳಿಯಲಾಗಿದೆ.

ಜೈನ ಪರಂಪರೆಯ ದಿಗಂಬರ ಪಂಥದ ಸಂಹಿತೆಗಳ ಪ್ರಕಾರ ವರ್ತಮಾನ ಕಾಲದ ೨೪ ತೀರ್ಥಂಕರ ಸಹಚರರು ಮತ್ತು ಲಾಂಛನ ಹೀಗಿವೆ.[೪೬]

ಕ್ರ.ಸಂ	ತೀರ್ಥಂಕರರು	ಲಾಂಛನಗಳು	ಯಕ್ಷರು	ಯಕ್ಷಿಣಿಯರು
೦೧.	ವೃಷಭನಾಥ	ಎತ್ತು	ಗೋಮುಖ	ಚಕ್ರೇಶ್ವರಿ
೦೨.	ಅಜಿತನಾಥ	ಆನೆ	ಮಹಾಯಕ್ಷ	ರೋಹಿಣಿ
೦೩.	ಶಂಭವನಾಥ	ಕುದುರೆ	ತ್ರಿಮುಖ	ಪ್ರಜ್ಞಪ್ತಿ

೦೪.	ಅಬಿನಂಧನಾಥ	ಮಂಗ	ಯಕ್ಷೇಶ್ವರ	ವಜ್ರಶಂಖಲಾ
೦೫.	ಸುಮತಿನಾಥ	ಚಕ್ರವಾಕಪಕ್ಷಿ	ತುಂಬರು	ಪುರುಷದತ್ತೆ
೦೬.	ಪದ್ಮಪ್ರಭಾನಾಥ	ಕಮಲ	ಕುಸಮಾವರ	ಮನೋವೇಗೆ
೦೭.	ಸುಪಾರ್ಶ್ವನಾಥ	ಸ್ವಸ್ತಿಕ	ವರನಂದಿ	ಕಾಳಿ
೦೮.	ಚಂದ್ರಪ್ರಭನಾಥ	ಚಂದ್ರ	ಶ್ಯಾಮ	ಜ್ವಾಲಾಮಾಲಿನಿ
೦೯.	ಪುಷ್ಪದಂತನಾಥ	ಮೊಸಳೆ	ಅಜಿತ	ಮಹಾಕಾಳಿ
೧೦.	ಶೀತಲನಾಥ	ಕಲ್ಪವೃಕ್ಷ	ಬ್ರಹ್ಮ	ಮಾನವಿ
೧೧.	ಶ್ರೇಯಾಂಸನಾಥ	ಖಡ್ಗಾಮೃಗ	ಈಶ್ವರ	ಗೌರಿ
೧೨.	ವಾಸುಪೂಜ್ಯನಾಥ	ಕೋಣ	ಕುಮಾರ	ಗಾಂಧಾರಿ
೧೩.	ವೀರುಲನಾಥ	ಹಂದಿ	ಷಣ್ಮುಖ	ವೈರೊಟಿ
೧೪.	ಅನಂತನಾಥ	ಕರಡಿ	ಪಾತಾಳ	ಅನಂತಮಲೆ
೧೫.	ಧರ್ಮನಾಥ	ವಜ್ರ	ಕಿನ್ನರ	ಮಾನವಿ
೧೬.	ಶಾಂತಿನಾಥ	ಜಿಂಕೆ	ಗರುಡ	ಮಹಾಮಾನಸಿ
೧೭.	ಕುಂಥುನಾಥ	ಕುರಿ	ಗಂಧರ್ವ	ಜಮೆ
೧೮.	ಅರೆನಾಥ	ಮೀನು	ಮಹೇಂದ್ರ	ವಿಜಯೆ
೧೯.	ಮಲ್ಲಿನಾಥ	ಕುಂಭ	ಕುಬೇರ	ಅಪರಾಜಿತೆ
೨೦.	ಮನಿಸವ್ರನಾಥ	ಆಮೆ	ವರುಣ	ಬಹುರೂನಣಿ
೨೧.	ನಮಿನಾಥ	ನೀಲಕಮಲ	ವಿದಯತ್ರ್ಪಭ	ಚಾಮುಂಡಿ
೨೨.	ನೇಮಿನಾಥ	ಶಂಖ	ಸರ್ವಾಹಣ	ಕೂಷ್ಮಾಂಡಿಗಿ
೨೩.	ಪಾರ್ಶ್ವನಾಥ	ಸರ್ಪ	ಧರಣೇಂದ್ರ	ಪದ್ಮಾವತಿ
೨೪.	ಮೆಹಾವೀರ	ಸಿಂಹ	ಮಾತಂಗ	ಸಿದ್ಧಾಯಿನಿ

ಪ್ರಸ್ತುತ ಅಧ್ಯಯನದಲ್ಲಿ ಛಟ್ಟಿ, ಬುಡರಸಿಂಗಿ, ಹಳೇಹುಬ್ಬಳ್ಳಿ, ಅದರಗುಂಬೆ, ಶಿರಗುಪ್ಪಿ, ಬ್ಯಾಹಟ್ಟಿ, ಇಂಗಳಹಳ್ಳಿ ಇನ್ನೂ ಮುಂತಾದ ಗ್ರಾಮಗಳಲ್ಲಿ ಗುರ್ತಿಸಲಾಗಿದೆ.

೧. ಶಿಲ್ಪ : ಚೌವ್ವಿಸ ತೀರ್ಥಂಕರ

ಸ್ಥಳ : ಬುಡರಸಿಂಗಿ

ಜಿಲ್ಲೆ : ಧಾರವಾಡ

ಕಾಲ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ವೃಷಭನಾದ ಪೀಠದ ಮೇಲೆ ಕಾರ್ಯೋತ್ಸರ್ಗ ಭಂಗಿಯಲ್ಲಿದ್ದಾನೆ. ಭುಜಗಳು ಅಗಲವಾಗಿದ್ದು ಕಾಲಗಳೂ ನೀಳವಾಗಿವೆ. ಕುತ್ತಿಗೆ ಮತ್ತು ಹೊಟ್ಟೆಯ ಬಳಿ ಅರ್ಧವೃತ್ತಾಕರಾದ ಗೆರೆಗಳಿವೆ. ಈತ ನಿರಾಭಣನಾಗಿದ್ದಾನೆ. ತಲೆಯಲ್ಲಿ ಗುಂಗುರು ಕೂದಲುಗಳಿದ್ದು ಕೂದಲು ಭುಜದ ಮೇಲೆ ಹರಡಿವೆ. ಕಿವಿಗಳು ಉದ್ದವಾಗಿವೆ. ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲವಿದೆ. ಅದರ ಮೆಲೆ ಅಲಂಕಾರಿಕ ಛತ್ರಿಯಿದೆ. ತಲೆಯ ಸಮಭಾಗಕ್ಕೆ ಪ್ರಭಾಮಂಡಲದ ಇಕ್ಕೆಲಗಳಲ್ಲಿ ಚೌರಿಗಳನ್ನು ಹಿಡಿದು ನಿಂತಿರುವ ಯಕ್ಷ ಯಕ್ಷಿಣಿಯರಿದ್ದಾರೆ. ಶಿಲ್ಪದ ಸುತ್ತಲೂ ಸ್ತಂಭ ಪ್ರಭಾವಳಿಯಿದೆ. ಪ್ರಭಾವಳಿಯಲ್ಲಿ ಎರಡು ಸ್ತಂಭಗಳ ಕೆಳಭಾಗದಲ್ಲಿ ಪದ್ಮಾಸನದಲ್ಲಿ ಕುಳಿತ ಇಪ್ಪತ್ಮೂರು ತೀರ್ಥಂಕರಿದ್ದಾರೆ.[೪೭]

೨. ಶಿಲ್ಪ : ಸುಪಾರ್ಶ್ವನಾಥ

ಸ್ಥಳ : ಛಬ್ಬಿ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಪ್ರಕಟಣೆ ಆರ್.ಗೋಪಾಲ್ ಧಾರವಾಡ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ ೨೦೦೮, ಪು. ೧೫೨,

ಸುಪಾರ್ಶ್ವನಾಥನು ಪದ್ಮಪೀಠದ ಮೇಲೆ ಧ್ಯಾನಮುದ್ರೆಯಲ್ಲಿ ಕುಳಿತಿದ್ದಾನೆ. ಭುಜಗಳು ಅಗಲವಾಗಿವೆ. ತಲೆಯ ಹಿಂಬಾಗದಲ್ಲಿ ಪ್ರಭಾಮಂಡಲವಿದೆ. ಪ್ರಭಾಮಂಡಲದ ಮೇಲೆ ಐದು ಹೆಡೆ ಸರ್ಪ ತನ್ನ ಹೆಡೆಗಳನ್ನು ಬಿಚ್ಚಿಕೊಂಡಿವೆ. ಸರ್ಪದ ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಸುಪಾರ್ಶ್ವನಾಥನ ಬದಿಗಳಲ್ಲಿ ವರನಂದಿ ಯಕ್ಷ, ಕಾಳಿಕಾ ಯಕ್ಷಿಣಿಯರು, ಕುಳಿತ ಕಿರು ಚಿತ್ರಗಳಿವೆ. ಇವರ ಮೇಲ್ಭಾಗದಲ್ಲಿ ತ್ರಿಭಂಗಿಯಲ್ಲಿ ನಿಂತ ಚಾಮರಧಾರಿಯರಿದ್ದಾರೆ. ಶಿಲ್ಪದ ಮೇಲ್ಭಾಗದಲ್ಲಿ ಪ್ರಭಾವಳಿಯಿದೆ.[೪೮]

೩. ಶಿಲ್ಪ : ಸುಪಾರ್ಶ್ವನಾಥ

ಸ್ಥಳ : ಅದರಗುಂಚಿ

ಜಿಲ್ಲೆ : ಧಾರವಾಡ

ಕಾಲ : ಕ್ರಿ.ಶ. ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಸುಪಾರ್ಶ್ವನಾಥನು ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲವಿದೆ. ಮೇಲ್ಭಾಗದಲ್ಲಿ ಐದು ಹೆಡೆನಾಗ ತನ್ನ ಹೆಡೆಯನ್ನು ಬಿಚ್ಚಿದೆ. ಈತನ ಭುಜಕ್ಕೆ ಸಮಾಂತರವಾಗಿ ಚಾಮರಧಾರಿಯರಿದ್ದಾರೆ. ಇವರು ವಸ್ತ್ರಾಭರಣ ಭೂಷಿತರಾಗಿದ್ದಾರೆ.[೪೯]

೪. ಶಿಲ್ಪ : ಸುಪಾರ್ಶ್ವನಾಥ

ಸ್ಥಳ : ಅದರಗುಂಚಿ

ಜಿಲ್ಲೆ : ಧಾರವಾಡ

ಕಾಲ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಬೃಹದಾಕಾರವಾಗಿರುವ ತೀರ್ಥಂಕರ ಶಿಲ್ಪವು ಸಿಂಹಪೀಠದ ಮೇಲೆ ಅರ್ಧಪದ್ಮಾಸನದಲ್ಲಿ ಕುಳಿತಿದ್ದಾನೆ. ಸಂಪೂರ್ಣ ನಿರಾಭರಣವಾಗಿರುವ ಈತನ ತಲೆಯಲ್ಲಿ ಗುಂಗುರು ಕೂದಲುಗಳಿವೆ. ಕಿವಿಗಳು ಉದ್ದವಾಗಿವೆ. ಪೀಠದಲ್ಲಿ ಮೂರು ಸಿಂಹಗಳನ್ನು ತೋರಿಸಲಾಗಿದೆ. ಮಧ್ಯದಲ್ಲಿರುವ ಸಿಂಹ ತನ್ನ ಮುಂಗಾಲುಗಳನ್ನು ಮೇಲಕ್ಕೆ ಎತ್ತಿ ಹಿಡಿದು ಪೀಠದ ಭಾರವನ್ನು ಹೊತ್ತಂತೆ ಕಂಡುಬರುತ್ತದೆ.[೫೦]

೫. ಶಿಲ್ಪ : ಬೌದ್ದಿನ್ ತೀರ್ಥಂಕರರು

ಸ್ಥಳ : ಹಳೇಹುಬ್ಬಳ್ಳಿ

ಜಿಲ್ಲೆ : ಧಾರವಾಡ

ಕಾಲ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಅದಿನಾಥನು ಪದ್ಮ ಪೀಠದ ಮೆಲೆ ಕಾರ್ಯೋತ್ಸರ್ಗ ಭಂಗಿಯಲ್ಲಿದ್ದಾನೆ. ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲವಿದೆ. ಪ್ರಭಾಮಂಡಲದ ಬದಿಗಳಲ್ಲಿ ಚೌರಿಗಳಿವೆ. ಪ್ರಭಾಮಂಡಲದ ಮೇಲ್ಬಾಗದಲ್ಲಿ ಅಲಂಕಾರಿಕ ಮುಕ್ಕೊಡೆಯಿದೆ. ಹಾಗೆಯೇ ಶಿಲ್ಪದ ಇಕ್ಕೆಲಗಳಲ್ಲಿ ಯಕ್ಷಯಕ್ಷಿಯರಿದ್ದಾರೆ. ಇವರು ಕೈಗಳಲ್ಲಿ ಚಾಮರದಾರಿಗಳಿಂದ ಭೂಷಿತರಾಗಿದ್ದಾರೆ. ಶಿಲ್ಪದ ಸುತ್ತಲೂ ಸ್ತಂಭಮಕರ ತೋರಣವಿದೆ. ಮಕರತೊರಣದಲ್ಲಿ ಒಂಭತ್ತು ಸ್ಥಂಭಗಳಲ್ಲಿ ೧೨ ಜನರು ಕುಳಿತ ಜಿನ ಬಿಂಬಿವಿದೆ. ಅದಿನಾಥನ ಕಾಲುಗಳ ಬಳಿ ನಿಂತ ಪಾರ್ಶ್ವನಾಥ ಸುಪಾಶ್ವನಾಥರ ಕಿರು ಶಿಲ್ಪಗಳಿವೆ.[೫೧]

ಅಡಿ ಟಿಪ್ಪಣಿ

೧. ಸುರೇಶ ಬಿ., ಪೂರ್ವೋಕ್ತ ಪು. ೨೩೫

೨. ರಾಜಾರಾಂ ಹೆಗಡೆ, ೧೯೯೨ ಭಾರತೀಯ ಮೂರ್ತಿಶಾಸ್ತ್ರ ಧರ್ಮ ದೇವತಾರಾಧನೆ ಹಾಗೂ ಸಾಂಸ್ಕಿಕ ಐತಿಹಾಸಿಕ ವಿಶ್ಲೆಷಣೆ ಅರಿವು ಬರಹ ಸಂ-೨, ಭಾಗ-೧, ಪು. ೩೫-೩೬

೩. ಸುರೇಶ್ ಬಿ., ಪೂರ್ವೋಕ್ತ ಪು. ೨೩೮

೪. ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ-ಹಿನ್ನೆಲೆ ಪು. ೧೨೬

೫. ಶ್ರೀಧರ ಮೂರ್ತಿ, ದೇವತೆಗಳು ಮತ್ತು ಹಬ್ಬಗಳು ೧೯೮೧, ಪು. ೧೦

೬. ರು.ಮ. ಷಡಕ್ಷರಯ್ಯ ಬಿ. ಜಯಮ್ಮ, ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು, ೨೦೦೭, ಪು. ೭೫

೭. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ ಪು. ೭೬

೮. ಪಿ.ಕೆ. ತಿವಾರಿ, ಕೆ.ಸಿ.ಪಾದವ, ಹುಬ್ಬಳ್ಳಿ ತಾಲೂಕಿನ ಮೂರ್ತಿಶಿಲ್ಪಗಳು, ಆರ್.ಗೋಪಾಲ್ (ಸಂ) ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ೨೦೦೮, ಪು. ೧೪೯

೯. ರು.ಮ. ಷಡಕ್ಷರಯ್ಯ ಬಿ. ಜಯಮ್ಮ, ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು

ಶಿಲ್ಪಗಳು, ೨೦೦೭, ಪು. ೭೫

೧೦. ಪಿ.ಕೆ. ತಿವಾರಿ, ಕೆ.ಸಿ.ಪಾದವ, ಪೂರ್ವೋಕ್ತ ಪು. ೧೪೯

೧೧. ರಾಮಚಂದ್ರರಾವ್ ಎಸ್.ಕೆ. ಪೂರ್ವೋಕ್ತ ಪು. ೪೯-೯೭

೧೨. ವಾಸುದೇವನ್. ಸಿ.ಎಸ್. ವಿಜಯನಗರ ಅಧ್ಯಯನ ಸಂ. ೧೨, ಹಂಪಿ ಪರಿಸರದ ಪಂಚಲಿಂಗಗಳು, ೨೦೦೭, ಪು. ೧೯೦

೧೩. ಪಿ.ಕೆ. ತಿವಾರಿ, ಕೆ.ಸಿ.ಪಾದವ, ಪೂರ್ವೋಕ್ತ ಪು. ೧೪೯

೧೪. ರು.ಮ. ಷಡಕ್ಷರಯ್ಯ ಬಿ. ಜಯಮ್ಮ, ಪೂರ್ವೋಕ್ತ ಪು. ೭೭

೧೫. ರಾಮಚಂದ್ರರಾವ್ ಎಸ್.ಕೆ. ಪೂರ್ವೋಕ್ತ ಪು. ೧೨೩-೧೨೪

೧೬. ವಾಸುದೇವನ್. ಸಿ.ಎಸ್. ಪೂರ್ವೋಕ್ತ, ಪು. ೧೯೬-೧೯೭

೧೭. ಶ್ರೀಧರ ಮೂರ್ತಿ, ಪೂರ್ವೋಕ್ತ ಪು. ೧೦

೧೮. ಅದೇ, ಪು. ೫೬

೧೯. ರು.ಮ. ಷಡಕ್ಷರಯ್ಯ ಬಿ. ಜಯಮ್ಮ, ಪೂರ್ವೋಕ್ತ ಪು. ೭೭

೨೦. ಗೋಪಿನಾಥರಾವ್ ಟಿ.ಎ. ಎಲಿಮೆಂಟ್ಸ್ ಆಫ್ ಹಿಂದೂ ಐಕೋನೋಗ್ರಾಫಿ ಸಂ-೧, ಭಾಗ-೧, ಪು. ೨೩೧-೨೩೨

೨೧. ರು.ಮ. ಷಡಕ್ಷರಯ್ಯ ಬಿ. ಜಯಮ್ಮ, ಪೂರ್ವೋಕ್ತ ಪು. ೯೪

೨೨. ಚೆನ್ನಕ್ಕ ಎಲಿಗಾರ ಪು. ೧೭೪-೧೭೫

೨೩. ರಾಮಚಂದ್ರರಾವ್ ಎಸ್.ಕೆ. ಪೂರ್ವೋಕ್ತ ಪು. ೧೨-೧೨೬

೨೪. ರು.ಮ. ಷಡಕ್ಷರಯ್ಯ ಬಿ. ಜಯಮ್ಮ, ಪೂರ್ವೋಕ್ತ ಪು. ೯೪

೨೫. ಅದೇ, ಪು. ೯೫

೨೬. ಅದೇ ಪು. ೯೫

೨೭. ಅದೇ, ಪು. ೯೪

೨೮. ರಾಮಚಂದ್ರರಾವ್ ಎಸ್.ಕೆ. ಪೂರ್ವೋಕ್ತ ಪು. ೧೨೬-೧೨೭

೨೯. ಅದೇ ಪು. ೧೪೫

೩೦. ಗೋಪಿನಾಥರಾವ್ ಟಿ.ಎ. ಪೂರ್ವೋಕ್ತ ಪು. ೨೩೧-೨೩೨

೩೧. ಪಾಟೀಲ ಭೋಜರಾದ, ಸಾಗರ ಖಂಡ ೭೦, ಒಂದು ಅಧ್ಯಯನ ೧೯೯೫, ಪು. ೧೮

೩೨. ಪಿ.ಕೆ. ತಿವಾರಿ, ಕೆ.ಸಿ.ಪಾದವ, ಪೂರ್ವೋಕ್ತ ಪು. ೧೫೧

೩೩. ಅದೇ ಪು. ೧೫೧

೩೪. ರು.ಮ. ಷಡಕ್ಷರಯ್ಯ ಬಿ. ಜಯಮ್ಮ, ಪೂರ್ವೋಕ್ತ ಪು. ೯೭

೩೫. ಶಾಂತಿರಾಜ ಶಾಸ್ತ್ರಿ ಎ., (ಸಂ) ಜಿವನಸೇನಾಚಾರ್ಯ ಗುಣಭದ್ರಾಚಾರ್ಯ ವಿರಚಿತ ಮಹಾಪುರಾಣ, ಸಂ೧, ೧೯೮೧, ಪರ್ವ ಸಂ ೨೧, ಪು. ೬೮-೭೪

೩೬. ಶೆಟ್ಟಿ ಎಸ್.ಡಿ., ಜೈನ ಬಸದಿಗಳು ೧೯೯೯, ಪು. ೩೬

೩೭. ಮಿರ್ಜಾ ಅಣ್ಣರಾಯ, ಜೈನಧರ್ಮ ೧೯೯೯, ಪು. ೪೭೧-೭೯

೩೮. ಪಿ.ಕೆ. ತಿವಾರಿ, ಕೆ.ಸಿ.ಪಾದವ, ಪೂರ್ವೋಕ್ತ ಪು. ೧೫೦

೩೯. ಅದೇ ಪು.

೪೦. KIV No 123, A.D, 1563

೪೧. KI-V- 107, ಕೋಳಿವಾಡ ಕ್ರಿ.ಶ. ೧೨-೧೩ನೇ ಶತಮಾನ

೪೨. ರು.ಮ. ಷಡಕ್ಷರಯ್ಯ ಬಿ. ಜಯಮ್ಮ, ಪೂರ್ವೋಕ್ತ ಪು. ೯೧

೪೨. ಅದೇ ಪು. ೯೪

೪೩. ಅದೇ ಪು.

೪೪. ದೇವರಕೊಂಡಾರೆಡ್ಡಿ, ಸಪ್ತಮಾತೃಕೆಯರ ಹರಿತಿಸಿರಿ ಹೆಚ್.ಎ. ವೀರನಾಯಕ ಹರಿತಿ ನೆನಪಿನ ಸಂಪುಟ ೧೯೮೭, ಪು. ೮೪

೪೫. ಗೋಪಿನಾಥರಾವ್ ಟಿ.ಎ. ಪೂರ್ವೋಕ್ತ ಪು. ೩೭೯-೩೯೦

೪೬. ರಾಮಚಂದ್ರರಾವ್ ಎಸ್.ಕೆ. ಪೂರ್ವೋಕ್ತ ಪು. ೧೭೪-೧೭೫

೪೭. ಪಿ.ಕೆ. ತಿವಾರಿ, ಕೆ.ಸಿ.ಪಾದವ, ಪೂರ್ವೋಕ್ತ ಪು. ೧೫೨-೧೫೩

೪೮. ಅದೇ ಪು.

೪೯. ಅದೇ ಪು. ೧೫೨

೫೦. ಅದೇ ಪು. ೧೫೪

೫೧. ಅದೇ ಪು. ೧೫೬

ಅಧ್ಯಾಯ ೬

ಸಮಾರೋಪ

ಅನುಬಂಧಗಳು

೧. ನಕಾಶೆ

೨. ಆಕಾರಗ್ರಂಥಗಳು

೩. ಛಾಯಾಚಿತ್ರಗಳು

ಅಧ್ಯಾಯ ೬

ಸಮಾರೋಪ

ನಮ್ಮ ಸಂಸ್ಕೃತಿಯು ಪರಿವರ್ತನಾಶೀಲವಾದ ಗುಣಗಳನ್ನು ಹೊಂದಿದ್ದು, ಸಾವಿರಾರು ವರ್ಷಗಳಿಂದ ಬೆಳೆದು ಬಂದ ಸಂಸ್ಕೃತಿಯನ್ನು ವಿವೇಚಿಸಿ ಅಂತ್ಯ ಮುಟ್ಟಿಸುವುದು ಸಾಧ್ಯವಿಲ್ಲದ ಕೆಲಸ ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು ಎಂಬ ಶೀರ್ಷಿಕೆಯಾಗಿದ್ದು ಈ ವಿಷಯದ ಕುರಿತು ಅಧ್ಯಯನ ಮಾಡಲು ಅದಕ್ಕೆ ಪೂರಕ ಮಾಹಿತಿಯಾಗಿ ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳ ತುಣುಕುಗಳನ್ನು ಸೆರೆ ಹಿಡಿದು ಅಧ್ಯಯನಕ್ಕೆ ಬೇಕಾಗುವ ಪರಿಕರಗಳನ್ನು ಆಯ್ದುಕೊಂಡು ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳ ಅಧ್ಯಯನ ಕೈಗೊಳ್ಳಲಾಗಿದೆ.

ಪ್ರಸ್ತುತ ಈ ತಾಲೂಕಿನಲ್ಲಿ ಕ್ಷೇತ್ರಕಾರ್ಯಕೈಗೊಂಡು ಪ್ರಕಟಿತ ಮತ್ತು ಅಪ್ರಕಟಿತವಾಗಿರುವ ಪುರಾತತ್ವ ಅವಶೇಷಗಳನ್ನು ಒಂದೆಡೆ ಸೆರೆಹಿಡಿದು ಈ ಪ್ರದೇಶದ ಸಮಕಾಲೀನ ಸಾಂಸ್ಕೃತಿಕ ಅಧ್ಯಯನದ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನರ್‌ರಚಿಸುವ ಉದ್ದೇಶದೊಂದಿಗೆ ಈ ಸಂಶೋಧನಾ ಅಧ್ಯಯನವನ್ನು ೬ ಅಧ್ಯಾಯಗಳಾಗಿ ವಿಭಾಗಿಸಿ ಹುಬ್ಬಳ್ಳಿ ತಾಲೂಕಿನ ಶಾಸನಗಳು ದೇವಾಲಯಗಳ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ ಸ್ವರೂಪ, ವ್ಯಾಪ್ತಿ ಮತ್ತು ವಿಧಾನಗಳ ಕುರಿತು ಚರ್ಚಿಸಲಾಗಿದೆ. ಈ ಅಧ್ಯಯನವನ್ನು ಮಾಡಲು ಬೇಕಾದ ಪುರಾತತ್ವ ಆಕರಗಳಲ್ಲಿ ಒಂದಾಗಿರುವ ಶಾಸನಗಳು ಮತ್ತು ದೇವಾಲಯಗಳನ್ನು ಇಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಹುಬ್ಬಳ್ಳಿ ತಾಲೂಕಿನಲ್ಲಿ ಬರುವ ಗ್ರಾಮಗಳಿಗೆ ಸಂಬಂಧಿಸಿದಂತೆ ಇಲ್ಲಿ ಆಳಿ ಅಳಿದ ಅರಸರುಗಳ ರಾಜಕೀಯ ಚರಿತ್ರೆಯನ್ನು ಶಾಸನಗಳ ಹಿನ್ನೆಲೆಯಾಗಿ ವಿಷಯಗಳನ್ನು ಇಲ್ಲಿ ಸೆರೆಹಿಡಿಯಲಾಗಿದೆ. ಹಾಗೆಯೇ ಈ ಪ್ರದೇಶದ ಅಂದಿನ ಜನಜೀವನ ಆರ್ಥಿಕ, ಸ್ಥಿತಿಗತಿಗಳನ್ನು ಅರಿಯಲು ಹುಬ್ಬಳ್ಳಿ ತಾಲೂಕಿನ ಶಾಸನಗಳು ವಿಪುಲವಾದ ಸಾಮಗ್ರಿಗಳನ್ನೊದಗಿಸಿವೆ.

ಸಾರಿಗೆ ವ್ಯವಸ್ಥೆಯಲ್ಲಿ ಪ್ರಾಚೀನ ಕಾಲದಲ್ಲಿ ಕುದುರೆ ಕತ್ತೆ, ಎತ್ತು, ನಾಯಿ, ಎತ್ತಿನ ಗಾಡಿಗಳನ್ನು ಸಾಗಾಣಿಕೆಗೆ ಬಳಸುತ್ತಿದ್ದರು. ಹಾಗೆಯೇ ಬೆಳ್ಳಿ, ತಾಮ್ರದ ನಾಣ್ಯಗಳು ಪೇಶ್ವೆಯರ ಕಾಲಘಟ್ಟದಲ್ಲಿ

ಕಂಡುಬಂದ ವಿಷಯ ತಿಳಿದುಬರುತ್ತದೆ. ಜೊತೆಗೆ ಶಾಸನಗಳಲ್ಲಿ ಸಮಕಾಲೀನ ಸಾಮಾಜಿಕ ವ್ಯವಸ್ಥೆಯ ಚಿತ್ರಣ ಬಹುಮಾರ್ಮಿಕವಾಗಿ ಮೂಡಿಬಂದಿವೆ. ಚತುರ್ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಹಾಗೆಯೇ ಉಪಜಾತಿಗಳಾದ ಕುರುಬ, ಕಮ್ಮಾರ, ಅಕ್ಕಸಾಲಿಗರು ಗಾಣಿಗ, ಇನ್ನು ಮುಂತಾದ ವರ್ಗಗಳನ್ನು ಗುರುತಿಸಬಹುದಾಗಿದೆ. ಜೊತೆಗೆ ಧಾರ್ಮಿಕ ವ್ಯವಸ್ಥೆಯಲ್ಲಿ ಧರ್ಮಗಳ ಪ್ರಾಚೀನತೆ ಪ್ರಸಾರ ಬೆಳವಣಿಗೆಯನ್ನು ಶಾಸನಗಳ ಆಧಾರದ ಹಿನ್ನೆಲೆಯಲ್ಲಿ ವಿಚಾರಗಳನ್ನು ಕಲೆಹಾಕಿ ಪ್ರಸ್ತಾಪಿಸಲಾಗಿದೆ. ಹಿಂದೂ ಧರ್ಮ, ಜೈನಧರ್ಮ ಮತ್ತು ವೀರಶೈವ ಧರ್ಮಗಳ ಕುರಿತು ವಿಷಯಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಹುಬ್ಬಳ್ಳಿ ತಾಲೂಕಿನಲ್ಲಿ ಬರುವ ಶಾಸನಗಳನ್ನು ವ್ಯವಸ್ಥಿತವಾಗಿ ವಿಂಗಡನೆ ಮಾಡಿ ಅವುಗಳನ್ನು ದಾನಶಾಸನ. ವೀರಗಲ್ಲು ಮಾಸ್ತಿಗಲ್ಲು ನಿಷಿಧಿಗಲ್ಲು ಶಾಸನಗಳೆಂದು ವರ್ಗೀಕರಿಸಲಾಗಿದೆ ಅದರಲ್ಲಿ ಅತೀ ಹೆಚ್ಚು ದಾನಶಾಸನಗಳೇ ದೊರೆತಿರುವುದನ್ನು ಕಾಣಬಹುದಾಗಿದ್ದು, ಅಲ್ಲದೇ ವೀರಗಲ್ಲುಗಳ ಬಗ್ಗೆ ಅದರ ನೆಲೆ ಹಿನ್ನೆಲೆಯ ಜೊತೆಗೆ ಈ ಒಂದು ಅಧ್ಯಯನದ ಪ್ರದೇಶದಲ್ಲಿ ಸಾಮಾನ್ಯವಾಗಿ ಮೂರು ಹಂತದಿಂದ ನಾಲ್ಕು ಹಂತದವರೆಗಿನ ವೀರಗಲ್ಲುಗಳು ಕಂಡುಬರುತ್ತಿದ್ದು ಅವುಗಳಲ್ಲಿನ ಶಿಲ್ಪಗಳು ಯುದ್ಧದ ಸನ್ನಿವೇಶ ನಂತರವೀರಮರಣ ಕೊನೆಗೆ ಸ್ವರ್ಗದ ಪರಿಕಲ್ಪನೆಯ ಕುರಿತಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಅಧ್ಯಾಯಯದಲ್ಲಿ ಮಾಸ್ತಿಗಲ್ಲು ಮತ್ತು ನಿಷಿಧಿಗಲ್ಲುಗಳ ಬಗ್ಗೆ ವಿರಳವಾದ ಮಾಹಿತಿಯನ್ನು ಗಮನಿಸಬಹುದಾಗಿದೆ. ಮುಖ್ಯವಾಗಿ ಬೌದ್ಧಧರ್ಮದ ಕುರುಹನ್ನು ತಿಳಿಸುವ ತಾರಾಭಗವತಿಯ ವಿಗ್ರಹ ಮತ್ತು ಬೌದ್ಧ ಆಯಕಸ್ತಂಭ, ಇವುಗಳು ಕೋಳಿವಾಡ ಪ್ರದೇಶದಲ್ಲಿ ಕಂಡುಬರುವುದು ಬಹು ಮುಖ್ಯವಾದ ಸಂಗತಿ ಕೊನೆಗೆ ಇಲ್ಲಿ ದೊರೆತ ಕೇವಲ ಉಲ್ಲೇಖವಿರುವ ಅಥವಾ ಇತರೇ ವಿಷಯಗಳನ್ನು ತಿಳಿಸುವ ಶಾಸನಗಳನ್ನು ಕಾಲಾನುಕ್ರಮದಲ್ಲಿ ಅವುಗಳನ್ನು ಹೊಂದಿಸಿಕೊಂಡು ಅವುಗಳ ಬಗ್ಗೆ ಮಾಹಿತಿಯನ್ನು ಕೊಡಲಾಗಿದೆ.


ಅಧ್ಯಾಯ ನಾಲ್ಕರಲ್ಲಿ ದೇವಾಲಯದ ವಾಸ್ತುಕಲೆಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಹಲವು ವೈಶಿಷ್ಟ್ಯತೆಗಳನ್ನು ಹುಬ್ಬಳ್ಳಿ ತಾಲೂಕಿನ ಗ್ರಾಮಗಳಲ್ಲಿ ಕಂಡುಬರುತ್ತವೆ. ಈ ಅಧ್ಯಾಯದಲ್ಲಿ ದೇವಾಲಯದ ಒಂದು ಪ್ರಾಚೀನತೆ ಅವುಗಳು ಪ್ರಾಚೀನ ಕಾಲದಿಂದ ಇಲ್ಲಿಯವರೆಗೂ ಬೆಳೆದು ಬಂದಿರುವ ಹಂತಗಳು ಮತ್ತು ಮಾರ್ಪಾಟುಗಳನ್ನು ನಾವು ಗುರ್ತಿಸಬಹುದಾಗಿದೆ. ಅಂದರೆ ಶೈವ, ವೈಷ್ಣವ, ಜೈನ, ಶಾಕ್ತದೇವಾಲಯಗಳೆಂದು ವರ್ಗೀಕರಿಸಿ ಇವುಗಳ ಅಧ್ಯಯನದಲ್ಲಿ ಮುಖ್ಯವಾಗಿ ದೇವಾಲಯದ ಗರ್ಭಗೃಹದಿಂದ ಮುಖಮಂಟಪದವರೆಗೆ ಹಾಗೆಯೇ ದೇವಾಲಯದ ಹೊರಭಾಗದಲ್ಲಿ ಅಧಿಷ್ಠಾನದಿಂದ ಕಳಸದವರೆಗಿನ ಭಾಗಗಳನ್ನು ಸ್ಪಷ್ಟವಾಗಿ ಗುರುತಿಸುವ ಮತ್ತು ಅವುಗಳ ಬಗ್ಗೆ ವಿವರಣೆಯನ್ನು ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ. ಶೈವದೇವಾಲಯಗಳಲ್ಲಿ ಅತ್ಯಂತ ಪ್ರಾಚೀನ ದೇವಾಲಯ ಉಣಕಲ್ಲಿನ ಚಂದ್ರಮೌಳೇಶ್ವರ ದೇವಾಲಯವಾಗಿದ್ದು ಅತೀ ಹೆಚ್ಚು ಶೈವ ದೇವಾಲಯಗಳು ನೂಲ್ವಿಯ ಪ್ರದೇಶದಲ್ಲಿ ಕಂಡುಬರುವುದು ಬಹುವಿಶೇಷವಾಗಿದೆ. ಹಾಗೆಯೇ ವೈಷ್ಣವ ದೇವಾಲಯಕ್ಕೆ ಪ್ರಮುಖ ಸ್ಥಳವೆಂದರೆ ಕೋಳಿವಾಡ ಗ್ರಾಮವಾಗಿದೆ. ತ್ರಿಕೂಟ ದೇವಾಲಯಕ್ಕೆ ಮಲ್ಲಿಗವಾಡ ಬಹುಪ್ರಮುಖ ವಾಗಿದ್ದುದನ್ನು ತಿಳಿಯಬಹುದಾಗಿದೆ. ಜೈನ ದೇವಾಲಯಕ್ಕೆ ಸಂಬಂಧಿಸಿದ ದೇವಾಲಯಗಳು

ಬಹುವಿರಳವಾಗಿದ್ದು ಅದರಲ್ಲಿ ಅದರಗುಂಚಿ ದೇವಾಲಯ ಪ್ರಮುಖವಾಗಿದೆ. ಜೊತೆಗೆ ಶಾಕ್ತ ದೇವಾಲಯದ ಮಹತ್ವದೊಂದಿಗೆ ವಾಸ್ತು ಶೈಲಿಯ ವೈಶಿಷ್ಟ್ಯತೆಯನ್ನು ವಿವರಣಾತ್ಮಕವಾಗಿ ಸೆರೆಹಿಡಿಯಲಾಗಿದೆ.

ಅಧ್ಯಾಯ ಐದು ಮೂರ್ತಿಶಿಲ್ಪಗಳು ಪ್ರಮುಖವಾಗಿ ಈ ಪ್ರದೇಶದಲ್ಲಿ ಬೌದ್ಧ, ಶೈವ, ವೈಷ್ಣವ, ಜೈನ ಧರ್ಮಗಳ ಮತ್ತು ಸೌರಪಂಥ, ಶಾಕ್ತಪಂಥ, ಮೂರ್ತಿಶಿಲ್ಪಕಲೆ ಅವಿಚ್ಛಿನ್ನವಾಗಿ ಬೆಳೆದುಬಂದಿದೆ. ಶೈವಧರ್ಮದಲ್ಲಿ ವಿವಿಧ ಪ್ರಕಾರದ ಬ್ರಹ್ಮ ಸೂತ್ರಗಳುಳ್ಳ ಶಿವಲಿಂಗಗಳಿದ್ದು, ಉದಾ ಅದರಲ್ಲಿ ಉಣಕಲ್ಲಿನ ಚಂದ್ರಾಮೌಳೇಶ್ವರ ದೇವಾಲಯದಲ್ಲಿ ಪ್ರಾಚೀನ ಅತ್ಯಂತ ಪ್ರಾಚೀನ ಶಿವಲಿಂಗವಾಗಿದೆ. ಹಾಗೆಯೇ ವಿವಿಧ ಕಾಲಘಟ್ಟದ ನಂದಿ ಶಿಲ್ಪಗಳು ಬೆಳಕಿಗೆ ಬಂದಿವೆ. ಶಿಲ್ಪಗಳಾದ ಉಮಾಮಹೇಶ್ವರ ಭೈರವ, ವೀರಭದ್ರ, ಗಣಪತಿಯ ದ್ವಿಭುಜ ಮತ್ತು ಚತುರ್ಭುಜ ಶಿಲ್ಪಗಳು ಹೆಚ್ಚು ಪ್ರಚಲಿತದಲ್ಲಿದೆ. ಹಾಗೆಯೇ ಸೂರ್ಯ ಮತ್ತು ಕಾರ್ತಿಕೇಯ ಶಿಲ್ಪಗಳು ವಿರಳವಾಗಿವೆ. ಅದೇ ರೀತಿ ವಿಷ್ಣುವಿನ ಚತುರ್ವಿಂಷತಿ ಶಿಲ್ಪಗಳಲ್ಲಿ ಕೇಶನ, ನಾರಾಯಣ, ಮಾಧವ, ವಾಸುದೇವ, ಪುರುಷೋತ್ತಮ, ಜನಾರ್ಧನ, ವಿಷ್ಣು, ಕೃಷ್ಣ, ಅನಂತಶಯನ ಶಿಲ್ಪಗಳು ಕಂಡುಬಂದಿದೆ. ಕೋಳಿವಾಡ ಪ್ರದೇಶದಲ್ಲಿ ದತ್ತಾತ್ರೇಯನ ಶಿಲ್ಪವು ಬಹು ಮುಖ್ಯವಾದುದಾಗಿದೆ. ಇನ್ನು ಜೈನ ಪರಂಪರೆಯ ೨೪ ಜನ ತೀರ್ಥಂಕರಲ್ಲಿ ಸುಪಾರ್ಶ್ವನಾಥ ಶಾಂತಿನಾತ ಚೌವ್ವೀಸ್ ತೀರ್ಥಂಕರ ಶಿಲ್ಪಗಳನ್ನು ಪ್ರಸ್ತುತ ಪ್ರದೇಶಗಳಲ್ಲಿ ಒಂದಾದ ಅದರಗುಂಚಿಯ ದೊಡ್ಡಬಸಪ್ಪ ದೇವಾಲಯದಲ್ಲಿ ನಾವು ಮೂಲ ಗರ್ಭಗೃಹದಲ್ಲಿ ಈ ಜೈನ ಮೂರ್ತಿಯನ್ನು ನೋಡಬಹುದಾಗಿದೆ. ಜೊತೆಗೆ ಶಾಕ್ತ ಪರಂಪರೆಯಲ್ಲಿ ಮಹಿಷಾಸುರಮರ್ಧಿನಿಯ ಶಿಲ್ಪಗಳು ವಿರಳವಾಗಿದ್ದು, ಗಜಲಕ್ಷ್ಮಿ, ಸರಸ್ವತಿ, ಪಾರ್ವತಿ, ಸಪ್ತಮಾತೃಕೆಯರ ಶಿಲ್ಪಗಳು ಜೊತೆಗೆ ನಾಗಶಿಲ್ಪಗಳು ಕಂಡುಬಂದಿವೆ. ಈ ಎಲ್ಲ ಶಿಲ್ಪಗಳು ಆಯಾ ಧರ್ಮದ ಸಮಕಾಲೀನ ಆಚಾರವಿಚಾರ, ನಂಬಿಕೆ, ಸಂಪ್ರದಾಯಗಳ ಪರಿಕಲ್ಪನೆಯಲ್ಲಿ ಶಿಲ್ಪಶಾಸ್ತ್ರಗಳ ಲಕ್ಷಣಗಳಂತೆ ಮೂಡಿಬಂದಿವೆ. ಒಟ್ಟಾರೆ ದೇವಾಲಯಗಳಲ್ಲಿ ಶಿಲ್ಪಗಳು ಸಾಕಷ್ಟಿದ್ದರೂ ಇಲ್ಲಿ ಶಕ್ತಿ ಮಾತ್ರ ಒಂದೇ ಎಂಬುದಂತೂ ಸ್ಪಷ್ಟ. ಋಗ್ವೇದದಲ್ಲಿನ ಏಕಂ ಸತ್ ವಿಪ್ರಃ ಬಹುದಾ ವದಂತಿ ದೇವತಾ ಶಿಲ್ಪಗಳಿಗೆ ನಾಮ ಹಲವು ಶಕ್ತಿ ಒಂದೇ ಎಂಬುದನ್ನು ಹುಬ್ಬಳ್ಳಿ ತಾಲೂಕಿನ ಪ್ರದೇಶದಲ್ಲಿನ ಲಭ್ಯವಾದ ಮೂರ್ತಿಶಿಲ್ಪಗಳು ಸಾರಿಹೇಳುವಂತಿವೆ.

ಒಟ್ಟಾರೆ ಹುಬ್ಬಳ್ಳಿ ತಾಲೂಕಿನ ಶಾಸನಗಳು ದೇವಾಲಯಗಳು ಮತ್ತು ಶಿಲ್ಪಗಳು ಪ್ರಾದೇಶಿಕವಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದ ವಿವಿಧ ಮುಖಗಳ ಅಧ್ಯಯನಕ್ಕೆ ತಮ್ಮದೇ ಆದ ಕೊಡುಗೆ ನೀಡಿವೆ. ಇಷ್ಟೆಲ್ಲಾ ಮಹತ್ವಪೂರ್ಣವಾದ ವಿಷಯಗಳನ್ನು ತಿಳಿಯಪಡಿಸುವ ಈ ಅವಶೆಷಗಳು ಇಂದು ವಿನಾಶದ ಅಂಚಿನಲ್ಲಿವೆ. ಹಾಗೆಯೇ ಕೆಲವು ಅವಶೇಷಗಳು ನೈಸರ್ಗಿಕ ವಿಕೋಪಗಳಿಗೆ ಹಾಳಾಗುತ್ತಿದ್ದರೆ ಇನ್ನು ಉಳಿದಶಿಲ್ಪಗಳು ಮತ್ತು ದೇವಾಲಯಗಳು ಸ್ಥಳೀಯರ ವಿವಿಧ ಮೂಡನಂಬಿಕೆಗಳಿಗೆ ಆಹುತಿಯಾಗುತ್ತಿವೆ. ಈ ಹಿನ್ನೆಲೆಯ ದೃಷ್ಟಿಯಿಂದ ಶ್ರೀಸಾಮಾನ್ಯರಿಗೂ ಇವುಗಳ ಬಗ್ಗೆ ಅರಿವು ಮೂಡಸುವುದರ ಜೊತೆಗೆ ಪ್ರಾಚೀನಕಾಲದಿಂದ ಇಲ್ಲಿಯವರೆಗೆ ಬೆಳೆದುಬಂದಿರುವ ನಮ್ಮ ಸಂಸ್ಕೃತಿ ಪರಂಪರೆಯನ್ನು ಸಂರಕ್ಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಧಾರವಾಡ ಜಿಲ್ಲೆ



ಹುಬ್ಬಳ್ಳಿ ತಾಲೂಕ ನಕ್ಷೆ



ಕೆಲವು ಮಹತ್ವದ ಶಾಸನಗಳು ಮತ್ತು ದೇವಾಲಯಗಳಿದ್ದ ಹುಬ್ಬಳ್ಳಿ ತಾಲೂಕಿನ ಗ್ರಾಮಗಳ ಪಟ್ಟಿ.

1. ಅದರಗುಂಚಿ
2. ಅಮರಗೋಳ
3. ಅಹೋಬಳಪುರ
4. ಇಂಗಳಹಳ್ಳಿ
5. ಉಣಕಲ್
6. ಕಟ್ನೂರ
7. ಕಿರೇಸೂರ
8. ಕುರಡಿಕೇರಿ
9. ಕೋಳಿವಾಡ
10. ಗಬ್ಬೂರ
11. ಛಬ್ಬಿ
12. ದೇವರಗುಡಿಹಾಳ
13. ನೂಲ್ವಿ
14. ಪರಸಾಪುರ
15. ಬುಡರಸಿಂಗಿ
16. ಬೆಳಗಲಿ
17. ಬ್ಯಾಹಟ್ಟಿ
18. ಭಂಡಿವಾಡ
19. ಭೈರಿದೇವರಕೊಪ್ಪ
20. ಮಜಿದಪುರ
21. ಮಂಟೂರ
22. ಮರಿಯನ ತಿಮ್ಮಸಾಗರ
23. ಮಲ್ಲಿಗವಾಡ
24. ಮುರಾರಹಳ್ಳಿ
25. ಯರಗುಪ್ಪಿ
26. ವರೂರ
27. ಶರೆವಾಡ
28. ಸಿರಗುಪ್ಪಿ
29. ಸುಳ್ಳ
30. ಹಳೆಹುಬ್ಬಳ್ಳಿ
31. ಹುಬ್ಬಳ್ಳಿ

ಆಕರಗ್ರಂಥಗಳು

ಕನ್ನಡ ಕೃತಿಗಳು

ಕನ್ನಡ ಲೇಖಕರು	ಪ್ರಕಟಣೆ	ಕೃತಿ ಲೇಖನ ಮತ್ತು ಪ್ರಕಾಶಕರು.
ಅಪರ್ಣಾ ಕೂ.ಸ	೧೯೯೯	ದೇವಾಲಯ ವಾಸ್ತು ಶಿಲ್ಪ ಪರಿಚಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
ಅನಂತರಂಗಾಚಾರ್ ಎನ್	೧೯೫೪	ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ ಶ್ರೀ.ವಿ. ರಂಗಣ್ಣನವರ ಸ್ಮರಣ ಸಂಚಿಕೆ ಮಹಾರಾಜ ಕಾಲೇಜು ಮೈಸೂರು
ಕಲಬುರ್ಗಿ ಎಂ.ಎಂ.	೧೯೮೦	ಸಮಾಧಿ ಬಲಿದಾನ, ವೀರಮರಣ ಸ್ಮಾರಕಗಳು ಐ.ಬಿ.ಎಚ್. ಪ್ರಕಾಶನ, ಬೆಂಗಳೂರು
	೧೯೯೯	ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾ ೧, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ
ಕಾಮತ್ ಸೂರ್ಯನಾಥ (ಸಂ.)	೧೯೮೪	ಧಾರವಾಡ ಜಿಲ್ಲೆಯ ಗೆಜಿಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು.
ಗೋಪಾಲ್ ಬಿ.ಆರ್. (ಸಂ)	೨೦೦೨	ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು
ಗೋಪಾಲ್. ಬಾ.ರಾ.	೧೯೮೫	ಕರ್ನಾಟಕದ ಮೂರ್ತಿಶಿಲ್ಪ ಅವಲೋಕನ (ಕರ್ನಾಟಕ ಪರುಪತಿ ಸಮೀಕ್ಷೆ) ಬೆಂಗಳೂರು
ಚಂದ್ರಪೂಜಾರಿ ಎಂ.	೨೦೦೫	ಸಂಶೋಧಕರು ಮತ್ತು ಕ್ಷೇತ್ರಕಾರ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಿದಾನಂದಮೂರ್ತಿ ಎಂ.	೧೯೬೬	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ
ಚೆನ್ನಕ್ಕ ಎಲಿಗಾರ	೧೯೯೦	ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ್ಞ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜಯಮ್ಮ ಬಿ.	೨೦೦೬	ಧಾರವಾಡ ಜಿಲ್ಲೆಯ ಪುರಾತತ್ವ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ ಕರ್ನಾಟ ವಿಶ್ವವಿದ್ಯಾಲಯ, ಧಾರವಾಡ
ತಿಪ್ಪೇರುದ್ರಸ್ವಾಮಿ ಎಚ್.	೧೯೬೮	ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ ಕೃಷ್ಣಮೂರ್ತಿಪುರಂ, ಮೈಸೂರು
ದೇವರಕೊಂಡಾರೆಡ್ಡಿ	೧೯೮೨	ಸಪ್ತಮಾತೃಕೆಯರು ಹರತಿಸಿರಿ (ಹೆಚ್.ವಿ.ವೀರನಾಯಕ ನೆನಪಿನ ಸಂಪುಟ) ಚಿತ್ರದುರ್ಗ
ದೇಸಾಯಿ ಪಿ.ಬಿ.	೧೯೮೨	ಕನ್ನಡ ನಾಡಿನ ಶಾಸನಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ನರಸಿಂಹಮೂರ್ತಿ ಎ.ವಿ.	೨೦೦೭	ಕರ್ನಾಟಕ ನಾಣ್ಯ ಪರಂಪರೆ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ನಾಗಯ್ಯ ಜೆ.ಎಂ.	೧೯೯೨	ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀನಾಗನೂರು ರುದ್ರಾಕ್ಷಿಮಠ, ಬೆಳಗಾವಿ.
ನಾಗರಾಜಯ್ಯ ಹಂ.ಪ.	೧೯೮೫	ಶಾಸನಗಳಲ್ಲಿ ಬಸದಿಗಳು, ರತ್ನತ್ರೇಯ ಪ್ರಕಾಶನ, ಮೈಸೂರು
ನಿರುಪಮಾ	೨೦೦೨	ಸಂಶೋಧನಾ ವಿಧಾನಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
ಪೂಜಾರ್ಎಸ್.ಕೆ	೨೦೦೯	ಹುಬ್ಬಳ್ಳಿ-ಒಂದು ಸಾಂಸ್ಕೃತಿಕ ಅಧ್ಯಯನ, (ಪಿಎಚ್.ಡಿ. ಅಪ್ರಕಟಿತ ಪ್ರಬಂಧ) ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ ಕರ್ನಾಟಕ ವಿ.ವಿ. ಧಾರವಾಡ

ಪ್ರಭಾಕರ್ ಎಂ.ಎನ್.	೧೯೮೯	ದೇವಾಲಯಗಳು ಉಗಮ ಮತ್ತು ಲಡಖಾನ್ ದೇವಾಲಯಗಳು, ಇತಿಹಾಸದರ್ಶನ ಸಂ.೪, ಸೂರ್ಯನಾಥ್ ಕಾಮತ್ (ಸಂ.) ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು
ಪರಮಶಿವಮೂರ್ತಿ ಡಿ.ವಿ.	೧೯೯೯	ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
ಪಾಡಿಗಾರ್ ಶ್ರೀನಿವಾಸ್	೧೯೮೯	ಬಾದಾಮಿ ಮತ್ತು ವೈಷ್ಣವ ಧರ್ಮ ಕರ್ನಾಟಕ ಭಾರತಿ, ಸಂ-೨೧/೩-೪, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
ಮಹಾದೇವ. ಸಿ.	೨೦೦೬	ಕರ್ನಾಟಕ ದೇವಾಲಯ ಕೋಶ, ಧಾರವಾಡ ಜಿಲ್ಲೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
ಮಿರ್ಜಿ ಅಣ್ಣಾರಾಯ	೧೯೯೭	ಜೈನಧರ್ಮ, ಶಾಂತಿಸೇವಾಸದನ ಶೇಡಬಾಳ
ರಘುನಾಥಭಟ್ ಎಚ್.ಆರ್.	೧೯೯೯	ಪ್ರಾಚೀನ ಕರ್ನಾಟಕದ ವಾಸ್ತು ಕಲೆ, ಕನಕಗಿರಿ (೧೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂಸ್ಮರಣ ಸಂಚಿಕೆ,) ಗೋಪಾಲ್‌ರಾವ್ ಎಚ್.ಎಸ್. (ಸಂ) ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
ರಾಜಶೇಖರ್ ಎಸ್.	೧೯೮೮	ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಷನ್, ಧಾರವಾಡ
ರಾಮಚಂದ್ರರಾವ್ ಎಸ್.ಕೆ.	೧೯೭೫	ಮೂರ್ತಿಶಿಲ್ಪ ನೆಲೆ-ಹಿನ್ನೆಲೆ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
ರಮೇಶ್ ನಾಯಕ್	೨೦೦೭	ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರಸಾರಾಂಗ ಕ.ವಿ.ವಿ. ಹಂಪಿ
ಶೇಕ್ ಅಲಿ. ಬಿ.	೧೯೭೭	ದಕ್ಷಿಣ ಭಾರತದ ಇತಿಹಾಸ, ಮೈಸೂರು
ಶಿವತಾರಕ ಕೆ.ಬಿ.	೨೦೦೧	ಕರ್ನಾಟಕದ ಪುರಾತತ್ವ ನೆಲೆಗಳು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶಿವರಾಮ್ ಕಾರಂತ	೧೯೭೫	ಭಾರತೀಯ ಶಿಲ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
	೧೯೭೧	ಕರ್ನಾಟಕದಲ್ಲಿ ಚಿತ್ರಕಲೆ ಮೈಸೂರು.
ಶಿವಲೀಲಾ. ಕೆ.	೨೦೦೩	ಕಮಲಾಪುರದ ಶಾಸನಗಳು ದೇವಾಲಯಗಳು (ಅಪ್ರಕಟಿತ ಎಂ.ಫಿಲ್. ಪ್ರಬಂಧ) ಶಾಸನಶಾಸ್ತ್ರ ವಿಭಾಗ ಕನ್ನಡ. ವಿಶ್ವವಿದ್ಯಾಲಯ ಹಂಪಿ
ಶ್ರೀಧರಮೂರ್ತಿ ಮ.	೧೯೮೧	ದೇವತೆಗಳು ಮತ್ತು ಹಬ್ಬಗಳು, ಪುನರ್ವಸು ಪ್ರಕಾಶನ, ಬೆಂಗಳೂರು
ಶ್ರೀನಿವಾಸ್ ರಿತ್ತಿ ಸಂ.	೨೦೦೦	ಪ್ರಾಚೀನ ಕರ್ನಾಟಕ ಆಡಳಿತ ಪರಿಭಾಷಾಕೋಶ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿದೇಶನಾಲಯ, ಮೈಸೂರು
ಶೆಟ್ಟಿ ಎಸ್.ಡಿ.	೧೯೯೯	ಜೈನ ಬಸದಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, .ಹಂಪಿ
ಶೇಷಶಾಸ್ತ್ರಿ ಆರ್.	೧೯೮೨	ಕರ್ನಾಟಕದ ವೀರಗಲ್ಲುಗಳು ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
ಷಡಕ್ಷರಯ್ಯ ರು.ಮ. ಮತ್ತು ಜಯಮ್ಮ ಬಿ.	೨೦೦೭	ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು, ಧಾರವಾಡ ಉತ್ಸವ ಸಮಿತಿ ಧಾರವಾಡ ಜಿಲ್ಲಾ ಆಡಳಿತ, ಧಾರವಾಡ
ಹಂಜೆ ಅಪ್ಪಣ್ಣ ಎನ್.	೨೦೦೭	ಜೈನ ಶಿಲ್ಪಕಲೆ ಪರಿಕಲ್ಪನೆಗಳು ರತ್ನಕಡಕ ಡಾ.ಎಚ್. ಎ. ಪಾರ್ಶ್ವನಾಥ ಅಭಿನಂದನ ಗ್ರಂಥ ಮೈಸೂರು
	೨೦೦೭	ಧಾರವಾಡ ಜಿಲ್ಲೆಯ ಜೈನ ಶಿಲ್ಪಕಲೆ ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (ಸಂ.) ಆರ್. ಗೋಪಾಲ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು
ಹಿರೇಮಠ ಬಿ.ಆರ್.	೧೯೮೬	ಕರ್ನಾಟಕದ ಶಾಸನಗಳಲ್ಲಿ ವರ್ತಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶೇಷಾಶಾಸ್ತ್ರಿ ಆರ್.	೨೦೦೫	ಶಾಸನ ಪರಿಚಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
ಚನ್ನಕ್ಕ ಪಾವಟೆ	೨೦೦೩	ಶಾಸನ ಸಂಜೀವಿನಿ ಚೆನ್ನಗಂಗಾ, ಪ್ರಕಾಶನ, ಧಾರವಾಡ
ಪಿ.ಆರ್.ತಿಪ್ಪೇಸ್ವಾಮಿ	೧೯೯೪	'ಶಿಲ್ಪಕಲಾ ಪ್ರಪಂಚ,' ಕರ್ನಾಟಕ ಲಲಿತಕಲಾ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು

ENGLISH BOOKS :

AJith prassad	1996	Jainism Dharwad Region (Unpub lished ph.D. thesis) Dep. of Ancient Indian History and Epigraphy) Karnatka unuversity Dharwad.
Dhaky M.A.	1997	Indian temple form in Karnataka (Inscriptions and architecture abinav publications, Delhi
Gopal B.R	1981	The chalukyas of Kalyan and the kalachuris. Dharwad
Padigar Shrinivas. V.	1996	Vishav cult in karnataks. Directorat of Archalogy and muscums Mysore.
census Report	1991	Census India district census Hand operations Karnataka (Ed:) Book Dharwad (Dist)

ಶಾಸನ ಸಂಪುಟಗಳು

ಧಾರವಾಡ ಜಿಲ್ಲೆಯ ಶಾಸನ ಸೂಚಿ ಕಲಬುರ್ಗಿ ಎಂ.ಎಂ., ಕನ್ನಡ ಅಧ್ಯಯನ ಪೀಠ ೧೯೭೫, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

South Indian Inscription Vol annual Reperts on South Indian Epigraphy 1938-39, 1944-45, 1945-46,

Epigrphiy Indica Vol Karnataka In scriptions Vol v. Kannada Research Institute Dharwad.

೩. ದೇವಾಲಯ ಮತ್ತು ಮೂರ್ತಿಶಿಲ್ಪಗಳ ಛಾಯಾಚಿತ್ರಗಳು.

೧. ಉಣಕಲ್ಲ ಚಂದ್ರಮೌಳೇಶ್ವರ ದೇವಾಲಯದ ಮುಂಭಾಗದ ನೋಟ.

೨. ಉಣಕಲ್ಲ ಚಂದ್ರಮೌಳೇಶ್ವರ ದೇವಾಲಯದ ಪಾರ್ಶ್ವನೋಟ

೩. ಅಮರಗೋಳ ಬನಶಂಕರಿ ದೇವಾಲಯದ ಮುಂಭಾಗದ ನೋಟ

೪. ಅಮರಗೋಳ ಬನಶಂಕರಿ ದೇವಾಲಯದ ಪಾರ್ಶ್ವನೋಟ

೫. ಅಮರಗೋಳ ಬನಶಂಕರಿ ದೇವಾಲಯದ ಬಾಗಿಲುವಾಡದ ಜಾಲಂದ್ರ

೬. ಅಮರಗೋಳ ಬನಶಂಕರಿ ದೇವಾಲಯದ ಸಭಾಮಂಟಪ

೭. ಅಮರಗೋಳ ಬನಶಂಕರಿ ದೇವಾಲಯದ ಸ್ಥಂಭದ ನೋಟ

೮. ಅಮರಗೋಳ ಬನಶಂಕರಿ ದೇವಾಲಯದ ಭುವನೇಶ್ವರಿ

೯. ಕೋಳಿವಾಡ ದತ್ತಾತ್ರೇಯ ದೇವಾಲಯದ ಬಾಗಿಲುವಾಡದ ಜಾಲಂದ್ರ

೧೦. ಅದರಗುಂಚಿ ದೊಡ್ಡೇಶ್ವರ ದೇವಾಲಯದ ಮುಂಭಾಗದ ನೋಟ

೧೧. ಕೋಳಿವಾಡ ಕಲ್ಮೇಶ್ವರ ದೇವಾಲಯದ ಮುಂಭಾಗದ ನೋಟ

೧೨. ಮಲ್ಲಿಗವಾಡ ಸೋಮೇಶ್ವರ ದೇವಾಲಯದ ಪಾಶ್ವನೋಟ

೧೩. ಮಲ್ಲಿಗವಾಡ ಸೋಮೇಶ್ವರ ದೇವಾಲಯದ ದ್ವಾರಪಟ್ಟಿಕೆ

೧೪. ಮಲ್ಲಿಗವಾಡ ಸೋಮೇಶ್ವರ ದೇವಾಲಯದ ಸಭಾಮಂಟಪ

೧೫. ನೂಲ್ವಿ ಕಲ್ಮೇಶ್ವರ ದೇವಾಲಯದ ಶಿವಲಿಂಗ

೧೬. ಮಲ್ಲಿಗವಾಡ ಸೋಮೇಶ್ವರ ದೇವಾಲಯದ ಶಿವಲಿಂಗ

೧೭. ನೂಲ್ವಿಯ ಆದಿಬಸವೇಶ್ವರ ದೇವಾಲಯದ ಶಿವಲಿಂಗ

೧೮. ಅಮರಗೋಳ ಬನಶಂಕರಿ ದೇವಾಲಯ ಸ್ಥಂಭದಲ್ಲಿನ ಶಿವತಾಂಡವ

೧೯. ಅಮರಗೋಳ ಬನಶಂಕರಿ ದೇವಾಲಯ ನಂದಿ

೨೦. ನಲವಡಿ ಹನುಮಪ್ಪ ದೇವಾಲಯದ ನಂದಿ

೨೧. ಇಂಗಳಹಳ್ಳಿ ಕಲ್ಮೇಶ್ವರ ದೇವಾಲಯದಲ್ಲಿನ ನಂದಿ

೨೨. ಸಿರಗುಪ್ಪಿ ಹನುಮಾನ ದೇವಾಲಯದ ಪಕ್ಕದಲ್ಲಿರುವ ಭೈರವ

೨೩. ನೂಲ್ವಿ ವೀರಭದ್ರ ದೇವಾಲಯದ ವೀರಭದ್ರ

೨೪. ಭಂಡಿವಾಡ ಮಲ್ಲಿಕಾರ್ಜುನ ದೇವಾಲಯದ ವೀರಭದ್ರ

೨೫. ಅದರಗುಂಚಿ ಕಲ್ಮೇಶ್ವರ ದೇವಾಲಯದ ಗಣಪತಿ

೨೬. ಭಂಡಿವಾಡ ಮಲ್ಲಿಕಾರ್ಜುನ ದೇವಾಲಯದ ಗಣಪತಿ

೨೭. ಮಲ್ಲಿಗವಾಡ ಸೋಮೇಶ್ವರ ದೇವಾಲಯದ ಎದುರುಗಡೆ ಇರುವ ಗಜಲಕ್ಷ್ಮಿ

೨೮. ಗಬ್ಬೂರು ಆಂಜನೇಯ ದೇವಾಲಯದಲ್ಲಿನ ಸಪ್ತಮಾತೃಕೆಯರು

೨೯. ಭಂಡಿವಾಡ ಮಲ್ಲಿಕಾರ್ಜುನ ದೇವಾಲಯದ ದುರ್ಗ

೩೦. ನೂಲ್ವಿ ಕಲ್ಮೇಶ್ವರ ದೇವಾಲಯದ ದೇವಿ

೩೧. ಇಂಗಳಹಳ್ಳಿ ಕಲ್ಮೇಶ್ವರ ದೇವಾಲಯದ ಜಂಗಿಮಾಳಮ್ಮ

೩೨. ಅಮರಗೊಳ ಬನಶಂಕರಿ ದೇವಾಲಯದಲ್ಲಿನ ಸ್ತಂಬದಲ್ಲಿನ ವರಾಹ

೩೩. ಅಮರಗೊಳ ಬನಶಂಕರಿ ದೇವಾಲಯದಲ್ಲಿನ ಸ್ತಂಬದಲ್ಲಿನ ಸುಖಾಸನದಲ್ಲಿ ಕುಳಿತ ವರಾಹ

೩೪. ಕೋಳಿವಾಡ ವೈಷ್ಣವ ದೇವಾಲಯದ ವಿಷ್ಣು

೩೫. ಕೋಳಿವಾಡ ಕಲ್ಮೇಶ್ವರ ದೇವಾಲಯದ ತಾರಾಭಗವತಿ

೩೬. ಅದರಗುಂಚಿ ದೊಡ್ಡೇಶ್ವರ ದೇವಾಲಯದಲ್ಲಿ ಪದ್ಮಾಸನದಲ್ಲಿದ್ದ ಜೈನ ತೀರ್ಥಂಕರ

೩೭. ಗಬ್ಬೂರು ಆಂಜನೇಯ ದೇವಾಲಯದ ಆವರಣದಲ್ಲಿನ ವೀರಗಲ್ಲು

೩೮. ಮಂಟೂರ ಹನುಮಂತ ದೇವಾಲಯದ ಎದುರುಗಡೆ ಇರುವ ವೀರಗಲ್ಲು



ಉಣಕಲ್ ಚಂದ್ರಮೌಳೇಶ್ವರ ದೇವಾಲಯದ ಮುಂಭಾಗದ ನೋಟ



ಉಣಕಲ್ ಚಂದ್ರಮೌಳೇಶ್ವರ ದೇವಾಲಯದ ಪಾರ್ಶ್ವ ನೋಟ







ಅಮರಗೋಳ ಬನಶಂಕರಿ ದೇವಾಲಯದ ಮುಂಭಾಗದ ನೋಟ



ಅಮರಗೋಳ ಬನಶಂಕರಿ ದೇವಾಲಯದ ಪಾರ್ಶ್ವ ನೋಟ







ಅಮರಗೋಳ ಬನಶಾಂಕರಿ ದೇವಾಲಯದ ಬಾಗಿಲುವಾಡದ ಜಾಲಂಧ್ರ



ಅಮರಗೋಳ ಬನಶಾಂಕರಿ ದೇವಾಲಯದ ಸಭಾ ಮಂಟಪ







ಅಮರಗೋಳ ಬನಶಾಂಕರಿ ದೇವಾಲಯದ ಸ್ಥಂಭದ ನೋಟ



ಅಮರಗೋಳ ಬನಶಾಂಕರಿ ದೇವಾಲಯದ ಭುವನೇಶ್ವರಿ







ಕೋಳಿವಾಡ ವೀರನಾರಾಯಣ ದೇವಾಲಯದ ಬಾಗಿಲುವಾಡದ ಜಾಲಂಧ್ರ



ಅದರಗುಂಚಿ ದೊಡ್ಡೇಶ್ವರ ದೇವಾಲಯದ ಮುಂಬಾಗದ ನೋಟ








ಕೋಟಿವಾಡ ಕಲ್ಮೇಶ್ವರ ದೇವಾಲಯದ ಮುಂಭಾಗದ ನೋಟ



ಮಲ್ಲಿಗವಾಡ ಸೋಮೇಶ್ವರ ದೇವಾಲಯದ ಸಭಾ ಮಂಟಪ






ಮಲ್ಲಿಗವಾಡ ಸೋಮೇಶ್ವರ ದೇವಾಲಯದ ಪಾರ್ಶ್ವ ನೋಟ


ಮಲ್ಲಿಗವಾಡ ಸೋಮೇಶ್ವರ ದೇವಾಲಯದ ದ್ವಾರ ಪಟ್ಟಿಕೆ



ನೂಲ್ವಿ ಕಲ್ಮೇಶ್ವರ ದೇವಾಲಯದಲ್ಲಿನ ಭುವನೇಶ್ವರಿ



ಮಲ್ಲಿಗವಾಡ ಸೋಮೇಶ್ವರ ದೇವಾಲಯದ ಶಿವಲಿಂಗ







ನೂಲ್ವಿಯ ಆದಿ ಬಸವೇಶ್ವರ ದೇವಾಲಯದಲ್ಲಿನ ಶಿವಲಿಂಗ



ಅಮರಗೋಳ ಬನಶಾಂಕರಿ ದೇವಾಲಯದ ಸ್ಥಂಭದಲ್ಲಿನ ಶಿವತಾಂಡವ







ಅಮರಗೋಳ ಬನಶಾಂಕರಿ ದೇವಾಲಯದಲ್ಲಿನ ನಂದಿ



ನಲವಡಿ ಹನುಮಪ್ಪ ದೇವಾಲಯದಲ್ಲಿನ ನಂದಿ







ಇಂಗಳಹಳ್ಳಿ ಕಲ್ಮೇಶ್ವರ ದೇವಾಲಯದ ನಂದಿ



ಶಿರಗುಪ್ಪಿ ಹನುಮಾನ ದೇವಾಲಯದ ಪಕ್ಕದಲ್ಲಿರುವ ಭೈರವ







ನೊಲ್ವಿ ವೀರಭದ್ರ ದೇವಾಲಯದ ವೀರಭದ್ರ



ಬಂಡಿವಾಡ ಮಲ್ಲಿಕಾರ್ಜುನ ದೇವಾಲಯದ ವೀರಭದ್ರ







ಅದರಗುಂಚಿ ಕಲ್ಮೇಶ್ವರ ದೇವಾಲಯದ ಗಣಪತಿ



ಬಂಡಿವಾಡ ಮಲ್ಲಿಕಾರ್ಜುನ ದೇವಾಲಯದ ಗಣಪತಿ







ಮಲ್ಲಿಗವಾಡ ಸೋಮೇಶ್ವರ ದೇವಾಲಯದ ಮುಂಭಾಗದಲ್ಲಿರು ಗಜಲಕ್ಷ್ಮಿ



ಗಬ್ಬೂರ ಆಂಜನೇಯ ದೇವಾಲಯದಲ್ಲಿನ ಸಪ್ತಮಾತೃಕೆಯರು







ಐಂಡಿವಾಡ ಮಲ್ಲಿಕಾರ್ಜುನ ದೇವಾಲಯದ ದುರ್ಗಾ




ನೂಲ್ವಿ ಕಲ್ಮೇಶ್ವರ ದೇವಾಲಯದ ದೇವಿ







ಇಂಗಳಹಳ್ಳಿ ಕಲ್ಮೇಶ್ವರ ದೇವಾಲಯದ ಜಂಗಿಮಾಳಮ್ಮ



ಅಮರಗೋಳ ಬನಶಾಂಕರಿ ದೇವಾಲಯದ ಸ್ತಂಭದಲ್ಲಿನ ನಿಂತವರಾಹ







ಅಮರಗೋಳ ಬನಶಂಕರಿ ದೇವಾಲಯದ ಸ್ತಂಭದಲ್ಲಿನ ಸುಬಾಸನದಲ್ಲಿ ಕಟಿತ ವರಾಹ



ಕೋಳಿವಾಡ ವೈಷ್ಣವ ದೇವಾಲಯದಲ್ಲಿನ ವಿಷ್ಣು ಮೂರ್ತಿ



ಕೋಳಿವಾಡ ಕಲ್ಮೇಶ್ವರ ದೇವಾಲಯದ ತಾರ ಭಗವತಿ



ಅದರಗುಂಚಿ ದೊಡ್ಡೇಶ್ವರ ದೇವಾಲಯದಲ್ಲಿನ
ಪದ್ಮಾಸನದಲ್ಲಿದ್ದ ಜೈನ ತೀರ್ಥಂಕರ







ಗಬ್ಬೂರ ಆಂಜನೇಯ ದೇವಾಲಯದ ಆವರಣದಲ್ಲಿನ ವೀರಗಲ್ಲು.



ಮಂಟೂರು ಹನುಮಂತ ದೇವಾಲಯದ ಎದುರುಗಡೆ ಇರುವ ವೀರಗಲ್ಲು.



